## ಅಧ್ಯಾಯ–೦೫

# ಕೈಗಾರಿಕೆಗಳು

ಚಾಮರಾಜನಗರ ಜಿಲ್ಲೆಯಲ್ಲಿ ಕೈಗಾರಿಕೆಯು ಪ್ರಧಾನವಾಗಿ ಕೃಷಿ ಮತ್ತು ಅರಣ್ಯ ಸಂಪನ್ಮೂಲಗಳನ್ನು ಅವಲಂಭಿಸಿದೆ. ಅಲ್ಲದೆ ಇತರ ಮೂಲಭೂತ ಸೌಲಭ್ಯಗಳಾದ ವಿದ್ಯುಚ್ಛಕ್ತಿ, ಕೈಗಾರಿಕಾ ಪ್ರದೇಶ, ಕೈಗಾರಿಕಾ ವಸಾಹತು, ಸಾರಿಗೆ–ಸಂಪರ್ಕ, ಮಾರುಕಟ್ಟೆ, ಹಣಕಾಸು, ಮಾನವ ಸಂಪನ್ಮೂಲ ಮೊದಲಾದವುಗಳು ಲಭ್ಯವಿದ್ದು, ೨೦೦೯–೧೪ ರ ಕೈಗಾರಿಕಾ ನೀತಿಯನ್ವಯ ಚಾಮರಾಜನಗರ ತಾ॥ ವಲಯ–೧ ರಲ್ಲಿದ್ದು, ಕೈಗಾರಿಕೆಯಲ್ಲಿ ಅತ್ಯಂತ ಹಿಂದುಳಿದ ತಾಲೂಕಾಗಿದೆ, ಹಾಗೆಯೇ ಗುಂಡ್ಲುಪೇಟೆ ಹಾಗೂ ಕೊಳ್ಳೇಗಾಲ ತಾಲೂಕುಗಳು ವಲಯ–೨ರ ವ್ಯಾಪ್ತಿಗೆ ಸೇರಿದ್ದು, ಕೈಗಾರಿಕೆಯಲ್ಲಿ ಅತೀ ಹಿಂದುಳಿದ ತಾಲೂಕುಗಳಾಗಿದ್ದಾರೆ, ಯಳಂದೂರು ತಾಲೂಕು ವಲಯ–೩ರ ವ್ಯಾಪ್ತಿಗೆ ಸೇರಿ ಕೈಗಾರಿಕೆಯಲ್ಲಿ ಹಿಂದುಳಿದ ತಾಲೂಕುಗಳ ವ್ಯಾಪ್ತಿಗೊಳಪಟ್ಟಿದೆ.

ರೇಷ್ಮೆ, ಶ್ರೀಗಂಧ ಮತ್ತು ಅರಣ್ಯ ಉತ್ಪನ್ನಗಳಿಗೆ ಹೆಸರುವಾಸಿಯಾಗಿರುವ ಈ ಜಿಲ್ಲೆಯು ೨೦೦೯–೧೦ರಲ್ಲಿ ೫,೬೯೯ ಚ.ಕಿ.ಮೀ ವಿಸ್ತೀರ್ಣ ಅಂದರೆ ೫,೬೯,೯೦೧ ಹೆಕ್ಟೇರ್ ಭೌಗೋಳಿಕ ವಿಸ್ತೀರ್ಣವನ್ನು ಹೊಂದಿದೆ. ಇದರಲ್ಲಿ ೨,೭೫,೬೧೦ ಹೆಕ್ಟೇರ್ ಅರಣ್ಯ ಪ್ರದೇಶ, ೨೪,೬೦೬ ಹೆಕ್ಟೇರ್ ವ್ಯವಸಾಹೇತರ ಭೂಮಿ, ೨೧,೪೩೪ ಬಂಜರು ಭೂಮಿ ಸೇರಿ ಒಟ್ಟು ೪೬,೦೪೦ ಹೆಕ್ಟೇರ್ ಪ್ರದೇಶ ಸಾಗುವಳಿಗೆ ಲಭ್ಯವಿಲ್ಲವಾಗಿದೆ. ಹಾಗೆಯೇ ೭೬೩೭ ಹೆಕ್ಟೇರ್ ಸಾಗುವಳಿಗೆ ಯೋಗ್ಯವಾದ ಬಂಜರು, ೨೨,೭೫೦ ಕಿ.ಮೀ. ಖಾಯಂ ಗೋಮಾಳ ಮತ್ತು ೪,೭೪೧ ಹೆಕ್ಟೇರ್ ವೃಕ್ಷ ಮತ್ತು ತೋಪುಗಳು ಸೇರಿ ಒಟ್ಟು ೩೪,೮೯ ಹೆಕ್ಟೇರ್ ಸಾಗುವಳಿ ಮಾಡದಿರುವ ಇತರೆ ಭೂಮಿಯಾಗಿದೆ. ೧೦,೭೦೮ ಹೆಕ್ಟೇರ್ ಚಾಲ್ತಿ ಬೀಳು ಹಾಗೂ ೧೫,೭೯ ಹೆಕ್ಟೇರ್ ಇತರೆ ಬೀಳು ಸೇರಿ ಒಟ್ಟು ೨೬,೫೦೭ ಹೆಕ್ಟೇರ್ ಬೀಳು ಭೂಮಿಯಾಗಿದೆ. ೧,೮೬,೬೧೬ ಹೆಕ್ಟೇರ್ ನಿವ್ವಳ ಬಿತ್ತನೆಯಾದ ಪ್ರದೇಶ ಹಾಗೂ ೩೬,೬೭೨ ಹೆಕ್ಟೇರ್ ಒಂದಕ್ಕಿಂತ ಹೆಚ್ಚು ಬಿತ್ತನೆಯಾದ ಪ್ರದೇಶವಾಗಿತ್ತು. ಒಟ್ಟು ೨,೨೫,೨೮೮ ಹೆ. ಬಿತ್ತನೆಯಾದ ಪ್ರದೇಶವಾಗಿತ್ತು. ಜಿಲ್ಲೆಯು ಸಾಮಾನ್ಯವಾಗಿ ಸಮಶೀತೋಷ್ಣದಿಂದ ಕೂಡಿರುತ್ತದೆ. ಇಲ್ಲಿನ ಶೇ. ೭೧.೧೮ ರಷ್ಟು ಜನರು ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿದ್ದು, ಕೃಷಿಯನ್ನು ಮುಖ್ಯ ಕಸುಬನ್ನಾಗಿಸಿಕೊಂಡಿರುವರು. ಇಲ್ಲಿ ಬೆಳೆಯುವ ಆಹಾರ ಬೆಳೆಗಳಲ್ಲಿ ಭತ್ತ, ರಾಗಿ, ಜೋಳ, ಮುಸುಕಿನ ಜೋಳ ಪ್ರಮುಖವಾಗಿದ್ದರೆ, ವಾಣಿಜ್ಯ ಬೆಳೆಗಳಲ್ಲಿ ನೆಲಗಡಲೆ, ಸೂರ್ಯಕಾಂತಿ ಮತ್ತು ಕಬ್ಬು ಪ್ರಧಾನವಾಗಿವೆ.

ಜಿಲ್ಲೆಯಲ್ಲಿ ೨೦೦೫–೦೬ರ ಕೃಷಿಗಣತಿಯಂತೆ ಒಟ್ಟು ೧,೯೭,೭೮೧ ಭೂ–ಹಿಡುವಳಿದಾರರಿದ್ದು, ಅವರಲ್ಲಿ ೧,೨೦,೦೨೮ (ಶೇ.೬೦.೯ ರಷ್ಟು) ಮಂದಿ ಅತಿಸಣ್ಣ ಭೂ–ಹಿಡುವಳಿದಾರರು ೫೩,೪೩೬ ಹೆಕ್ಟೇರ್

ವಿಸ್ತೀರ್ಣವನ್ನೂ; ೫೧,೯೬೭ (ಶೇ.೨೬.೨೮ರಷ್ಟು) ಮಂದಿ ಸಣ್ಣ ಭೂ–ಹಿಡುವಳಿದಾರರಿದ್ದು, ೭೨,೩೩೭ ಹೆಕ್ಟೇರ್ ವಿಸ್ತೀರ್ಣವನ್ನೂ; ೨೦,೬೩೧ (ಶೇ.೧೦.೪೩ರಷ್ಟು) ಮಂದಿ ಅರೆಮಧ್ಯಮ ಭೂ–ಹಿಡುವಳಿದಾರರು ೫೪, ೫೪೧ ಹೆಕ್ಟೇರ್ ವಿಸ್ತೀರ್ಣವನ್ನೂ; ೪,೮೦೪ (ಶೇ.೨.೪೩) ಮಂದಿ ಮಧ್ಯಮ ಭೂ–ಹಿಡುವಳಿದಾರರು ೨,೬೧೨ ಹೆಕ್ಟೇರ್ ವಿಸ್ತೀರ್ಣವನ್ನು ಹಾಗೂ ಕೇವಲ ೩೫೧ (ಶೇ.೧೭) ಮಂದಿ ದೊಡ್ಡ ಭೂ–ಹಿಡುವಳಿದಾರರು ೫,೨೩೩ ಹೆಕ್ಟೇರ್ ವಿಸ್ತೀರ್ಣವನ್ನು ಹೊಂದಿದ್ದರು. ಮೇಲಿನ ಅಂಕಿಅಂಶಗಳನ್ನು ಅವಲೋಕಿಸಿದಾಗ ಸಣ್ಣ ಹಿಡುವಳಿದಾರರ ಸಂಖ್ಯೆ ಹೆಚ್ಚಾಗಿರುವುದು ಗಮನಾರ್ಹವಾಗಿದೆ. ಜಿಲ್ಲೆಯಲ್ಲಿ ಮಳೆ ಪ್ರಮಾಣ ಕಡಿಮೆ ಇದ್ದು ವಾಡಿಕೆ ಮಳೆ ೮೧೬.೧ ಮಿ.ಮೀ ಆಗಿತ್ತು. ವಾಸ್ತವಿಕ ಮಳೆ ೨೦೧೦ರಲ್ಲಿ ೮೨೫ ಮಿ.ಮೀ ಆಗಿತ್ತು. ಮಳೆ ದಿನಗಳು ವಾಡಿಕೆ ೪೩ ದಿನಗಳಾಗಿದ್ದರೆ, ೨೦೦೯ ರಲ್ಲಿ ವಾಸ್ತವಿಕ ಮಳೆ ೫೦ ದಿನಗಳಾಗಿತ್ತು. ಜೊತೆಗೆ ನೀರಾವರಿ ಸೌಲಭ್ಯವು ಸಹ ಕಡಿಮೆ ಇದ್ದು ೨೦೦೯–೧೦ರಲ್ಲಿ ಕಾಲುವೆಯಿಂದ ೧೨೭೨೬ ಹೆ., ಬಾವಿಗಳಿಂದ ೪೯೫೧ ಹೆ., ಕೆರೆಗಳಿಂದ ೫೨೬೦ ಹೆ., ಕೊಳವೆ ಬಾವಿಗಳಿಂದ ೪೪,೩೦೨ ಹೆ., ಏತನೀರಾವರಿಯಿಂದ ೪೩೨ ಹೆ., ಹೀಗೆ ಒಟ್ಟು ೬೭,೬೭೧ ಹೆ. ಭೂಮಿಯು ನೀರಾವರಿ ಸೌಲಭ್ಯಕ್ಕೊಳಪಟ್ಟಿದೆ. ಜಿಲ್ಲೆಯು ಪ್ರಧಾನವಾಗಿ ಮರಳು ಮಿಶ್ರಿತ ಕೆಂಪು ಮಣ್ಣಿನ ಭೂಮಿ, ಫಲವತ್ತಾದ ಕೆಂಪು ಮಣ್ಣಿನ ಭೂಮಿ ಮತ್ತು ಮರಳು ಮಿಶ್ರಿತ ಕಪ್ಪು ಜೇಡಿಮಣ್ಣಿನ ಭೂಮಿಯಿಂದ ಕೂಡಿದೆ. ಇಲ್ಲಿನ ವಾತಾವರಣ ಮತ್ತು ಮಣ್ಣು ಹಿಪ್ಪುನೇರಳೆ ಬೆಳೆಗೆ ಪೂರಕವಾಗಿದ್ದು, ರೇಷ್ಮೆ ಕೈಗಾರಿಕಾ ಬೆಳವಣಿಗೆಗೆ ಸಹಕಾರಿಯಾಗಿವೆ.

ಕೈಗಾರಿಕಾ ಬೆಳವಣಿಗೆಗೆ ಪೂರಕವಾಗುವ ಖನಿಜಗಳು ಜಿಲ್ಲೆಯಲ್ಲಿ ಸಾದಾರಣ ಪ್ರಮಾಣದಲ್ಲಿ ದೊರಕುತಿದ್ದು, ಕಬ್ಬಿಣದ ಅದಿರು, ತಾಮ್ರ, ಕ್ಯಾನೈಟ್ ಮತ್ತು ಸಿಲ್ಲಿಮನೈಟ್, ಕಪ್ಪು ಗ್ಯಾನೈಟ್, ಕಟ್ಟಡದ ಕಲ್ಲು, ಸುಣ್ಣದ ಕಲ್ಲು, ಮರಳು. ಮ್ಯಾಗ್ನಸೈಟ್, ಕ್ವಾರ್ಟ್ಸ್ ಮುಂತಾದವು ಲಭ್ಯವಿವೆ. ಜಿಲ್ಲೆಯು ವಿಶಾಲವಾದ ಅರಣ್ಯ ಪ್ರದೇಶ ಹೊಂದಿದ್ದು, ಹೆಚ್ಚು ಬೆಲೆ ಬಾಳುವ ಶ್ರೀಗಂಧ, ತೇಗ, ಹೊನ್ನೆ, ಮತ್ತಿ ಮೊದಲಾದ ವನರಾಶಿಯಿಂದ ಕೂಡಿದೆ. ಇವು ಜಿಲ್ಲೆಯಲ್ಲಿ ಮರಕುಯ್ಯುವ ಮಿಲ್ಲುಗಳ ಸ್ಥಾಪನೆಗೆ, ಗುಡಿಗಾರರಿಗೆ, ಪೀಠೋಪಕರಣ ತಯಾರಿಕೆಗೆ, ಗೃಹ ನಿರ್ಮಾಣೋಪಯೋಗಿ ಸರಕುಗಳಾದ ಕಿಟಕಿ ಬಾಗಿಲುಗಳಿಗೆ ಬೇಕಾಗುವ ಮರ ಮುಟ್ಟುಗಳನ್ನೊದಗಿಸುವುದರ ಮೂಲಕ ಜಿಲ್ಲಾ ಕೈಗಾರಿಕಾ ಬೆಳವಣಿಗೆಗೆ ಪೂರಕವಾಗಿವೆ.

ಜಿಲ್ಲೆಯಲ್ಲಿ ೩೧–೩–೨೦೧೦ರಲ್ಲಿ ೧೪.೨ ಕಿ.ಮೀ. ಬ್ರಾಡ್ ಗೇಜ್ ರೈಲು ಮಾರ್ಗವಿದ್ದು, ಎರಡು ರೈಲ್ವೆ ನಿಲ್ದಾಣಗಳಿವೆ. ೧೮೭ ಕಿ.ಮೀ ರಾಷ್ಟ್ರೀಯ ಹೆದ್ದಾರಿ, ೩೩೯.೨೬ ಕಿ.ಮೀ. ರಾಜ್ಯ ಹೆದ್ದಾರಿ, ೯೯೪ಕಿ.ಮೀ ಮುಖ್ಯ ಜಿಲ್ಲಾ ರಸ್ತೆಗಳು, ೨,೧೧೬.೮೩ ಕಿ.ಮೀ. ಹಳ್ಳಿ ರಸ್ತೆಗಳು ೨೩೬.೭೧ ಕಿ.ಮೀ. ಮುನಿಸಿಪಾಲಿಟಿ ರಸ್ತೆಗಳು, ೨೯೦ ಕಿ.ಮೀ ನೀರಾವರಿ ಇಲಾಖಾ ರಸ್ತೆಗಳು, ೪೮೬.೭೯ ಕಿ.ಮೀ ಅರಣ್ಯ ರಸ್ತೆಗಳು ಇದ್ದು, ಜನರ ಹಾಗೂ ಸರಕು ಸಾಗಣೆ ಸೌಲಭ್ಯವನ್ನೊದಗಿಸಿದ್ದವು. ಜಿಲ್ಲೆಯ ಸಂಪರ್ಕ ಸೌಲಭ್ಯಕ್ಕೆ ೨೦೩ ಅಂಚೆ ಕಛೇರಿಗಳು, ೪೪ ದೂರವಾಣಿ ವಿನಿಮಯ ಕೇಂದ್ರಗಳು ಮತ್ತು ೧೧೨೭೪ ದೂರವಾಣಿಗಳು ಸಂಪರ್ಕದಲ್ಲಿದ್ದವು.

ಜಿಲ್ಲೆಯಲ್ಲಿ ೨೦೦೯–೧೦ರಲ್ಲಿ ಒಂದು ಪಾಲಿಟೆಕ್ನಿಕ್ ಕಾಲೇಜು, ಒಂದು ಇಂಜಿನಿಯರಿಂಗ್ ಕಾಲೇಜು, ೧೫ ಸಾಮಾನ್ಯ ಪದವಿ ಕಾಲೇಜುಗಳು, ೫೪ ಪದವಿ ಪೂರ್ವ ಕಾಲೇಜುಗಳು, ೧೮೮ ಪ್ರೌಢಶಾಲೆಗಳು ಮತ್ತು ೯೦೭ ಪ್ರಾಥಮಿಕ ಶಾಲೆಗಳು ಕೈಗಾರಿಕಾ ಬೆಳವಣಿಗೆಗೆ ಬೇಕಾಗುವ ತಾಂತ್ರಿಕ ಮತ್ತು ವಿದ್ಯಾವಂತ ಮಾನವ ಸಂಪನ್ಮೂಲವನ್ನು ಪೂರೈಕೆ ಮಾಡುತ್ತಿವೆ. ಜಿಲ್ಲೆಯಲ್ಲಿ ಒಂದು ಉದ್ಯೋಗ ವಿನಿಮಯ ಕೇಂದ್ರವಿದ್ದು, ೨೦೦೯–೧೦ರಲ್ಲಿ ನೋಂದಣಿಗೊಂಡ ಉದ್ಯೋಗಾಕಾಂಕ್ಷಿಗಳಲ್ಲಿ ಮೆಟ್ರಿಕ್ಯೂಲೇಷನ್‌ಗಿಂತ ಕಡಿಮೆ ಓದಿದವರು ೭೦೯, ಮೆಟ್ರಿಕ್ಯುಲೇಷನ್ ಆದವರು ೪೨೯೧, ಪದವಿ ಪೂರ್ವ ಶಿಕ್ಷಣ ಪಡೆದವರು ೨೪೩೯, ಬಿ.ಎ. ಪದವೀಧರರು ೪೭೯, ಬಿಕಾಂ ಪದವೀಧರರು ೧೪೯, ಬಿ.ಎಸ್.ಸಿ. ಪದವೀಧರರು ೧೧೦ ಮತ್ತು ಶೀಘ್ರಲಿಪಿಗಾರರು ಐದು.

ಇವುಗಳ ಜೊತೆಗೆ ಕೈಗಾರಿಕಾ ತರಬೇತಿ ಸಂಸ್ಥೆ ಮತ್ತು ಕುಶಲಕರ್ಮಿ ತರಬೇತಿ ಸಂಸ್ಥೆಗಳಿಂದ ತರಬೇತಿ ಪಡೆದ ಉದ್ಯೋಗಾಕಾಂಕ್ಷಿಗಳು ಜಿಲ್ಲೆಯಲ್ಲಿ ಸಾಕಷ್ಟಿದ್ದು, ಜಿಲ್ಲೆಯ ಕೈಗಾರಿಕೆಗಳಿಗೆ ಬೇಕಾಗಿರುವ ಕಾರ್ಮಿಕರ ಕೊರತೆಯನ್ನು ನೀಗಿಸಿ ಅವುಗಳ ಬೆಳವಣಿಗೆಗೆ ಸಹಕಾರಿಯಾಗಿದೆ. ೨೦೦೧ರ ಜನಗಣತಿಯ ಪ್ರಕಾರ ಜಿಲ್ಲೆಯ ೯,೬೫,೪೬೨ ಒಟ್ಟು ಜನಸಂಖ್ಯೆಯಲ್ಲಿ ೪,೪೮,೩೬೯ ಒಟ್ಟು ಕೆಲಸಗಾರರು ಹಾಗೂ ೫,೧೭,೦೯೩ ಕೆಲಸಗಾರರಲ್ಲದವರಿದ್ದರು. ಜಿಲ್ಲೆಯ ಒಟ್ಟು ಜನಸಂಖ್ಯೆಯಲ್ಲಿ ೪,೩೨,೭೦೦ ಮಂದಿ ಅಕ್ಷರಸ್ಥರು, ೧,೧೪,೯೩೭ ಮಂದಿ ಆರು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿದ್ದರು. ೪,೪೮,೩೬೯ ಮಂದಿ ಒಟ್ಟು ಕೆಲಸಗಾರರಲ್ಲಿ ೩,೩೬,೯೬೧ ಮುಖ್ಯ ಕೆಲಸಗಾರರು, ೧,೧೧,೪೦೮ ಸೀಮಾಂತ (ಮಾರ್ಜಿನಲ್) ಕೆಲಸಗಾರರು ಸೇರಿದ್ದರು. ೩,೩೬,೯೬೧ ಮಂದಿ ಮುಖ್ಯ ಕೆಲಸಗಾರರಲ್ಲಿ ೧,೧೬,೬೬೦ ಮಂದಿ ಕೃಷಿ ಸಾಗುವಳಿದಾರರು, ೧,೧೨,೨೮೯ ಮಂದಿ ಕೃಷಿ ಕಾರ್ಮಿಕರು, ೧೪,೨೮೧ ಮಂದಿ ಗೃಹ ಕೈಗಾರಿಕೆಗಳಲ್ಲಿ ಹಾಗೂ ೯೩,೭೩೧ ಇತರೆ ಕೆಲಸಗಾರರಿದ್ದರು. ೧,೧೧,೪೦೮ ಮಂದಿ ಸೀಮಾಂತ ಕೆಲಸಗಾರರಿದ್ದು ಇವರಲ್ಲಿ ೭,೬೫೨ ಮಂದಿ ಕೃಷಿ ಸಾಗುವಳಿದಾರರು, ೮೦,೬೮೯ ಮಂದಿ ಕೃಷಿ ಕಾರ್ಮಿಕರು, ೫,೩೧೩ ಗೃಹ ಕೈಗಾರಿಕಾ ಕೆಲಸಗಾರರು ಹಾಗೂ ೧೭,೭೫೪ ಮಂದಿ ಇತರೆ ಕೆಲಸಗಾರರು ಸೇರಿದ್ದರು. ಕೃಷಿ ಅವಲಂಭಿತ ಕಾರ್ಮಿಕರ ಸಂಖ್ಯೆ ಅಧಿಕವಾಗಿರುವುದರಿಂದ ಅವರ ಆದಾಯದ ಮಟ್ಟ ಬಹಳ ಕಡಿಮೆಯಾಗಿರುವುದು. ಕೈಗಾರಿಕಾ ಕ್ಷೇತ್ರದಲ್ಲಿ ಉದ್ಯೋಗ ಕಲ್ಪಿಸುವುದರ ಮೂಲಕ ಅವರ ಆದಾಯ ಮಟ್ಟವನ್ನು ಹೆಚ್ಚಿಸುವುದರ ಜೊತೆಗೆ ಕೈಗಾರಿಕಾ ಬೆಳವಣಿಗೆಯನ್ನು ಸಾಧಿಸಬಹುದಾಗಿದೆ.

ಜಿಲ್ಲೆಯಲ್ಲಿ ೨೦೦೯-೧೦ರಲ್ಲಿ ೪೫ ವಾಣಿಜ್ಯ ಬ್ಯಾಂಕುಗಳು, ೨೨ ಗ್ರಾಮೀಣ ಬ್ಯಾಂಕುಗಳು, ೦೮ ಸಹಕಾರಿ ಬ್ಯಾಂಕುಗಳಿದ್ದು, ₹ ೮೧೭೧೩.೨೪ ಲಕ್ಷ ಠೇವಣಿ ಸಂಗ್ರಹಿಸಿ, ₹ ೭೭೬೪೫.೧೩ ಲಕ್ಷ ಸಾಲ ನೀಡುವುದರ ಮೂಲಕ ಕೈಗಾರಿಕೆಗಳ ಬೆಳವಣಿಗೆಗೆ ನೆರವನ್ನೊದಗಿಸುತ್ತಿವೆ. ಮೈಸೂರಿನಲ್ಲಿರುವ ಕರ್ನಾಟಕ ಸ್ಟೇಟ್ ಫೈನಾನ್ಸ್ ಕಾರ್ಪೋರೇಷನ್ ಶಾಖೆಯು ಜಿಲ್ಲೆಯ ಕೈಗಾರಿಕಾ ಘಟಕಗಳಿಗೆ ಘಟಕ ಒಂದಕ್ಕೆ ₹ ೬೦.೦೦ ಲಕ್ಷದವರೆಗೆ ಸ್ಥಿರ ಬಂಡವಾಳ ಹೂಡಲು ಆರ್ಥಿಕ ನೆರವನ್ನು ನೀಡುತ್ತಿದೆ. ಅತಿ ಸಣ್ಣ ಕೈಗಾರಿಕೆಗಳು ಸಹ ಇದರ ನೆರವನ್ನು ಪಡೆಯುತ್ತಿವೆ. ಕರ್ನಾಟಕ ಸ್ಟೇಟ್ ಇಂಡಸ್ಟ್ರೀಯಲ್ ಇನ್ವೆಸ್ಟಮೆಂಟ್ ಅಂಡ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ಮಧ್ಯಮ ಮತ್ತು ಬೃಹತ್ ಪ್ರಮಾಣದ ಕೈಗಾರಿಕೆಗಳಿಗೆ ಹಣಕಾಸಿನ ನೆರವನ್ನೊದಗಿಸುತ್ತದೆ. ದಿ ಇಂಡಸ್ಟ್ರೀಯಲ್ ಫೈನಾನ್ಸ್ ಕಾರ್ಪೋರೇಷನ್ ಆಫ್ ಇಂಡಿಯಾ ಕೈಗಾರಿಕಾ ಬೆಳವಣಿಗೆಗೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ಸಹಾಯಧನ ಮತ್ತು ಸಹಕಾರ ನೆರವಿನ ಯೋಜನೆಗಳನ್ನು ರೂಪಿಸಿದೆ.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಮತ್ತು ಕರ್ನಾಟಕ ಸಣ್ಣ ಕೈಗಾರಿಕಾಭಿವೃದ್ಧಿ ನಿಗಮಗಳು ಜಿಲ್ಲೆಯ ಕೊಳ್ಳೇಗಾಲ ತಾಲೂಕಿನ ಸತ್ಯಗಾಲ ಮತ್ತು ಕುಂತೂರುಗಳಲ್ಲಿ ಕೈಗಾರಿಕಾ ಕ್ಷೇತ್ರಗಳನ್ನು ನಿರ್ಮಿಸಿ ಕೈಗಾರಿಕೋದ್ಯಮಿಗಳಿಗೆ ಒದಗಿಸಿವೆ. ಕರ್ನಾಟಕ ಕೈಗಾರಿಕಾ ಅಭಿವೃದ್ಧಿ ಮಂಡಳಿಯು ಕೊಳ್ಳೇಗಾಲದಲ್ಲಿ ಕೈಗಾರಿಕಾ ವಸಾಹತುವನ್ನು ನಿರ್ಮಿಸಿ ಸಣ್ಣ ಕೈಗಾರಿಕೋದ್ಯಮಿಗಳಿಗೆ ವಿತರಿಸಿದೆ. ಜಿಲ್ಲೆಯು ಪೂರ್ವಕ್ಕಿರುವ ತಮಿಳುನಾಡಿನ ಸೇಲಂ ಮತ್ತು ಕೊಯಮತ್ತೂರು ಜಿಲ್ಲೆಗಳು, ಉತ್ತರಕ್ಕಿರುವ ರಾಜ್ಯದ ಮಂಡ್ಯ ಮತ್ತು ಬೆಂಗಳೂರು ಜಿಲ್ಲೆಗಳು, ಪಶ್ಚಿಮಕ್ಕಿರುವ ಮೈಸೂರು ಜಿಲ್ಲೆ, ದಕ್ಷಿಣಕ್ಕೆ ತಮಿಳುನಾಡಿನ ನೀಲಗಿರಿ ಜಿಲ್ಲೆಗಳಿಂದ ಸುತ್ತುವರಿಯಲ್ಪಟ್ಟಿರುವುದರಿಂದ ಉತ್ತಮ ಮಾರುಕಟ್ಟೆ ಸೌಲಭ್ಯವನ್ನು ಹೊಂದಿದೆ. ಜಿಲ್ಲೆಯ ಕೃಷಿ ಆಧಾರಿತ ಕೈಗಾರಿಕೆಗಳಲ್ಲಿ ರೇಷ್ಮೆ ಪ್ರಧಾನವಾಗಿದ್ದು, ರಾಜ್ಯದ ಸಿಲ್ಕ್ ಬೋರ್ಡ್ ನೆರವಿನೊಂದಿಗೆ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಾರುಕಟ್ಟೆಯ ಸೌಲಭ್ಯವನ್ನು ಪಡೆದುಕೊಂಡಿದೆ. ಎಣ್ಣೆ ಉತ್ಪಾದನೆಯು ಸ್ಥಳೀಯ ಮತ್ತು ಅಕ್ಕಪಕ್ಕದ ರಾಜ್ಯಗಳಾದ ತಮಿಳುನಾಡು ಹಾಗೂ ಕೇರಳಗಳ ಮಾರುಕಟ್ಟೆ ಸೌಲಭ್ಯ ಪಡೆದುಕೊಂಡಿದೆ. ಇಂಜಿನಿಯರಿಂಗ್ ಉತ್ಪನ್ನಗಳು, ಟೆಕ್ಸಟೈಲ್ಸ್, ಚರ್ಮೋದ್ಯಮ, ಆಟೋಮೊಬೈಲ್, ಪೇಪರ್ ಮತ್ತು ಪ್ರಿಂಟಿಂಗ್ ಉತ್ಪನ್ನಗಳು ಸ್ಥಳೀಯ ಮಾರುಕಟ್ಟೆ ಮತ್ತು ತಮಿಳುನಾಡು ಹಾಗೂ ಕೇರಳ ಮಾರುಕಟ್ಟೆ ಸೌಲಭ್ಯವನ್ನು ಹೊಂದಿವೆ.

ಜಿಲ್ಲೆಯಲ್ಲಿ ಕೃಷಿ ಮತ್ತು ಅರಣ್ಯ ಆಧಾರಿತ ಕೈಗಾರಿಕೆಗಳ ಬೆಳವಣಿಗೆಗೆ ವಿಪುಲ ಅವಕಾಶವಿದ್ದರೂ ದಕ್ಷ ಉದ್ದಿಮೆದಾರರ ಕೊರತೆಯಿಂದಾಗಿ ಕೈಗಾರಿಕಾ ಬೆಳವಣಿಗೆಯಲ್ಲಿ ಕುಂದುಂಟಾಗಿದೆ. ಕರ್ನಾಟಕ ಸರ್ಕಾರದ ನೂತನ ಕೈಗಾರಿಕಾ ನೀತಿ (೨೦೦೯-೨೦೧೪)ರ ಪ್ರಕಾರ ಜಿಲ್ಲೆಯ ಚಾಮರಾಜನಗರ ತಾಲೂಕು ವಲಯ-೧ರ ವ್ಯಾಪ್ತಿಗೆ ಸೇರಿದ್ದು, ಕೈಗಾರಿಕೆಯಲ್ಲಿ ಅತ್ಯಂತ ಹಿಂದುಳಿದಿದೆಯೆಂದು, ಗುಂಡ್ಲುಪೇಟೆ ಮತ್ತು ಕೊಳ್ಳೇಗಾಲ ತಾಲೂಕುಗಳು ವಲಯ-೨ಕ್ಕೆ ಸೇರಿ ಕೈಗಾರಿಕಯಲ್ಲಿ ಅತೀ ಹಿಂದುಳಿದಿವೆಯೆಂದು ಮತ್ತು ಯಳಂದೂರು ತಾಲೂಕು ವಲಯ-೩ ರ ವ್ಯಾಪ್ತಿಗೆ ಸೇರಿ, ಕೈಗಾರಿಕೆಯಲ್ಲಿ ಹಿಂದುಳಿದೆಯೆಂದು ಪರಿಗಣಿಸಿ ಜಿಲ್ಲೆಯ ಕೈಗಾರಿಕಾ ಬೆಳವಣಿಗೆಗೆ ಅನುಕೂಲವಾಗುವ ರಿಯಾಯಿತಿ ಮತ್ತು ಸವಲತ್ತುಗಳ ಸೌಲಭ್ಯ ಘೋಷಿಸಲ್ಪಟ್ಟಿರುವುದು. ಗ್ರಾಮಾಂತರ ಪ್ರದೇಶಗಳಲ್ಲಿ ತೀವ್ರಗತಿಯ ಕೈಗಾರಿಕಾಭಿವೃದ್ಧಿ ಮಾಡಬೇಕೆಂಬ ಕೇಂದ್ರ ಸರ್ಕಾರದ ಕೈಗಾರಿಕಾ ನೀತಿಗನುಗುಣವಾಗಿ ಸ್ಥಾಪಿತವಾಗಿರುವ ಜಿಲ್ಲಾ ಕೈಗಾರಿಕಾ ಕೇಂದ್ರ, ಕೈಗಾರಿಕೋದ್ಯಮಿಗಳಿಗೆ ಬೇಕಾಗುವ ಅನೇಕ ಸೌಲಭ್ಯಗಳನ್ನು ಒಂದೇ ನೆಲೆಯಲ್ಲಿ ಪಡೆಯಲು ಮತ್ತು ರೋಗಪೀಡಿತ ಘಟಕಗಳನ್ನು ಜೀರ್ಣೋದ್ಧಾರಗೊಳಿಸಲು ನೆರವನ್ನೊದಗಿಸುತ್ತಿದೆ.

## ಪಾರಂಪರಿಕ ಕೈಗಾರಿಕೆಗಳು

ಕೆಲವು ಕೈಗಾರಿಕೆಗಳು ಜಿಲ್ಲೆಯಲ್ಲಿ ವಂಶ ಪಾರಂಪರ್ಯವಾಗಿದ್ದು, ಬಹಳ ಹಿಂದಿನಿಂದಲೂ ಮುಂದುವರಿದು ಕೊಂಡು ಬಂದಿವೆ. ಕುಂಬಾರಿಕೆ, ಕಮ್ಮಾರಿಕೆ, ಗಾಣಗಳಿಂದ ಎಣ್ಣೆ ತೆಗೆಯುವುದು, ಚರ್ಮೋದ್ಯಮ, ಬಿದಿರು ಮತ್ತು ಈಚಲುಗರಿಗಳಿಂದ ಬುಟ್ಟಿ ಮತ್ತು ಚಾಪೆ ಹೆಣೆಯುವುದು. ಚಿನ್ನ, ಬೆಳ್ಳಿ ಮತ್ತು ಲೋಹಗಳಿಂದ ಒಡವೆ ಮತ್ತು ಪಾತ್ರೆಗಳನ್ನು ತಯಾರಿಸುವುದು ಮೊದಲಾದವು ಬಹಳ ಹಿಂದಿನಿಂದಲೂ ವಂಶ ಪಾರಂಪರ್ಯ ಉದ್ಯಮವಾಗಿದ್ದು, ಅವುಗಳಿಂದಲೇ ಕುಂಬಾರ, ಕಮ್ಮಾರ, ಗಾಣಿಗ, ಮೋಚಿ, ಮೇದರು, ಅಕ್ಕಸಾಲಿಗ, ಕಂಚುಗಾರ ಮೊದಲಾದ ಜಾತಿಗಳು ಹುಟ್ಟಿಕೊಂಡಿವೆ. ಜಿಲ್ಲೆಯಲ್ಲಿ ರೇಷ್ಮೆಕೃಷಿ ಮತ್ತು ಕೈಗಾರಿಕೆಯ ಬೆಳವಣಿಗೆಯು ೧೮ನೇ ಶತಮಾನದ ಉತ್ತರಾರ್ಧದಿಂದ ಪ್ರಾರಂಭವಾಗಿರುವುದನ್ನು ಕಾಣಬಹುದು. ಟಿಪ್ಪು ಸುಲ್ತಾನ ತನ್ನ ರಾಜ್ಯದ ದಕ್ಷಿಣ ಭಾಗದಲ್ಲಿ ರೇಷ್ಮೆ ಕೃಷಿ ಹಾಗೂ ರೇಷ್ಮೆ ಕೈಗಾರಿಕೆಯನ್ನು ಅಭಿವೃದ್ಧಿಪಡಿಸುವುದಕ್ಕಾಗಿ ತನ್ನ ಪ್ರತಿನಿಧಿಗಳನ್ನು ಪ್ರಪಂಚದ ಎಲ್ಲಾ ಭಾಗಗಳಿಗೂ ಕಳುಹಿಸಿ ಉತ್ತಮ ತಳಿಯ ರೇಷ್ಮೆ ಹುಳು ಮತ್ತು ಹಿಪ್ಪುನೇರಳೆಯನ್ನು ಸಂಗ್ರಹಿಸಿದುದೇ ಅಲ್ಲದೆ ಅಂತಿಮವಾಗಿ ದಕ್ಷಿಣ ಚೀನಾದಿಂದ ಪಡೆಯಲಾಗಿದ್ದ ಹಳದಿ ರೇಷ್ಮೆಗೂಡನ್ನು ಉತ್ಪಾದಿಸುವ ತಳಿಯು ತನ್ನ ರಾಜ್ಯಕ್ಕೆ ಹೊಂದಿಕೊಳ್ಳುವುದೆಂದು ಸಂಶೋಧನೆಯ ಮೂಲಕ ದೃಢೀಕರಿಸಿಕೊಂಡು ಅದರ ಬೆಳವಣಿಗೆಗೆ ಪ್ರೋತ್ಸಾಹಿಸಿದನು. ಇಟಲಿ ಮತ್ತು ಚೀನಾದಿಂದ ಪರಿಣತರನ್ನು ಕರೆತಂದು ರಾಜ್ಯದಲ್ಲಿ ರೇಷ್ಮೆ ಉತ್ಪಾದನೆಯನ್ನು ಹೆಚ್ಚಿಸಿದುದೇ ಅಲ್ಲದೆ ವಿಶ್ವ ಮಾರುಕಟ್ಟೆಯಲ್ಲಿ ತನ್ನ ರಾಜ್ಯದ ರೇಷ್ಮೆಗೆ ತನ್ನದೇ ಆದ ಪ್ರಾಮುಖ್ಯತೆ ಮತ್ತು ಬೇಡಿಕೆ ದೊರಕುವಂತೆ ಮಾಡಿದ ಕೀರ್ತಿ ಟಿಪ್ಪುಸುಲ್ತಾನನಿಗೆ ಸಲ್ಲುತ್ತದೆ. ರೇಷ್ಮೆ ಕೃಷಿ ಮತ್ತು ಉದ್ಯಮವು ಜಿಲ್ಲೆಯ ಬಹುಸಂಖ್ಯಾತ ಜನರ ಸಾಂಪ್ರದಾಯಿಕ ಉದ್ಯಮವಾಗಿದೆ. ಕೊಯಮತ್ತೂರು ಮ್ಯಾನ್ಯುಯಲ್ ಪ್ರಕಾರ ಕೊಳ್ಳೇಗಾಲ ತಾಲೂಕೊಂದರಲ್ಲೇ ೧೮೮೨ರಲ್ಲಿ ೩೬೩ ಎಕರೆ ಪ್ರದೇಶದಲ್ಲಿ ಹಿಪ್ಪುನೇರಳೆಯನ್ನು ಬೆಳೆಯಲಾಗಿತ್ತು. ರಾಟೆಗಳಿಂದ ನೂಲು ತೆಗೆಯುವುದು ಮತ್ತು ಕೈಮಗ್ಗಗಳಿಂದ ನೇಯುವುದು. ಇಲ್ಲಿನ ಕೆಲವು ಜನಾಂಗಗಳ ಮುಖ್ಯ ಕಸುಬಾಗಿತ್ತು. ದೇವಾಂಗರು, ಕೈಕೊಳ, ಮೊದಲಿಯರ್ ಮೊದಲಾದವರು ಈ ಉದ್ಯಮವನ್ನು ಅವಲಂಭಿಸಿದ್ದವರಲ್ಲಿ ಪ್ರಮುಖರು. ಸ್ವಾತಂತ್ರ್ಯಕ್ಕೂ ಪೂರ್ವದಲ್ಲಿ ಧರ್ಮಪುರಂ ಮತ್ತು ಕೊಯಮತ್ತೂರು ರೇಷ್ಮೆ ಮಿಲ್ಲುಗಳಿಗೆ ಕೊಳ್ಳೇಗಾಲವೊಂದರಿಂದಲೇ ರೇಷ್ಮೆ ಪೂರೈಕೆಯಾಗುತ್ತಿತ್ತು ಎಂಬುದನ್ನು ಕೊಯಮತ್ತೂರು ಜಿಲ್ಲಾ ಗ್ಯಾಸೆಟಿಯರ್‌ನಿಂದ ತಿಳಿಯಬಹುದಾಗಿದೆ.

ಕೊಳ್ಳೇಗಾಲದಲ್ಲಿನ ದಿ ಸಿಲ್ಕ್ ಫಿಲೇಚರ್ ೧೯೩೫ರಲ್ಲಿ ಖಾಸಗಿಯವರಿಂದ ಬೆಂಗಳೂರಿನಲ್ಲಿ ಪ್ರಾರಂಭಗೊಂಡು ೧೯೩೭ರಲ್ಲಿ ಕೊಳ್ಳೇಗಾಲಕ್ಕೆ ವರ್ಗಾವಣೆಗೊಂಡು ೧೯೪೫ರಲ್ಲಿ ರಾಜ್ಯ ಘಟಕವಾಯಿತು.

ಎರಡನೇ ವಿಶ್ವ ಯುದ್ಧದ ಸಮಯದಲ್ಲಿ ಮದರಾಸು (ಈಗಿನ ತಮಿಳುನಾಡು) ಸರ್ಕಾರವು ಇದನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಂಡು ಪ್ಯಾರಾಚೂಟಿಗೆ ಬೇಕಾಗುವ ಸಿಲ್ಕ್ ದಾರವನ್ನು ತಯಾರಿಸಲು ಬಳಸಿಕೊಂಡಿತು. ರಾಜ್ಯ ಪುನರ್ ವಿಂಗಡಣೆಯಾದಾಗ (೧೯೫೬) ಇದು ಕರ್ನಾಟಕಕ್ಕೆ ಸೇರಿತು. ಮುಡಿಗುಂಡಂನ ರೇಷ್ಮೆ ನೂಲು ಮತ್ತು ನೇಯ್ಗೆ ಕಾರ್ಖಾನೆ ಮತ್ತು ಮಾಂಬಳ್ಳಿಯ ಸಿಲ್ಕ್ ಫಿಲೇಚರ್‌ಗಳು ೧೯೩೭ರಲ್ಲಿ ಆರಂಭಗೊಂಡು, ೧೯೭೦–೭೧ರ ವರೆಗೆ ಕೊಳ್ಳೇಗಾಲದ ಸಿಲ್ಕ್ ಫಿಲೇಚರ್‌ನ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಆನಂತರ ಸ್ವತಂತ್ರವಾದವು. ಚಾಮರಾಜನಗರ ಮತ್ತು ಸಂತೆಮಾರಳ್ಳಿ ಫಿಲೇಚರ್‌ಗಳು, ೧೯೨೧ರಲ್ಲಿ ಪ್ರಾರಂಭಗೊಂಡ ಸರ್ಕಾರಿ ಸಿಲ್ಕ್ ಫಿಲೇಚರ್‌ನ ಪೂರಕ ಫಿಲೇಚರ್‌ಗಳಾಗಿ ೧೯೭೦–೭೧ರ ವರೆಗೆ ಕಾರ್ಯನಿರ್ವಹಿಸುತ್ತಿದ್ದವು.

## ಆಧುನಿಕ ಕೈಗಾರಿಕೆಗಳು

ರಾಜ್ಯದ ಆರ್ಥಿಕ ಸ್ಥಿತಿಗತಿಯನ್ನು ತಿಳಿಯುವ ಸಲುವಾಗಿ ೧೯೧೧ರಲ್ಲಿ ನಡೆದ ಮೈಸೂರಿನ ಆರ್ಥಿಕ ಸಮ್ಮೇಳನದಲ್ಲಿ ರಾಜ್ಯದ ಕೈಗಾರಿಕೆ ಮತ್ತು ವಾಣಿಜ್ಯದ ಬೆಳವಣಿಗೆಗೆ ಸಂಬಂಧಿಸಿದಂತೆ ಅನೇಕ ತೀರ್ಮಾನವನ್ನು ತೆಗೆದುಕೊಂಡು ಅವುಗಳನ್ನು ಅನುಷ್ಠಾನಗೊಳಿಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡಿದುದರ ಪರಿಣಾಮವಾಗಿ ೧೯೧೩ರಲ್ಲಿ ರಾಜ್ಯದ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಹಾಗೂ ರೇಷ್ಮೆ ಇಲಾಖೆ ಪ್ರಾರಂಭಗೊಂಡವು. ಇವುಗಳ ನೆರವು ಮತ್ತು ಪ್ರೋತ್ಸಹದಿಂದಾಗಿ ಅನೇಕ ಹೊಸ ಹೊಸ ಕಾರ್ಖಾನೆಗಳು ಹುಟ್ಟಿಕೊಂಡವು. ಜಿಲ್ಲೆಯ ಚಾಮರಾಜನಗರ ಮತ್ತು ಸಂತೆಮಾರಳ್ಳಿ ಫಿಲೇಚರ್‌ಗಳು ೧೯೨೧ರಲ್ಲಿ ಪ್ರಾರಂಭಗೊಂಡು ೧೯೭೦–೭೧ರ ವರೆಗೆ ಮೈಸೂರಿನ ಗೌರ್ನಮೆಂಟ್ ಸಿಲ್ಕ್ ಫ್ಯಾಕ್ಟರಿಗೆ ಪೂರಕ ಫಿಲೇಚರ್‌ಗಳಾಗಿ ಕಾರ್ಯನಿರ್ವಹಿಸುತ್ತಿದ್ದು, ಆನಂತರ ಸ್ವತಂತ್ರ ಫಿಲೇಚರ್‌ಗಳಾದವು. ಕೊಳ್ಳೇಗಾಲದ ಸರ್ಕಾರಿ ರೇಷ್ಮೆ ಕಾರ್ಖಾನೆ ೧೯೩೭ರಲ್ಲಿ ಪ್ರಾರಂಭಗೊಂಡು ಆಗಿನ ಮದರಾಸು (ಈಗಿನ ತಮಿಳುನಾಡು) ಸರ್ಕಾರದ ಅಧೀನದಲ್ಲಿದ್ದು, ಎರಡನೇ ಮಹಾಯುದ್ಧದ ಕಾಲದಲ್ಲಿ ಪ್ಯಾರಾಚೂಟ್‌ಗೆ ಬೇಕಾಗುವ ಬಲವಾದ ರೇಷ್ಮೆದಾರ (ಹುರಿ) ತಯಾರಿಸಲು ಆದೇಶಿಸಲ್ಪಟ್ಟಿತ್ತು. ಕೊಯಮತ್ತೂರು ಮತ್ತು ಧರ್ಮಾವರಂನಲ್ಲಿ ಸಿಲ್ಕ್ ಮಿಲ್ಲುಗಳ ಪ್ರಾರಂಭಗೊಂಡ ಮೇಲೆ ಅವುಗಳಿಗೆ ಬೇಕಾಗುವಷ್ಟು ಸಿಲ್ಕ್ ಕೊಳ್ಳೇಗಾಲದಿಂದಲೇ ಪೂರೈಕೆಯಾಗುತ್ತಿತ್ತೆಂಬುದು ಕೊಯಮತ್ತೂರು ಜಿಲ್ಲಾ ಗ್ಯಾಸೆಟಿಯರ್‌ನಲ್ಲಿ ವ್ಯಕ್ತಪಡಿಸಲಾಗಿದೆ. ಸ್ವಾತಂತ್ರ್ಯಾನಂತರ ಜಿಲ್ಲೆಯಲ್ಲಿ ಅನೇಕ ಮಧ್ಯಮ ಪ್ರಮಾಣದ ಕಾರ್ಖಾನೆಗಳು ಹುಟ್ಟಿಕೊಂಡಿವೆ. ಅವುಗಳಲ್ಲಿ ಮುಖ್ಯವಾದವುಗಳು ಚಾಮರಾಜನಗರ ತಾಲೂಕಿನಲ್ಲಿರುವ ಮೆ। ವೇಲನ್ ಟೆಕ್ಸ್‌ಟೈಲ್ಸ್, ಶ್ರೀದೇವಿ ಟೆಕ್ಸ್‌ಟೈಲ್ಸ್, ಕೊಳ್ಳೇಗಾಲ ತಾಲೂಕಿನಲ್ಲಿರುವ ಕಾವೇರಿ ಪೇಪರ್‌ಮಿಲ್, ಮೆ॥ ರ್‍ಯಾಪೆಡ್ಸ್, ಸರ್ಕಾರಿ ರೇಷ್ಮೆ ಕಾರ್ಖಾನೆ, ಮೆ॥ ಎಸ್. ಎಲ್. ಎಸ್. ಪವರ್ ಪ್ರಾಜೆಕ್ಟ್, ಮೆ॥ ಪಯನೀರ್ ಪವರ್ ಪ್ರಾಜೆಕ್ಟ್, ಗುಂಡ್ಲುಪೇಟೆಯಲ್ಲಿ ಅಮೀರ್ ಜಾನ್ ಬೀಡಿ ಫ್ಯಾಕ್ಟರಿ ಮೊದಲಾದವುಗಳು.

ಜಿಲ್ಲೆಯಲ್ಲಿ ಮಾರ್ಚಿ ೨೦೧೨ರ ಅಂತ್ಯಕ್ಕೆ ಐದು ಮಧ್ಯಮ ಪ್ರಮಾಣದ ಕೈಗಾರಿಕೆಗಳಿದ್ದು, ಅವುಗಳಲ್ಲಿ ತೊಡಗಿಸಲಾಗಿರುವ ಒಟ್ಟು ಬಂಡವಾಳ ₹ ೨೧೯೬.೫೨ ಲಕ್ಷ ವಿದ್ದು, ಒಟ್ಟು ೩೪೮೦ ಜನರಿಗೆ ಉದ್ಯೋಗವನ್ನೊದಗಿಸಿವೆ. ಇದೇ ಅವಧಿಯಲ್ಲಿ ನೋಂದಾವಣೆಗೊಂಡ ೮೫೭೩ ಸಣ್ಣ ಪ್ರಮಾಣದ ಕೈಗಾರಿಕಾ ಘಟಕಗಳಿದ್ದು, ಇವುಗಳಲ್ಲಿ ತೊಡಗಿಸಲ್ಪಟ್ಟಿದ್ದ ಬಂಡವಾಳದ ಮೊತ್ತ ₹ ೧೦,೨೮೫.೫೯ ಲಕ್ಷವಿದ್ದು, ಒಟ್ಟು ೩೭,೬೪೧ ಕಾರ್ಮಿಕರಿಗೆ ಉದ್ಯೋಗನ್ನೊದಗಿಸಿದ್ದವು. ಜಿಲ್ಲೆಯಲ್ಲಿ ೨೦೦೭–೦೮ರ ವರೆಗೆ ಸಾಲ ಮತ್ತು ಅನುದಾನ ಸೌಲಭ್ಯವನ್ನು ಪಡೆದ ಖಾದಿ ಮತ್ತು ಗ್ರಾಮೋದ್ಯೋಗ ಘಟಕಗಳು–೨೬೩. ವೃತ್ತಿಪರ ಕಸುಬುದಾರರ ಸಂಖ್ಯೆ–೨೧,೧೭೪. ಜಿಲ್ಲೆಯಲ್ಲಿ ೨೦೧೨ರ ಮಾರ್ಚ್ ಅಂತ್ಯಕ್ಕೆ ಒಟ್ಟು ರೇಷ್ಮೆ ಕುಟುಂಬಗಳ ೩೧೩೦ ಸಂಖ್ಯೆ. ಒಟ್ಟು ವರ್ಗೀಕೃತ ರೀಲರುಗಳ ಕುಟುಂಬ–೭೧೪. ಉತ್ಪಾದಿಸಿದ ಒಟ್ಟು ರೇಷ್ಮೆ ಗೂಡು ೩೮೦.೪೭೫ ಟನ್. ಇದೇ ಕಾಲಾವಧಿಯಲ್ಲಿ ಒಟ್ಟು ೭೪೧ ಕೈಮಗ್ಗಗಳು ಮತ್ತು ೪೫ ವಿದ್ಯುತ್ ಮಗ್ಗಗಳು ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದವು.

ಜಿಲ್ಲೆಯ ಕೈಗಾರಿಕಾ ಪ್ರಗತಿ ಚಿತ್ರಣವನ್ನು ಬೃಹತ್ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು, ಸಣ್ಣ ಮತ್ತು ಅತಿಸಣ್ಣ ಕೈಗಾರಿಕೆಗಳು, ಖಾದಿ ಮತ್ತು ಗ್ರಾಮೋದ್ಯೋಗ ಕೈಗಾರಿಕೆಗಳು, ಹ್ಯಾಂಡ್‌ಲೂಂ ಮತ್ತು ಪವರ್‌ಲೂಂಗಳು ಹಾಗೂ ರೇಷ್ಮೆ ಕೈಗಾರಿಕೆ ಎಂದು ಐದು ಪ್ರಕಾರಗಳಾಗಿ ವಿಂಗಡಿಸಿ ಪ್ರತಿಯೊಂದನ್ನು ಕೂಲಂಕುಷವಾಗಿ ತಿಳಿಯುವುದರ ಮೂಲಕ ಸ್ಪಷ್ಟವಾಗಿ ತಿಳಿಯಬಹುದು. ಇವುಗಳ ಜೊತೆಗೆ ಕೈಗಾರಿಕಾ ಬೆಳವಣಿಗೆಗೆ ಪೂರಕವಾಗಿರುವ ಸಾಧನ ಸೌಲಭ್ಯಗಳನ್ನು ಸಹ ತಿಳಿಯಬೇಕಾಗುತ್ತದೆ. ಅಧ್ಯಾಯದಲ್ಲಿ ಈಗಾಗಲೇ ಪ್ರಕಟಗೊಂಡಿರುವ ಸರ್ಕಾರದ ಕೈಗಾರಿಕಾ ನೀತಿಯಲ್ಲಿನ ಪ್ರೋತ್ಸಾಹ ಮತ್ತು ರಿಯಾಯಿತಿ ಸೌಲಭ್ಯಗಳು ಹಾಗೂ ವಿದ್ಯುಚ್ಛಕ್ತಿಗಳನ್ನು ಹೊರತುಪಡಿಸಿ ಉಳಿದವುಗಳಾದ ಕೈಗಾರಿಕಾ ಕ್ಷೇತ್ರ ಮತ್ತು ಕೈಗಾರಿಕಾ ವಸಾಹತು, ಕೈಗಾರಿಕಾ ತರಬೇತಿ ಸಂಸ್ಥೆ ಮತ್ತು ಕುಶಲಕರ್ಮಿಗಳ ತರಬೇತಿ ಸಂಸ್ಥೆಗಳು ಹಾಗೂ ಕೈಗಾರಿಕಾ ವ್ಯಾಪ್ತಿಗೊಳಪಡುವ ಇತರ ಕೈಗಾರಿಕೆಗಳು ಮತ್ತು ಕೈಗಾರಿಕಾ ಬೆಳವಣಿಗೆಗೆ ಬೇಕಾಗಿರುವ ಆಂತರಿಕ ಸೌಲಭ್ಯಗಳನ್ನು ಈ ಮುಂದೆ ವಿವರಿಸಲಾಗಿದೆ.

ಜಿಲ್ಲೆಯಲ್ಲಿ ೨೦೧೨ರ ಮಾರ್ಚ್ ಅಂತ್ಯಕ್ಕೆ ಐದು ಬೃಹತ್ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು ಕಾರ್ಯನಿರ್ವಹಿಸುತ್ತಿದ್ದು, ಒಟ್ಟು ₹ ೨೧,೯೬,೬.೫೨ ಲಕ್ಷ ಬಂಡವಾಳದೊಂದಿಗೆ ೩೪೦ ಜನರಿಗೆ ಉದ್ಯೋಗವನ್ನೊದಗಿಸಿದ್ದವು.

ಸ್ವಾತಂತ್ರ್ಯಾನಂತರ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕೈಗಾರಿಕೆಯಲ್ಲಿ ಹಿಂದುಳಿದಿರುವ ಜಿಲ್ಲೆಗಳ ಕೈಗಾರಿಕಾಭಿವೃದ್ಧಿಗೆ ನೆರವು ನೀಡಲು ಅನೇಕ ಯೋಜನೆಗಳನ್ನು ಜಾರಿಗೊಳಿಸಿವೆ. ಕೈಗಾರಿಕಾ ಉತ್ಪನ್ನಗಳ ಹೆಚ್ಚಳದ ಮೂಲಕ ತಮ್ಮ ಆದಾಯದ ಪ್ರಮಾಣವನ್ನು ಹೆಚ್ಚಿಸಿಕೊಳ್ಳಲು ಸರ್ಕಾರವು ನೆರವು ನೀಡಲು ಮುಂದೆ ಬಂದುದರ ಪರಿಣಾಮವಾಗಿ ಕೆಲವು ಉದ್ದಿಮೆದಾರರು ಚಾಮರಾಜನಗರ ಜಿಲ್ಲೆಯಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲಾರಂಭಿಸಿದರಾದರೂ ಅವು ಬಹಳ ಕಾಲ ಮುಂದುವರಿಯಲಿಲ್ಲ. ಇದಕ್ಕೆ ಬಹುಮಟ್ಟಿನ ಕಾರಣ ಬಂಡವಾಳದ ಕೊರತೆ, ತಂತ್ರಜ್ಞರ ಅಭಾವ, ಉತ್ತಮ ಮಾರುಕಟ್ಟೆ ಸೌಲಭ್ಯವಿಲ್ಲದಿರುವುದು ಮತ್ತು ಉದ್ದಿಮೆದಾರರು ಸ್ಥಳೀಯರಲ್ಲದವರಾಗಿರುವುದಾಗಿದೆ. ಚಾಮರಾಜನಗರ ಜಿಲ್ಲೆಯು ಮೈಸೂರು ಜಿಲ್ಲೆಯಿಂದ ಪ್ರತ್ಯೇಕಗೊಂಡ ನಂತರ ಜಿಲ್ಲೆಯಲ್ಲಿರುವ ಮಧ್ಯಮ ಪ್ರಮಾಣದ ಕೈಗಾರಿಕೆಗಳ ಸಂಕ್ಷಿಪ್ತ ವಿವರ.

**೧) ವೇಲನ್ ಟೆಕ್ಸ್‌ಟೈಲ್ಸ್, ಅಂಕಶೆಟ್ಟಿಪುರ, ಚಾಮರಾಜನಗರ ತಾಲೂಕು:** ಇದು ೧೯೮೧ರಲ್ಲಿ ಹತ್ತಿ ನೂಲು ತೆಗೆಯುವ ಉದ್ದೇಶದಿಂದ ಪ್ರಾರಂಭಗೊಂಡಿತು. ೧೯೮೬–೮೭ರಲ್ಲಿ ಇದು ೧೨,೫೫೪ ಕದಿರುಗಳನ್ನು ಹೊಂದಿತ್ತು. ಇದು ದಿ. ೩೧–೩–೨೦೧೨ನರಲ್ಲಿ ₹ ೩೯೨.೧೬ ಲಕ್ಷ ಸ್ಥಿರ ಬಂಡವಾಳದೊಂದಿಗೆ ೬೯ ಕಾರ್ಮಿಕರಿಗೆ ಉದ್ಯೋಗ ನೀಡಿ ಕಾರ್ಯನಿರ್ವಹಿಸುತ್ತಿದೆ.

**೨) ಬನ್ನಾರಿ ಅಮ್ಮನ್ (ಶ್ರೀ ಮಹದೇಶ್ವರ) ಶುಗರ್ಸ್ ಲಿಮಿಟೆಡ್:** ಕೊಳ್ಳೇಗಾಲ ತಾಲೂಕಿನ ಕುಂತೂರಿನಲ್ಲಿ ಶ್ರೀ ಮಹದೇಶ್ವರ ಶುಗರ್ಸ್ ಲಿಮಿಟೆಡ್, ಘಟಕವು ೧೯೭೬ರಲ್ಲಿ ಪ್ರಾರಂಭಿಸಲ್ಪಟ್ಟಿದ್ದು, ೨೦೦೬ ರಲ್ಲಿ ತಮಿಳುನಾಡಿನ ಕೊಯಮತ್ತೂರಿನಲ್ಲಿರುವ ಬನ್ನಾರಿ ಅಮ್ಮನ್ ಶುಗರ್ಸ್ ಲಿಮಿಟೆಡ್, ಜೊತೆ ವಿಲೀನಗೊಂಡಿರುವುದು. ಇದರಲ್ಲಿ ತೊಡಗಿಸಿರುವ ಬಂಡವಾಳ ದಿ. ೩೧–೦೩–೨೦೧೨ರಲ್ಲಿ ₹ ೮೪೦೦.೨೫ ಲಕ್ಷ ಇದ್ದು, ೨೦೦ ಮಂದಿಗೆ ಉದ್ಯೋಗ ನೀಡಿತ್ತು. ಇದು ಬಿಳಿ ಹರಳು ಸಕ್ಕರೆಯನ್ನು ಉತ್ಪಾದಿಸುತ್ತಿದೆ. ಇದಕ್ಕೆ ಬೇಕಾಗುವ ಕಬ್ಬನ್ನು ಕರ್ನಾಟಕ ಸರ್ಕಾರ ನಿಗದಿಪಡಿಸಿರುವ ಭೂಮಿಯಲ್ಲಿನ ರೈತರಿಂದ ಪಡೆದುಕೊಳ್ಳುತ್ತದೆ. ಇದರಲ್ಲಿ ಉತ್ಪಾದಿಸುವ ಸಕ್ಕರೆಯ ಪ್ರತಿಶತ ೧೦ರಷ್ಟನ್ನು ಕರ್ನಾಟಕ ಸರ್ಕಾರ ನಿಗದಿಪಡಿಸಿರುವ ದರದಲ್ಲಿ ರಾಜ್ಯ ಆಹಾರ ನಿಗಮಕ್ಕೆ ಮಾರಾಟಮಾಡಿ ಉಳಿದ ಶೇ.೯೦ರಷ್ಟನ್ನು ತೆರದ ಮಾರುಕಟ್ಟೆಯಲ್ಲಿ ಮಾರಾಟ ಮಾಡಲಾಗುವುದು. ಇದರ ಉತ್ಪಾದನಾ ಸಾಮರ್ಥ್ಯ ದಿನಕ್ಕೆ ೨೫೦೦ ಟನ್ ಆಗಿದೆ.

**೩) ಮೆ॥ ಎಸ್.ಎಲ್.ಎನ್.ಪವರ್ ಪ್ರಾಜೆಕ್ಟ್, ಸತ್ತೇಗಾಲ, ಕೊಳ್ಳೇಗಾಲ ತಾಲೂಕು:** ವಿದ್ಯುತ್ ಉತ್ಪಾದಿಸಿ ಸರಬರಾಜುವಿನಲ್ಲಿ ಉಂಟಾಗುವ ವ್ಯತ್ಯಯವನ್ನು ಸರಿಪಡಿಸಿ ಗ್ರಾಹಕರಿಗೆ ಉತ್ತಮ ಗುಣಮಟ್ಟದ ವಿದ್ಯುತ್ ಪೂರೈಕೆ ಮಾಡುವ ಉದ್ದೇಶದಿಂದ ಸ್ಥಾಪನೆಗೊಂಡ ಇದು ದಿ. ೩೧-೩-೨೦೧೨ರಲ್ಲಿ ₹ ೪,೫೦೦.೦೦ ಲಕ್ಷ ಬಂಡವಾಳ ಹೊಂದಿದ್ದು, ೨೦ ಕಾರ್ಮಿಕರಿಗೆ ಉದ್ಯೋಗ ನೀಡಿತ್ತು. ನಾಲ್ಕು ಮೆಗಾ ವ್ಯಾಟ್ ವಿದ್ಯುತ್ ಉತ್ಪಾದನೆ ಮಾಡುತ್ತಿದೆ.

**೪) ಮೆ॥ ಪಯನೀರ್ ಪವರ್ ಕಾರ್ಪೋರೇಷನ್(ಲಿ), ಕೊಳ್ಳೇಗಾಲ ತಾಲೂಕು:** ಇದು ಸಹ ವಿದ್ಯುತ್ ಉತ್ಪಾದಿಸಿ ಒಳ್ಳೇಯ ಗುಣಮಟ್ಟದ ವಿದ್ಯುತ್ ಪೂರೈಕೆ ಮಾಡುವ ಉದ್ದೇಶದಿಂದ ಪ್ರಾರಂಭಗೊಂಡಿರುವುದು. ದಿ. ೩೧-೩-೨೦೧೨ರಲ್ಲಿ ಇದರಲ್ಲಿ ತೊಡಗಿಸಲಾಗಿದ್ದ ಸ್ಥಿರ ಬಂಡವಾಳ ₹ ೭,೬೭೮ ಲಕ್ಷವಿದ್ದು, ೨೧ ಕಾರ್ಮಿಕರಿಗೆ ಉದ್ಯೋಗ ನೀಡಿದೆ. ಇದು ೨೪.೭೫ ಮೆ.ವ್ಯಾ ವಿದ್ಯುತ್ ಉತ್ಪಾದಿಸುತ್ತಿದೆ.

**೫) ಮೆ. ಕುಂ. ಇಂಟರ್ ನ್ಯಾಷನಲ್ಸ್, ಬದನೆಗುಪ್ಪೆ ಗ್ರಾಮ, ಚಾಮರಾಜನಗರ ತಾಲೂಕು:** ಗ್ರಾನೈಟ್ ಕಟಿಂಗ್ ಆಂಡ್ ಪಾಲಿಸಿಂಗ್, ಕೆಲಸದಲ್ಲಿ ನಿರತವಾಗಿದ್ದು, ೨೦೧೨ರ ಮಾರ್ಚಿ ಅಂತ್ಯಕ್ಕೆ ₹೯೯೬.೧೧ ತೊಡಗಿಸಿ, ೩೦ ಮಂದಿಗೆ ಉದ್ಯೋಗ ಒದಗಿಸಿದೆ. ಹೆಚ್ಚಿನ ವಿವರಗಳಿಗೆ ಕೋಷ್ಟಕ ೫.೧ ಹಾಗೂ ಕೋಷ್ಟಕ ೫.೨ ಅನ್ನು ನೋಡಿ.

**ಕೋಷ್ಟಕ ೫.೧: ಜಿಲ್ಲೆಯಲ್ಲಿ ೩೧-೧೦-೨೦೧೨ರಲ್ಲಿದ್ದ ಮಧ್ಯಮ ಪ್ರಮಾಣದ ಕೈಗಾರಿಕೆಗಳ ವಿವರ**

| ಕ್ರ ಸಂ. | ಕೈಗಾರಿಕಾ ಘಟಕದ ಹೆಸರು ಮತ್ತು ವಿಳಾಸ | ವರ್ಷ | ಉತ್ಪಾದಿಸಲ್ಪಡುವ ಉತ್ಪನ್ನಗಳು | ಬಂಡವಾಳ (ಲಕ್ಷ ₹ಗಳಲ್ಲಿ) | ಉದ್ಯೋಗ |
|---|---|---|---|---|---|
| ೧. | **ಮೆ॥ ವೇಲನ್ ಟೆಕ್ಸ್‌ಟೈಲ್ಸ್**, ಅಂಕನಶೆಟ್ಟಿಪುರ, ಚಾಮರಾಜನಗರ ತಾಲೂಕು | ೧೯೮೧ | ಕಾಟನ್ ಕೊನ್ ಥ್ರೆಡ್ | ೩೯೨.೧೬ | ೬೯ |
| ೨. | **ಮೆ॥ ಬನ್ನಾರಿ ಅಮ್ಮನ್ (ಮಹದೇಶ್ವರ) ಸಕ್ಕರೆ ಕಾರ್ಖಾನೆ**, ಕುಂತೂರು, ಕೊಳ್ಳೇಗಾಲ ತಾಲೂಕು | ೧೯೭೬ | ಸಕ್ಕರೆ | ೮೪೦೦.೨೫ | ೨೦೦ |
| ೩. | ಮೆ॥ ಎಸ್.ಎಲ್.ಎಸ್.ಪವರ್ ಪ್ರಾಜೆಕ್ಟ್, ಸತ್ತೇಗಾಲ, ಕೊಳ್ಳೇಗಾಲ ತಾಲೂಕು: | ೨೦೧೧ | ಜಲವಿದ್ಯುತ್ | ೪,೫೦೦.೦೦ | ೨೦ |
| ೪. | **ಮೆ॥ ಪಯನೀರ್ ಪವರ್ ಕಾರ್ಪೋರೇಷನ್(ಲಿ)**, (ರಂಗನಾಥಸ್ವಾಮಿ ಮಿನಿ ಹೈಡಲ್ ಪ್ಲಾಂಟ್,) ಶಿವಸಮುದ್ರಂ, ಕೊಳ್ಳೇಗಾಲ ತಾಲೂಕು | ೨೦೧೧ | ಜಲವಿದ್ಯುತ್ | ೭೬೭೮.೦೦ | ೨೧ |
| ೫. | **ಮೆ. ಕುಂ. ಇಂಟರ್ ನ್ಯಾಷನಲ್ಸ್**, ಬದನೆಗುಪ್ಪೆ ಗ್ರಾಮ ಚಾಮರಾಜನಗರ ತಾಲೂಕು | ೨೦೧೦ | ಗ್ರಾನೆಟ್ ಕಟಿಂಗ್ ಹಾಗೂ ಪಾಲಿಷಿಂಗ್ | ೯೯೬.೧೧ | ೩೦ |
| | | | | **೨೧೯೬೬.೫೨** | **೩೪೦** |

*ಆಧಾರ: ಜಿಲ್ಲಾ ಕೈಗಾರಿಕಾ ಕೇಂದ್ರ, ಚಾಮರಾಜನಗರ.*

**ರಫ್ತು ಆಧಾರಿತ ಉದ್ಯಮಗಳು:** ಜಿಲ್ಲೆಯಲ್ಲಿ ಮೂರು ಶೇ.೧೦೦ ರಷ್ಟು ರಫ್ತು ಆಧಾರಿತ ಕೈಗಾರಿಕೆಗಳಿದ್ದು, ಅವುಗಳಲ್ಲಿ ಮೆ॥ ಬಿಳಿಗಿರಿ ಗ್ರಾನೈಟ್ಸ್, ಚಾಮರಾಜನಗರ ತಾಲೂಕು ಒಂದಾಗಿದೆ. ಇದು ಗ್ರಾನೈಟ್ಸ್ ಬ್ಲಾಕ್ ಮತ್ತು ಸ್ಲಾಬ್ಸ್‌ಗಳನ್ನು ವಿದೇಶಿ ರಾಷ್ಟ್ರಗಳಿಗೆ ರಫ್ತು ಮಾಡಿ ವಿದೇಶಿ ವಿನಿಮಯಗಳಿಸುತ್ತಿದೆ. ಇದರ ವಾರ್ಷಿಕ ವಹಿವಾಟು ೧೫೫.೮೦ ಲಕ್ಷಗಳಾಗಿದೆ. ಮೆ॥ ಸಿಂಹ ಕೊಕೊನೆಟ್ ಇಂಡಸ್ಟ್ರೀಸ್ ಚಾಮರಾಜನಗರ ಇಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಡೆಸಿಕೇಟೆಡ್ ಕೊಕೊನೆಟ್ ಪೌಡರ್ ರಫ್ತು ಮಾಡಿದ್ದು, ೧೦.೫೦ ಲಕ್ಷ ವಾರ್ಷಿಕ ವಹಿವಾಟು ನಡೆಸಲಾಗಿತ್ತು.

**ಕೋಷ್ಟಕ ೫.೨: ಜಿಲ್ಲೆಯಲ್ಲಿ ೨೦೧೨ರ ಮಾರ್ಚ್ ಅಂತ್ಯಕ್ಕೆ ಡಾ॥ ಸರೋಜಿನಿ ಮಹಿಷಿ ವರದಿಯ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಿರುವ ಜಿಲ್ಲೆಯಲ್ಲಿನ ಮಧ್ಯಮ ಪ್ರಮಾಣದ ಕೈಗಾರಿಕೆಗಳ ವಿವರ**

| ಘಟಕಗಳ ಹೆಸರು ಮತ್ತು ವಿಳಾಸ | ಎ ವರ್ಗ | | | | ಬಿ ವರ್ಗ | | | | ಸಿ ವರ್ಗ | | | | ಡಿ ವರ್ಗ | | | | ಒಟ್ಟು | | | |
|---|---|---|---|---|---|---|---|---|---|---|---|---|---|---|---|---|---|---|---|---|
| | ಸ್ಥಳೀಯರು | ಇತರೆ | ಒಟ್ಟು | ಶೇಕಡ ಸ್ಥಳೀಯರು | ಸ್ಥಳೀಯರು | ಇತರೆ | ಒಟ್ಟು | ಶೇಕಡ ಸ್ಥಳೀಯರು | ಸ್ಥಳೀಯರು | ಇತರೆ | ಒಟ್ಟು | ಶೇಕಡ ಸ್ಥಳೀಯರು | ಸ್ಥಳೀಯರು | ಇತರೆ | ಒಟ್ಟು | ಶೇಕಡ ಸ್ಥಳೀಯರು | ಸ್ಥಳೀಯರು | ಇತರೆ | ಒಟ್ಟು | ಶೇಕಡ ಸ್ಥಳೀಯರು |
| ೧. ಮೆ॥ ವೇಲನ್ ಟೆಕ್ಸ್‌ಟೈಲ್ಸ್ ಅಂಕಶೆಟ್ಟಿಪುರ, ಚಾಮರಾಜನಗರ ತಾಲೂಕು | ೦ | ೧ | ೧ | ೦ | ೧ | ೦ | ೧ | ೧೦೦ | ೮ | ೦ | ೮ | ೧೦೦ | ೧೧೪ | ೦ | ೧೧೪ | ೧೦೦ | ೧೨೩ | ೧ | ೧೨೪ | ೯೯.೨ |
| ೨. ಮೆ॥ ಬನ್ನಾರಿ ಅಮ್ಮನ್ ಶುಗರ್ಸ್ (ಪ್ರೈ)ಲಿ. ಕುಂತೂರು ಕೊಳ್ಳೇಗಾಲ ತಾಲೂಕು | ೧೩ | ೨೦ | ೩೩ | ೩೯.೩೯ | ೩೩ | ೮ | ೪೧ | ೮೦.೫ | ೧೩೮ | ೨೨ | ೧೬೦ | ೮೬.೩ | ೦ | ೦ | ೦ | ೦ | ೧೮೪ | ೫೦ | ೨೩೪ | ೭೮.೬ |
| ೩. ಮೆ॥ ಸರ್ಕಾರಿ ರೇಷ್ಮೆ ಫಿಲೇಚರ್, ಚಾಮರಾಜನಗರ | ೦ | ೦ | ೦ | ೦ | ೦ | ೦ | ೦ | ೦ | ೧೭ | ೦ | ೧೭ | ೧೦೦ | ೪೬ | ೦ | ೪೬ | ೧೦೦ | ೬೩ | ೦ | ೬೪ | ೧೦೦ |
| ೪. ಮೆ॥ ಸರ್ಕಾರಿ ರೇಷ್ಮೆ ಫಿಲೇಚರ್, ಸಂತೆಮರಳ್ಳಿ | ೧ | ೦ | ೧ | ೧೦೦ | ೬೧ | ೦ | ೬೧ | ೧೦೦ | ೨೦ | ೦ | ೨೦ | ೧೦೦ | ೦ | ೦ | ೦ | ೦ | ೮೨ | ೦ | ೮೨ | ೧೦೦ |
| ೫. ಮೆ॥ ಸರ್ಕಾರಿ ರೇಷ್ಮೆ ಫಿಲೇಚರ್, ಮಾಂಬಳ್ಳಿ | ೦ | ೦ | ೦ | ೦ | ೧ | ೦ | ೧ | ೧೦೦ | ೧೫ | ೦ | ೧೫ | ೧೦೦ | ೭೭ | ೦ | ೭೭ | ೧೦೦ | ೯೩ | ೦ | ೯೩ | ೧೦೦ |
| ೬. ಮೆ॥ ಸರ್ಕಾರಿ ರೇಷ್ಮೆ ಫಿಲೇಚರ್ ಕೊಳ್ಳೇಗಾಲ | ೦ | ೦ | ೦ | ೦ | ೧ | ೦ | ೧ | ೧೦೦ | ೨೦ | ೦ | ೨೦ | ೧೦೦ | ೫೯ | ೧ | ೬೦ | ೯೯ | ೮೦ | ೧ | ೮೧ | ೯೯.೫ |
| ಒಟ್ಟು | ೧೪ | ೨೧ | ೩೫ | | ೯೭ | ೮ | ೧೦೫ | | ೨೧೮ | ೨೨ | ೨೪೦ | | ೨೯೬ | ೧ | ೨೯೭ | | ೬೨೫ | ೫೨ | ೬೭೮ | |

*ಆಧಾರ: ಜಿಲ್ಲಾ ಕೈಗಾರಿಕಾ ಕೇಂದ್ರ, ಚಾಮರಾಜನಗರ.*

## ಸಣ್ಣ ಪ್ರಮಾಣದ ಕೈಗಾರಿಕೆಗಳು

ಜಿಲ್ಲೆಯಲ್ಲಿರುವ ಅತಿ ಸಣ್ಣ ಮತ್ತು ಸಣ್ಣ ಕೈಗಾರಿಕೆಗಳು ಪ್ರಧಾನವಾಗಿ ಕೃಷಿ ಆಧಾರಿತ, ಅರಣ್ಯಾಧಾರಿತ, ಜನರಲ್ ಇಂಜಿನಿಯರಿಂಗ್, ಮುದ್ರಣ ಮತ್ತು ಲೇಖನಿ ಸಾಮಾಗ್ರಿಗಳು, ಕೆಮಿಕಲ್ಸ್, ಗ್ಲಾಸ್ ಮತ್ತು ಸಿರಾಮಿಕ್ಸ್ ಜವಳಿ ಆಧಾರಿತ, ಚರ್ಮಾಧಾರಿತ, ರಬ್ಬರ್ ಮತ್ತು ಪ್ಲಾಸ್ಟಿಕ್, ಮೆಟಲ್, ಎಲೆಕ್ಟ್ರಿಕಲ್, ಆಟೋಮೋಬೈಲ್, ಸಾಗಾಣಿಕಾ ಸಲಕರಣೆಗಳು, ಫೆರಸ್ ಅಂಡ್ ನಾನ್–ಫೆರಸ್, ಜಾಬ್ ವರ್ಕ್ಸ್ ಮತ್ತು ರಿಪೇರಿ, ಇತರೆ ಸೇವೆಗಳು ಹಾಗೂ ಇತರೆ ಘಟಕಗಳು ಉತ್ಪಾದನಾ ಕಾರ್ಯದಲ್ಲಿ ತೊಡಗಿದ್ದವು. ೨೦೧೨ರ ಮಾರ್ಚ್ ಅಂತ್ಯಕ್ಕೆ ಜಿಲ್ಲೆಯಲ್ಲಿ ಒಟ್ಟು ೮೫೭೩ ಘಟಕಗಳು ನೋಂದಣಿಗೊಂಡಿದ್ದವು. ಇವುಗಳಲ್ಲಿ ತೊಡಗಿಸಲ್ಪಟ್ಟಿದ್ದ ಒಟ್ಟು ಬಂಡವಾಳ ₹೧೦೨೮೫.೫೯ ಲಕ್ಷ. ಇವು ೩೭೬೪೧ ಜನರಿಗೆ ಉದ್ಯೋಗವನ್ನೊದಗಿಸಿದ್ದವು. ಜಿಲ್ಲಾ ಕೈಗಾರಿಕಾ ಕೇಂದ್ರದಲ್ಲಿ ನೋಂದಣಿಗೊಳ್ಳದ ಸುಮಾರು ಪ್ರತಿಶತ ೧೦ರಷ್ಟು ಸಣ್ಣ ಪ್ರಮಾಣದ ಮತ್ತು ಅತಿಸಣ್ಣ ಪ್ರಮಾಣದ ಕೈಗಾರಿಕೆಗಳಿವೆ ಎಂದು ಅಂದಾಜು ಮಾಡಲಾಗಿದೆ.

**೧. ಆಹಾರ ಮತ್ತು ಪಾನೀಯ:** ಕೃಷಿ ಆಧಾರಿತ ಕೈಗಾರಿಕೆಗಳ ವ್ಯಾಪ್ತಿಗೆ ಪ್ರಧಾನವಾಗಿ ಹಿಟ್ಟಿನ ಗಿರಣಿ, ಪಶು ಮತ್ತು ಕೋಳಿ ಆಹಾರ ತಯಾರಿಕೆ, ಖಾದ್ಯ ತೈಲ, ಐಸ್ ಕ್ರೀಂ ತಯಾರಿಕೆ, ಕಬ್ಬಿನ ರಸ ತಯಾರಿಕೆ, ಬೆಲ್ಲ ತಯಾರಿಕೆ, ಅಕ್ಕಿ ಗಿರಣಿ ಮುಂತಾದವುಗಳು ಈ ವರ್ಗಕ್ಕೆ ಸೇರಿದ್ದು, ಜಿಲ್ಲೆಯಾದ್ಯಂತ ಹರಡಿಕೊಂಡಿವೆ. ಜಿಲ್ಲಾ ಕೈಗಾರಿಕಾ ಕೇಂದ್ರದಲ್ಲಿ ದಿ: ೩೧–೩–೨೦೧೨ರವರೆಗೆ ನೋಂದಾಯಿಸಲ್ಪಟ್ಟಿದ್ದ ಆಹಾರ ಮತ್ತು ಪಾನೀಯ ಕೈಗಾರಿಕೆಗಳ ಸಂಖ್ಯೆ ೧೫೭೪. ಇವುಗಳಲ್ಲಿ ತೊಡಗಿಸಲ್ಪಟ್ಟಿದ್ದ ಬಂಡವಾಳ ಸುಮಾರು ₹ ೨,೨೧೧.೮೬ ಲಕ್ಷ. ಇವು ೫೭೦೭ ಕಾರ್ಮಿಕರಿಗೆ ಉದ್ಯೋಗವನ್ನೊದಗಿಸಿದ್ದವು.

**೨. ಜವಳಿ ಆಧಾರಿತ ಕೈಗಾರಿಕೆಗಳು:** ಈ ಉದ್ಯಮದ ವ್ಯಾಪ್ತಿಗೆ ಪ್ರಧಾನವಾಗಿ ಟವಲ್, ನ್ಯಾಪ್ಕಿನ್ ಹಾಗೂ ಸಿದ್ಧ ಉಡುಪುಗಳ ತಯಾರಿಕಾ ಘಟಕಗಳು ಸೇರುತ್ತವೆ. ಜೀವನದ ಮೂಲಭೂತ ಅವಶ್ಯಕತೆಗಳಲ್ಲಿ ವಸ್ತ್ರವೂ ಒಂದು, ಜಿಲ್ಲೆಯ ಜವಳಿ ಮತ್ತು ಉಡುಪುಗಳ ಪೂರೈಕೆ ಎರಡು ಮೂಲಗಳಿಂದ ಪೂರೈಕೆಯಾಗುತ್ತಿದೆ. ಪಾರಂಪರಿಕ ಉತ್ಪಾದನೆ (ಸ್ಥಳಿಯವಾಗಿ) ಮತ್ತು ಆಧುನಿಕ ಗಿರಣಿಗಳ ಉತ್ಪಾದನೆ. ಜಿಲ್ಲೆಯಲ್ಲಿ ೨೦೧೨ ರ ಮಾರ್ಚ್ ಅಂತ್ಯಕ್ಕೆ ೪೨೨೨ ಜವಳಿ ಉದ್ದಿಮೆಗಳಿದ್ದು, ಸುಮಾರು ₹ ೩೯೭೬.೪೩ ಲಕ್ಷ ರೂಪಾಯಿಗಳ ಬಂಡವಾಳ ತೊಡಗಿಸಲಾಗಿದ್ದು, ಇವು ೨೨,೨೭೫ ಮಂದಿಗೆ ಉದ್ಯೋಗ ಒದಗಿಸಿವೆ.

**೩. ಮರ ಮತ್ತು ಮರದ ಉತ್ಪನ್ನಗಳು:** ಮರಕೊಯ್ಯುವುದು, ಪೀಠೋಪಕರಣ, ಕಿಟಕಿ, ಬಾಗಿಲು, ಎತ್ತಿನಗಾಡಿ, ಆಟದ ಸಾಮಾನು ಮತ್ತು ಪೋಟೋ ಚೌಕಟ್ಟುಗಳನ್ನು ತಯಾರಿಸುವುದು, ವುಡನ್ ಇನ್‌ಲೇ ವರ್ಕ್ಸ್ ಮುಂತಾದವು ಮರದ ಗೃಹೋಪಯೋಗಿ ಮತ್ತು ಪೀಠೋಪಕರಣ ಕೈಗಾರಿಕೆಗಳ ವ್ಯಾಪ್ತಿಗೆ ಒಳಪಡುತ್ತವೆ. ದಿ: ೩೧–೩–೨೦೧೨ರ ವರೆಗೆ ಜಿಲ್ಲಾ ಕೈಗಾರಿಕಾ ಕೇಂದ್ರದಲ್ಲಿ ನೋಂದಣಿಗೊಂಡ ಮರ ಆಧಾರಿತ ಮತ್ತು ಮರದ ಉತ್ಪನ್ನ ಕೈಗಾರಿಕಾ ಘಟಕಗಳು ೫೨೨. ಇವುಗಳಲ್ಲಿ ತೊಡಗಿಸಲ್ಪಟ್ಟಿದ್ದ ಬಂಡವಾಳ ಸುಮಾರು ₹ ೪೦೦.೬೭ ಲಕ್ಷವಿದ್ದು, ೧೭೫೭ ಕಾರ್ಮಿಕರಿಗೆ ಉದ್ಯೋಗವನ್ನೊದಗಿಸಿದ್ದವು.

**೪. ಜನರಲ್ ಇಂಜಿನಿಯರಿಂಗ್:** ಜನರಲ್ ಇಂಜಿನಿಯರಿಂಗ್ ವ್ಯಾಪ್ತಿಗೆ ಯಂತ್ರೋಪಕರಣಗಳ ಬಿಡಿಭಾಗಗಳು, ವ್ಯವಸಾಯೋಪಕರಣ, ರೋಲಿಂಗ್ ಷಟರ್ಸ್, ಗ್ರಿಲ್ಸ್ ಮತ್ತು ಗೇಟು, ಸ್ಟೀಲ್ ಫರ್ನಿಷರ್ಸ್, ಆಯಿಲ್

ಇಂಜಿನ್, ವೆಲ್ಡಿಂಗ್ ಮತ್ತು ಟರ್ನಿಂಗ್, ಬಿಲ್ಡರ್ಸ್ ಹಾರ್ಡ್‌ವೇರ್, ಬೋಲ್ಟ್ ಮತ್ತು ನಟ್ಸ್, ಅಲ್ಯೂಮಿನಿಯಂ, ತಾಮ್ರ ಮತ್ತು ಹಿತ್ತಾಳೆ ಪಾತ್ರೆಗಳೇ ಮೊದಲಾದ ತಯಾರಿಕಾ ಘಟಕಗಳು ಸೇರುತ್ತವೆ. ಜಿಲ್ಲೆಯಲ್ಲಿ ೨೦೧೨ರ ಮಾರ್ಚ್ ಅಂತ್ಯಕ್ಕೆ ಈ ಗುಂಪಿನ ಉದ್ಯಮಕ್ಕೆ ಸೇರಿದ ೧೫೫ ಘಟಕಗಳಿದ್ದು, ₹ ೨೨೦.೨೩ ಲಕ್ಷ ಬಂಡವಾಳ ತೊಡಗಿಸಲಾಗಿದೆ. ಈ ಉದ್ಯಮಗಳು ೭೧೨ ಮಂದಿಗೆ ಉದ್ಯೋಗ ಒದಗಿಸಿದ್ದವು.

**೫. ಮುದ್ರಣ ಮತ್ತು ಲೇಖನ ಸಾಮಗ್ರಿ:** ಜಿಲ್ಲೆಯಲ್ಲಿ ಮುದ್ರಣ ಉದ್ಯಮ ಬಹಳ ವೇಗವಾಗಿ ಬೆಳೆಯುತ್ತಿರುವ ಉದ್ಯಮವಾಗಿದೆ. ಆಧುನಿಕ ಕಂಪ್ಯೂಟರ್ ತಂತ್ರಜ್ಞಾನ ಜನಪ್ರಿಯವಾಗುತ್ತಿರುವ ಈ ದಿನಗಳಲ್ಲಿ ಮುದ್ರಣಕ್ಕೆ ಸಂಬಂಧಿಸಿದ ಚಟುವಟಿಕೆಗಳು ಬೆಳೆಯುತ್ತಿರುವುದು ಕಂಡುಬರುತ್ತದೆ. ಮುದ್ರಣದ ಕೆಲಸ ಹಿಂದಿನ ದಿನಗಳಂತೆ ಕೇವಲ ಮುದ್ರಣಾಲಯಗಳಿಗೆ ಸೀಮಿತವಾಗಿಲ್ಲ. ಮುದ್ರಣ ಮತ್ತು ಲೇಖನ ಸಾಮಗ್ರಿಗಳ ವ್ಯಾಪ್ತಿಗೆ, ಕೈಚೀಲ, ಪೇಪರ್ ಕವರ್, ವ್ಯಾಕ್ಸ್ ಕೋಟೆಡ್ ಪೇಪರ್, ಕಾರ್ಡ್ ಬೋರ್ಡ್, ಗಮ್, ಪೇಪರ್, ಟೇಪ್, ಕಂಪ್ಯೂಟರ್, ಸ್ಟೇಷನರಿ ವಸ್ತುಗಳು ಮುಂತಾದವು ಸೇರುತ್ತವೆ. ಲೇಖನ ಸಾಮಗ್ರಿ ಉತ್ಪಾದನೆಯಲ್ಲಿ ಬರವಣಿಗೆಗೆ ಉಪಯೋಗಕ್ಕೆ ಪುಸ್ತಕ, ಬೈಂಡಿಂಗ್ ಇತ್ಯಾದಿಗಳು ಸೇರಿವೆ. ಇತ್ತೀಚಿನ ದಿನಗಳಲ್ಲಿ ಬಹುಬೇಡಿಕೆಯಿರುವ ಇನ್ನೊಂದು ರೀತಿಯ ಮುದ್ರಣ ಸ್ಕ್ರೀನ್ ಪ್ರಿಂಟಿಂಗ್. ಜಿಲ್ಲೆಯಲ್ಲಿ ಮಾರ್ಚ್ ೨೦೧೨ರ ಅಂತ್ಯಕ್ಕೆ ಒಟ್ಟು ೧೦೪ ಮತ್ತು ಲೇಖನ ಸಾಮಗ್ರಿ ಉತ್ಪಾದಿಸುವ ಘಟಕಗಳಿದ್ದು, ಇವುಗಳಲ್ಲಿ ₹ ೧೫೩.೦೪ ಲಕ್ಷಗಳ ಬಂಡವಾಳ ತೊಡಗಿಸಲಾಗಿದೆ. ಇವುಗಳು ೩೯೭ ಮಂದಿಗೆ ಉದ್ಯೋಗ ಒದಗಿಸಿವೆ.

**೬. ಚರ್ಮ ಮತ್ತು ಚರ್ಮ ಉತ್ಪನ್ನಗಳು:** ಚರ್ಮದ ಪಾದರಕ್ಷೆ, ಆಟದ ಸಾಮಾನು, ಚರ್ಮದ ಕೈಚೀಲ, ಫ್ಯಾನ್ಸಿ ಸರಕುಗಳು ಮುಂತಾದವುಗಳು ಈ ವರ್ಗದ ಉದ್ದಿಮೆಗಳಿಗೆ ಸೇರುತ್ತವೆ. ಜಿಲ್ಲೆಯಲ್ಲಿ ೨೦೧೨ ರ ಮಾರ್ಚ್ ಅಂತ್ಯಕ್ಕೆ ೫೩ ಚರ್ಮ ಮತ್ತು ಚರ್ಮದ ಉತ್ಪನ್ನಗಳನ್ನು ಉತ್ಪಾದಿಸುವ ಘಟಕಗಳಿದ್ದು, ಇವುಗಳಲ್ಲಿ ₹ ೩೧.೯೫ ಲಕ್ಷ ಬಂಡವಾಳ ತೊಡಗಿಸಲಾಗಿದೆ. ಇವುಗಳು ೧೫೩ ಮಂದಿಗೆ ಉದ್ಯೋಗ ಒದಗಿಸಿವೆ.

**೭. ರಬ್ಬರ್ ಮತ್ತು ಪ್ಲಾಸ್ಟಿಕ್ ಉದ್ದಿಮೆಗಳು:** ಪಾಲಿಥಿನ್ ಚೀಲ, ಪ್ಲಾಸ್ಟಿಕ್ ವಸ್ತು, ನೈಲಾನ್ ಚೀಲ, ನೈಲಾನ್ ಬಲೆ, ಟೈರ್ ರಿಟ್ರೇಡಿಂಗ್ ಪಿ.ವಿ.ಸಿ. ಪೈಪ್ಸ್, ಹವಾಯ್ ಚಪ್ಪಲಿ, ಬಾಲ್ ಪೆನ್, ಬಾಲ್ ಪೆನ್ ರೀಫಿಲ್ಸ್, ಪ್ಲಾಸ್ಟಿಕ್, ಗಾರ್ಮೆಂಟ್ಸ್, ಪ್ಲಾಸ್ಟಿಕ್ ಸೀಸೆ, ಫೈಬರ್ ಗ್ಲಾಸ್ ಮುಂತಾದವು ರಬ್ಬರ್ ಮತ್ತು ಪ್ಲಾಸ್ಟಿಕ್ ವಸ್ತುಗಳ ತಯಾರಿಕಾ ಘಟಕಗಳ ವ್ಯಾಪ್ತಿಗೆ ಸೇರುತ್ತವೆ. ಜಿಲ್ಲೆಯಲ್ಲಿ ೨೦೧೨ ರ ಮಾರ್ಚ್ ಅಂತ್ಯಕ್ಕೆ ಈ ಉದ್ಯಮಕ್ಕೆ ಸಂಬಂಧಿಸಿದ ಘಟಕಗಳ ಸಂಖ್ಯೆ ೧೯ ಆಗಿದ್ದು, ಇವುಗಳಲ್ಲಿ ₹ ೨೨.೦೦ ಲಕ್ಷ ಬಂಡವಾಳ ತೊಡಗಿಸಲಾಗಿದೆ. ಇವು ೬೨ ಮಂದಿಗೆ ಉದ್ಯೋಗ ಕಲ್ಪಿಸಿವೆ.

**೮. ರಾಸಾಯನಿಕ ವಸ್ತುಗಳ ತಯಾರಿಕೆ:** ಬಣ್ಣ ಮತ್ತು ವಾರ್ನಿಶ್, ಸಿಮೆಂಟ್, ಡಿಸ್ಟೆಂಪರ್, ಅಗರಬತ್ತಿ, ಮುದ್ರಣ ಇಂಕು, ಸೋಪಿನ ದ್ರವ ಮತ್ತು ಫಿನಾಯಲ್, ಲಾಂಡ್ರಿಸೋಪು, ಡಿಟರ್ಜೆಂಟ್ ಕೇಕ್ ಮತ್ತು ಪೌಡರ್, ಬರವಣಿಗೆಯ ಇಂಕು, ಬೆಂಕಿಕಡ್ಡಿ, ಸುಗಂಧದ ಪೌಡರ್, ಬ್ಲೀಚಿಂಗ್ ಪೌಡರ್ ಮೊದಲಾದವು ರಾಸಾಯನಿಕ ವಸ್ತುಗಳ ತಯಾರಿಕಾ ಗುಂಪಿನಲ್ಲಿ ಬರುತ್ತವೆ. ಜಿಲ್ಲೆಯಲ್ಲಿ ೨೦೧೨ ರ ಮಾರ್ಚ್ ಅಂತ್ಯಕ್ಕೆ ೧೨೯ ಘಟಕಗಳಿದ್ದು ₹ ೮೦.೯೭ ಲಕ್ಷ ಬಂಡವಾಳ ತೊಡಗಿಸಲಾಗಿದೆ. ಇವು ೫೩೨ ಮಂದಿಗೆ ಉದ್ಯೋಗ ಕಲ್ಪಸಿವೆ.

**೯. ರಿಪೇರಿ ಮತ್ತು ಸೌಲಭ್ಯ ಸಣ್ಣ ಘಟಕಗಳು:** ರಿಪೇರಿ ಮತ್ತು ಸೇವಾ ಕಾರ್ಯಗಳ ವ್ಯಾಪ್ತಿಗೆ ಆಟೋ ರಿಪೇರಿ ಮತ್ತು ಸೇವೆ, ಫೋಟೋ ಸ್ಟುಡಿಯೋ, ಗಡಿಯಾರಗಳ ರಿಪೇರಿ, ಲಾಂಡ್ರಿ ಮತ್ತು ಡ್ರೈಕ್ಲೀನಿಂಗ್,

ಸೈಕಲ್ ಷಾಪ್, ರೇಡಿಯೋ ಮತ್ತು ಟಿ.ವಿ. ರಿಪೇರಿ, ಜಾಬ್ ಟೈಪಿಂಗ್, ಆಟೋರ್‍ಝೆರಾಕ್ಸ್, ಟೇಪ್‌ರೇಕಾರ್ಡ್‌ಗಳ ರಿಪೇರಿ ಮೊದಲಾವುಗಳು ಸೇರುತ್ತವೆ. ೨೦೧೨ರ ಮಾರ್ಚ್ ಅಂತ್ಯಕ್ಕೆ ಜಿಲ್ಲೆಯಲ್ಲಿದ್ದ ರಿಪೇರಿ ಮತ್ತು ಸೇವಾ ಕಾರ್ಯಗಳ ಘಟಕಗಳ ಸಂಖ್ಯೆ ೪೦೪. ಇವುಗಳಲ್ಲಿ ತೊಡಗಿಸಿದ್ದ ಬಂಡವಾಳ ₹ ೨೫೮.೬೪೫ ಲಕ್ಷ. ಇವು ೧೨೩೦ ಜನರಿಗೆ ಉದ್ಯೋಗನ್ನೊದಗಿಸಿದ್ದವು.

**೧೦. ಇತರೆ ಸೇವೆ ಹಾಗೂ ಇತರೆ ಉತ್ಪನ್ನಗಳು:** ಜಿಲ್ಲೆಯು ಸೇವಾಕ್ಷೇತ್ರದ ಚಟುವಟಿಕೆಗಳಲ್ಲಿ ಉತ್ತಮ ಪ್ರಗತಿ ಸಾಧಿಸಿರುವುದು ಅಂಕಿಅಂಶಗಳಿಂದ ತಿಳಿದು ಬರುತ್ತದೆ. ನೆರಳಚ್ಚು (ಝೆರಾಕ್ಸ್), ಎಸ್.ಟಿ.ಡಿ. ಬೂತ್ಸ್, ಬ್ಯೂಟಿ ಪಾರ್ಲರ್‌ಗಳು, ಲ್ಯಾಬೋರೇಟರಿಗಳು, ಕೇಬಲ್ ನೆಟ್‌ವರ್ಕ್ಸ್, ಸ್ಟೂಡಿಯೋ, ತೆಂಗಿನ ನಾರಿನಿಂದ ತಯಾರಿಸುವ ಉತ್ಪನ್ನಗಳು, ಬೀಡಿ, ಸುಣ್ಣ, ಸ್ಪ್ರೇ ಪೈಂಟಿಂಗ್, ಸೋಫಾ ಕುಶನ್, ಸುಗಂಧಯುಕ್ತ ಸುಪಾರಿ ಮುಂತಾದವು ಇದರಡಿಯಲ್ಲಿ ಬರುತ್ತವೆ. ಜಿಲ್ಲೆಯಲ್ಲಿ ೨೦೧೨ರ ಮಾರ್ಚ್ ಅಂತ್ಯಕ್ಕೆ ಇತರೆ ಸೇವೆ ಹಾಗೂ ಇತರೆ ಉತ್ಪನ್ನಗಳಡಿ ಕ್ರಮವಾಗಿ ೬೬೨ ಮತ್ತು ೪೪೭ ಘಟಕಗಳಿದ್ದವು. ಇವುಗಳಲ್ಲಿ ಕ್ರಮವಾಗಿ ₹ ೫೦೮ ಲಕ್ಷ ಮತ್ತು ₹ ೫೪೧.೫೩ ಲಕ್ಷ ಬಂಡವಾಳ ತೊಡಗಿಸಲಾಗಿದ್ದು, ಇವು ೧೯೧೩ ಮತ್ತು ೧೧೫೨ ಮಂದಿಗೆ ಉದ್ಯೋಗ ಒದಗಿಸಿದ್ದವು.

**೧೧. ಗಾಜು ಮತ್ತು ಮಣ್ಣಿನ ಸಿರಾಮಿಕ್ಸ್:** ಸುಣ್ಣ ತಯಾರಿಕೆ, ಟೇಬಲ್ ಮೌಲ್ಡ್ ಇಟ್ಟಿಗೆ ತಯಾರಿಕೆ, ಕಲ್ಲನ್ನು ತುಂಡರಿಸುವುದು, ಸಿಮೆಂಟ್ ಪೈಪ್ ತಯಾರಿಕೆ, ಬಳಪದ ಕಲ್ಲಿನ ಸಾಮಾನು ತಯಾರಿಕೆ ಮುಂತಾದವು ಈ ವರ್ಗದ ಕೈಗಾರಿಕೆಗಳಾಗಿದ್ದು, ೨೦೧೨ರ ಮಾರ್ಚಿ ಅಂತ್ಯಕ್ಕೆ ೧೦೦ ಉದ್ದಿಮೆಗಳಿದ್ದು, ₹ ೧೭೫೦.೬೫ ಲಕ್ಷ ಬಂಡವಾಳ ತೊಡಗಿಸಲಾಗಿದೆ. ಇವು ೧೦೭೨ ಮಂದಿಗೆ ಉದ್ಯೋಗ ಒದಗಿಸಿವೆ.

**೧೨. ಲೋಹ ಮತ್ತು ಲೋಹ ಉತ್ಪನ್ನಗಳು:** ಚಿನ್ನ ಮತ್ತು ಬೆಳ್ಳಿಯ ಆಭರಣಗಳು, ಅಲ್ಯೂಮಿನಿಯಂ ಬಾಗಿಲುಗಳು, ಕಂಚು, ಹಿತ್ತಾಳೆಯ ಪಾತ್ರೆ ಮತ್ತಿತರ ವಸ್ತುಗಳು ಈ ಉದ್ದಿಮೆಯಲ್ಲಿ ಸೇರಿವೆ. ಈ ಉದ್ಯಮವು ಬೇಡಿಕೆಯನ್ನು ಆದರಿಸಿದ್ದು, ಮೂಲ ಲೋಹಗಳನ್ನು ದೇಶದ ಪ್ರಮುಖ ಕೈಗಾರಿಕಾ ಕೇಂದ್ರದಿಂದ ಸಗಟು ರೂಪದಲ್ಲಿ ಖರೀದಿಸಿ ಅವುಗಳನ್ನು ಸ್ಥಳೀಯ ಅವಶ್ಯಕತೆಗಳಿಗೆ ಅನುಗುಣವಾಗಿ ವಿನ್ಯಾಸಗೊಳಿಸಿ, ತಯಾರಿಸಿ ಕೊಡಲಾಗುತ್ತಿದೆ. ಇಂತಹ ಆಭರಣ ತಯಾರಿಕೆಯನ್ನು ಅವಲಂಬಿಸಿರುವ ದೊಡ್ಡ ಸಂಖ್ಯೆಯ ವೃತ್ತಿನಿರತರಿದ್ದಾರೆ. ಅಲ್ಯೂಮಿನಿಯಂ ಉತ್ಪನ್ನಗಳನ್ನು ಸಗಟಾಗಿ ಖರೀದಿಸಿ, ಅಲ್ಯೂಮಿನಿಯಂ ಬಾಗಿಲು, ಕಿಟಕಿ, ಪೀಠೋಪಕರಣಗಳು, ಪಾತ್ರೆ ಮತ್ತಿತರ ಸಾಮಗ್ರಿಗಳನ್ನು ತಯಾರಿಸುವ ಕೈಗಾರಿಕಾ ಘಟಕಗಳಿವೆ. ಜಿಲ್ಲೆಯಲ್ಲಿ ೨೦೧೨ ರ ಮಾರ್ಚ್ ಅಂತ್ಯಕ್ಕೆ ೫೨ ಮೂಲ ಲೋಹ ಮತ್ತು ಅದರ ಉತ್ಪನ್ನ ಘಟಕಗಳಿದ್ದು, ಇವುಗಳಲ್ಲಿ ₹ ೪೫.೪೭ ಲಕ್ಷ ಬಂಡವಾಳ ತೊಡಗಿಸಲಾಗಿದೆ. ಇವು ೧೬೦ ಮಂದಿಗೆ ಉದ್ಯೋಗ ನೀಡಿವೆ.

**೧೩. ಎಲೆಕ್ಟ್ರಿಕಲ್ಸ್ ಮತ್ತು ಎಲೆಕ್ಟ್ರಾನಿಕ್ಸ್ :** ಜಿಲ್ಲೆಯ ಜನರು ಎಲೆಕ್ಟ್ರಿಕಲ್ಸ್ ಮತ್ತು ಎಲೆಕ್ಟ್ರಾನಿಕ್ಸ್ ಉಪಕರಣವನ್ನು ಬಳಸುತ್ತಾರೆ. ಅಂತಹ ಉಪಕರಣಗಳಲ್ಲಿ ಬಳಸಲಾಗುವ ಕೆಲವು ಬಿಡಿಭಾಗಗಳನ್ನು ಜಿಲ್ಲೆಯಲ್ಲಿ ಉತ್ಪಾದಿಸಲಾಗುತ್ತಿದೆ. ಜಿಲ್ಲೆಯಲ್ಲಿ ೨೦೧೨ ರ ಮಾರ್ಚ್ ಅಂತ್ಯಕ್ಕೆ ಈ ಗುಂಪಿನ ಉದ್ಯಮಕ್ಕೆ ಸೇರಿದ ೩೬ ಘಟಕಗಳಿದ್ದು, ₹ ೩೧.೧೭ ಲಕ್ಷ ಬಂಡವಾಳ ತೊಡಗಿಸಲಾಗಿದೆ. ಇವು ೧೨೨ ಮಂದಿಗೆ ಉದ್ಯೋಗ ಒದಗಿಸಿವೆ.

**೧೪. ಸಾರಿಗೆ ಹಾಗೂ ಉಪಕರಣಗಳು:** ಇವುಗಳಲ್ಲಿ ಪ್ರಮುಖವಾಗಿ ಮೋಟಾರು ವಾಹನಗಳಲ್ಲಿ ಸರಕು ಸಾಗಾಣಿಕೆ ಹಾಗೂ ಪ್ರಯಾಣಿಕರ ಅನುಕೂಲಕ್ಕೆ ಅನುಗುಣವಾಗಿ ಅಗತ್ಯವಾದ ವಾಹನದ ಭಾಗಗಳನ್ನು,

ಆಸನಗಳನ್ನು ತಯಾರಿಸುವ ಉದ್ಯಮ ಇದರಲ್ಲಿ ಸೇರಿದೆ. ಜಿಲ್ಲೆಯಲ್ಲಿ ೨೦೧೨ ರ ಮಾರ್ಚ್ ಅಂತ್ಯಕ್ಕೆ ಈ ಉದ್ಯಮಕ್ಕೆ ಸೇರಿದ ಒಟ್ಟು ೫೩ ಘಟಕಗಳಿದ್ದು, ₹ ೧೩.೬೨ ಲಕ್ಷ ಬಂಡವಾಳ ತೊಡಗಿಸಲಾಗಿದೆ. ಇವು ೨೦೫ ಮಂದಿಗೆ ಉದ್ಯೋಗ ಒದಗಿಸಿವೆ.

**೧೫. ಫೆರಸ್ ಮತ್ತು ನಾನ್ ಫೆರಸ್**: ಸ್ಟೀಲ್ ಲೈರ್, ಇಂಡಸ್ಟ್ರೀಯಲ್ ಸ್ಟಾಂಪಲ್ಸ್, ನಾನ್–ಫೆರಸ್ ಕ್ಯಾಸ್ಟಿಂಗ್, ಮೆಷಿನ್ ಪ್ಯಾಬ್ರಿಕೇಷನ್ಸ್, ಲೀಪ್ ಸ್ಪ್ರಿಂಗ್ಸ್, ಬ್ರೇಕ್ ಡ್ರಮ್ಸ್, ಚಕ್ರದ ಮಧ್ಯ ಭಾಗ (ಹಬ್ಸ್), ಸಿಲಿಂಡರ್ ಲಾಯಿನರ್ಸ್, ಸ್ಪ್ರಿಂಗ್ ಸ್ಟೀಲ್, ಯಂತ್ರದ ಬಿಡಿಭಾಗಗಳು, ಮೌಲ್ಡಿಂಗ್ ರಿಂಗ್ಸ್, ವ್ಯವಸಾಯೋಪಕರಣಗಳು, ನಾನ್–ಫೆರಸ್ ಫಿಟ್ಟಿಂಗ್ಸ್ ಮತ್ತು ಸ್ಟೀಲ್ ಉತ್ಪನ್ನಗಳು, ಸೂಟಕೇಸ್, ಪೆಟ್ಟಿಗೆ, ಗೃಹೋಪಕರಣಗಳು ಟಿನ್ ಕಂಟೇನರ್ಸ್ ಮುಂತಾದವುಗಳನ್ನು ಈ ಉದ್ದಿಮೆಗಳಲ್ಲಿ ತಯಾರಿಸಲಾಗುತ್ತದೆ. ಜಿಲ್ಲೆಯಲ್ಲಿ ೨೦೧೨ರ ಮಾರ್ಚ್ ಅಂತ್ಯಕ್ಕೆ ೨೭ ಫೆರಸ್ ಮತ್ತು ನಾನ್–ಫೆರಸ್ ಉದ್ದಿಮೆಗಳಿದ್ದು, ₹ ೨೨.೧೪ ಲಕ್ಷ ಬಂಡವಾಳ ತೊಡಗಿಸಲಾಗಿತ್ತು. ಇವು ೧೦೮ ಮಂದಿಗೆ ಉದ್ಯೋಗ ಒದಗಿಸಿದ್ದುವು. ಹೆಚ್ಚಿನ ವಿವರಗಳಿಗೆ ಕೋಷ್ಟಕ ೫.೩ ಹಾಗೂ ೫.೪ ಅನ್ನು ನೋಡಿ.

**ಕೋಷ್ಟಕ: ೫.೩: ೨೦೧೧–೧೨ನೇ ಸಾಲಿನವರೆಗೆ ನೋಂದಣಿಯಾಗಿರುವ ವರ್ಗಾವಾರು ಘಟಕಗಳ ವಿವರ**

| ಕ್ರ.ಸಂ | ಚಟುವಟಿಕೆಗಳು | ಸಂಖ್ಯೆ | ಬಂಡವಾಳ | ಉದ್ಯೋಗ |
|---|---|---|---|---|
| ೧ | ಆಹಾರಾಧಾರಿತ ಕೈಗಾರಿಕೆಗಳು | ೧೫೬೭ | ೨೨೧೧.೮೬ | ೫೭೦೭ |
| ೨ | ಜವಳಿ ಆಧಾರಿತ ಕೈಗಾರಿಕೆಗಳು | ೪೨೨೨ | ೩೯೭೬.೪೩ | ೨೨೨೭೫ |
| ೩ | ಅರಣ್ಯಾಧಾರಿತ ಕೈಗಾರಿಕೆಗಳು | ೫೨೨ | ೪೦೦.೬೭ | ೧೭೫೭ |
| ೪ | ಮುದ್ರಣ ಮತ್ತು ಲೇಖನ ಸಾಮಗ್ರಿಗಳು | ೧೦೪ | ೧೫೩.೦೪ | ೩೯೭ |
| ೫ | ಚರ್ಮಾಧಾರಿತ ಕೈಗಾರಿಕೆಗಳು | ೫೩ | ೩೧.೯೫ | ೧೫೩ |
| ೬ | ರಬ್ಬರ್ ಮತ್ತು ಪ್ಲಾಸ್ಟಿಕ್ | ೧೯ | ೨೨.೦೦ | ೬೨ |
| ೭ | ರಾಸಾಯನಿಕ ಕೈಗಾರಿಕೆಗಳು | ೧೨೯ | ೮೦.೯೭ | ೫೩೨ |
| ೮ | ಗ್ಲಾಸ್ ಮತ್ತು ಸಿರಾಮಿಕ್ | ೧೦೦ | ೧೭೫೦.೬೫ | ೧೦೭೨ |
| ೯ | ಮೆಟಲ್ ಉತ್ಪನ್ನಗಳು | ೫೨ | ೪೫.೪೭ | ೧೬೦ |
| ೧೦ | ಜನರಲ್ ಇಂಜಿನಿಯರಿಂಗ್ | ೧೫೫ | ೨೨೦.೨೩ | ೭೧೨ |
| ೧೧ | ಎಲೆಕ್ಟ್ರಿಕಲ್ | ೩೬ | ೩೧.೧೭ | ೧೨೨ |
| ೧೨ | ಆಟೋಮೋಬೈಲ್ | ೫೩ | ೧೩.೬೨ | ೨೦೫ |
| ೧೩ | ಸಾಗಾಣಿಕಾ ಸಲಕರಣೆಗಳು | ೨೧ | ೧೭.೨೨ | ೮೪ |
| ೧೪ | ಫೆರಸ್ ಅಂಡ್ ನಾನ್ ಫೆರಸ್ | ೨೭ | ೨೨.೧೪ | ೧೦೮ |
| ೧೫ | ಜಾಬ್ ವರ್ಕ್ ಮತ್ತು ರಿಪೇರಿ | ೪೦೪ | ೨೫೮.೬೫ | ೧೨೩೦ |
| ೧೬ | ಇತರೆ ಸೇವೆಗಳು | ೬೬೨ | ೫೦೮.೦೦ | ೯೧೩ |
| ೧೭ | ಇತರೆ | ೪೪೭ | ೫೪೧.೫೩ | ೧೧೫೨ |
| | ಒಟ್ಟು | **೮೫೭೩** | **೧೦,೨೮೫.೩೯** | **೩೭೬೪೧** |

**ಕೋಷ್ಟಕ : ೫.೪: ೨೦೧೨ರ ಮಾರ್ಚಿ ಅಂತ್ಯಕ್ಕೆ ತಾಲೂಕುವಾರು ಅತಿಸಣ್ಣ ಹಾಗೂ ಸಣ್ಣ ಪ್ರಮಾಣದ ಕೈಗಾರಿಕೆಗಳ ವಿವರ**

| ಕ್ರ.ಸಂ | ತಾಲ್ಲೂಕು | ಘಟಕಗಳ ಸಂಖ್ಯೆ | ಬಂಡವಾಳ (ಲಕ್ಷ ₹ ಗಳು) | ಉದ್ಯೋಗಾವಕಾಶ |
|---|---|---|---|---|
| ೧ | ಚಾಮರಾಜನಗರ | ೨೭೦೮ | ೪೪೨೧.೬೧ | ೧೧೧೫೩ |
| ೨ | ಕೊಳ್ಳೇಗಾಲ | ೩೦೫೭ | ೩೪೪೧.೨೪ | ೧೨೯೫೩ |
| ೩ | ಗುಂಡ್ಲುಪೇಟೆ | ೧೫೨೮ | ೧೩೮೦.೩೨ | ೫೬೨೫ |
| ೪ | ಯಳಂದೂರು | ೧೩೮೬ | ೧೦೪೩.೪೩ | ೭೦೧೦ |
| | ಒಟ್ಟು | **೮೫೭೩** | **೧೦೨೮೫.೫೯** | **೩೭೬೪೧** |

*ಆಧಾರ: ಜಿಲ್ಲಾ ಕೈಗಾರಿಕಾ ಕೇಂದ್ರ, ಚಾಮರಾಜನಗರ*

## ಕೈಮಗ್ಗ ಮತ್ತು ವಿದ್ಯುತ್ ಚಾಲಿತ ಮಗ್ಗಗಳು

ಜಿಲ್ಲೆಯ ೭೪೧ ನೇಕಾರ ಕುಟುಂಬಗಳು ಕೈಮಗ್ಗಗಳ ಸಹಾಯದಿಂದ ರೇಷ್ಮೆ ಸೀರೆ, ಹತ್ತಿ ಸೀರೆ, ಕಾರ್ಪೆಟ್ ಹಾಗೂ ಉಣ್ಣೆ ಕಂಬಳಿಗಳನ್ನು ತಯಾರಿಸುತ್ತಾರೆ. ಇವರು ಪ್ರಧಾನವಾಗಿ ಚಾಮರಾಜನಗರ ತಾಲೂಕಿನ ಅಂಕನಶೆಟ್ಟಿಪುರದಲ್ಲಿ, ಯಳಂದೂರು ತಾಲೂಕಿನ ಬಿಳಿಗಿರಿರಂಗನಬೆಟ್ಟ, ಮಾಂಬಳ್ಳಿಗಳಲ್ಲಿ, ಕೊಳ್ಳೇಗಾಲ ತಾಲೂಕಿನ ಕೋಣನಕೆರೆ, ನೆಲ್ಲೂರು, ಜಲ್ಲಿಪಾಳ್ಯ, ಹೊಗಯಾಮ್, ಬೆಟ್ಟಂಪಾಳ್ಯ, ಸಂದನಪಾಳ್ಯ, ಮಾರಟಳ್ಳಿ, ವಡ್ಡರದೊಡ್ಡಿ, ಹನೂರು, ಕೊಳ್ಳೇಗಾಲಗಳಲ್ಲಿ ಮತ್ತು ಗುಂಡ್ಲುಪೇಟೆ ತಾಲೂಕಿನ ಕಲ್ಲಹಳ್ಳಿ, ವೀರನಪುರ, ಯಾದಹುಂಡಿ, ಹಳೇಹುಂಡಿ, ಚಿಕ್ಕೇಗೌಡನಹುಂಡಿ, ಸಂಜೇಗೌಡನ ಹುಂಡಿ, ತೆರಕಣಾಂಬಿಹುಂಡಿ ಮತ್ತು ಪೇಟೆ ಹೊಸೂರುಗಳಲ್ಲಿ ಕಾರ್ಯನಿರ್ವಹಿಸುತ್ತಿರುವುದನ್ನು ಕಾಣಬಹುದು. ಕೊಳ್ಳೇಗಾಲ ತಾಲೂಕು ೫೨೯ ಕೈಮಗ್ಗ ಕುಟುಂಬಗಳನ್ನು ಹೊಂದಿದ್ದು, ಜಿಲ್ಲೆಯಲ್ಲಿ ಮೊದಲ ಸ್ಥಾನದಲ್ಲಿದ್ದರೆ, ಗುಂಡ್ಲುಪೇಟೆ ತಾಲೂಕು ೧೪೯ ಕುಟುಂಬಗಳನ್ನು ಹೊಂದಿ, ಎರಡನೆ ಸ್ಥಾನ, ಚಾಮರಾಜನಗರ ಮತ್ತು ಯಳಂದೂರು ತಾಲೂಕುಗಳು ಅನುಕ್ರಮವಾಗಿ ೬೦ ಮತ್ತು ೨೩ ಕುಟುಂಬಗಳನ್ನು ಹೊಂದಿದ್ದು, ಮೂರು ಮತ್ತು ನಾಲ್ಕನೆ ಸ್ಥಾನದಲ್ಲಿವೆ. ಇವರಿಗೆ ತಿಂಗಳಿಗೆ ಒಟ್ಟು ೩,೦೦೦ ಕೆ. ಜಿ. ರೇಷ್ಮೆ ಮತ್ತು ೫,೦೦೦ ಕೆ.ಜಿ. ಹತ್ತಿ ನೂಲಿನ ಪೂರೈಕೆಯಾಗಬೇಕಿದೆ. ಇವರಿಗೆ ಕೈಮಗ್ಗ ನೇಕಾರರ ಸಹಕಾರ ಸಂಘ, ಕೆ.ಎಚ್.ಡಿ.ಸಿ. ಹಾಗೂ ಕೈಮಗ್ಗ ಏಜೆನ್ಸಿಗಳ ಮೂಲಕ ಮಾರುಕಟ್ಟೆಯ ಸೌಲಭ್ಯ ದೊರಕುತ್ತದೆ. ಕೊಳ್ಳೇಗಾಲ ಕೈಗಾರಿಕಾ ವಸಾಹತುವಿನಲ್ಲಿ ೪೫ ವಿದ್ಯುತ್ ಚಾಲಿತ ಕೈಮಗ್ಗಗಳು ಕಾರ್ಯನಿರ್ವಹಿಸುತ್ತಿವೆ.

**ಕೋಷ್ಟಕ ೫.೫: ಜಿಲ್ಲೆಯಲ್ಲಿ ೩೧-೩-೨೦೦೮ರಲ್ಲಿದ್ದ ತಾಲೂಕುವಾರು ಕೈಮಗ್ಗ ಕುಟುಂಬಗಳ ವಿವರ**

| ಕ್ರ.ಸಂ | ತಾಲೂಕು | ಕೈಮಗ್ಗ ಪ್ರಧಾನ ಹಳ್ಳಿ/ ಪಟ್ಟಣ | ಕೈಮಗ್ಗ ಅವಲಂಭಿತ ಕುಟುಂಬಗಳು | ಒಟ್ಟು |
|---|---|---|---|---|
| ೧. | ಚಾಮರಾಜನಗರ | ಅಂಕನಶೆಟ್ಟಿಪುರ | ೬೦ | ೬೦ |
| ೨. | ಯಳಂದೂರು | ೧) ಬಿಳಿಗಿರಿರಂಗನ ಬೆಟ್ಟ | ೧೩ | ೨೩ |
| | | ೨) ಮಾಂಬಳ್ಳಿ | ೧೦ | |
| ೩. | ಕೊಳ್ಳೇಗಾಲ | ೧) ಕೋಣನಕೆರೆ | ೪೫ | |
| | | ೨) ನೆಲ್ಲೂರು | ೦೬ | |
| | | ೩) ಜೆಲ್ಲಿ ಪಾಳ್ಯ | ೧೪ | |
| | | ೪) ಹೊಗಯಾಮ್ | ೧೦ | |
| | | ೫) ಬೆಟ್ಟಂ ಪಾಳ್ಯ | ೧೦ | |
| | | ೬) ಸಂದನಪಾಳ್ಯ | ೨೬ | |

**ಕೋಷ್ಟಕ ೫.೫ ಮುಂದುವರೆದಿದೆ**

| ಕ್ರ.ಸಂ | ತಾಲೂಕು | ಕೈಮಗ್ಗ ಪ್ರಧಾನ ಹಳ್ಳಿ/ ಪಟ್ಟಣ | ಕೈಮಗ್ಗ ಅವಲಂಭಿತ ಕುಟುಂಬಗಳು | ಒಟ್ಟು |
|---|---|---|---|---|
| ೩ | **ಕೊಳ್ಳೇಗಾಲ (ಮುಂದುವರೆದಿದೆ)** | ೭) ಮಾರಳ್ಳಿ | ೩೧ | |
| | | ೮) ವಡ್ಡರದೊಡ್ಡಿ | ೧೭ | |
| | | ೯) ಹನೂರು | ೩೪ | |
| | | ೧೦) ಕೊಳ್ಳೇಗಾಲ ಟೌನ್ | ೯೬ | |
| | | ೧೧) ಕೊಳ್ಳೇಗಾಲ ಟೌನ್ | ೭೮ | |
| | | ೧೨) ಕೊಳ್ಳೇಗಾಲ ಟೌನ್ | ೨೦ | |
| | | ೧೩)ಕೊಳ್ಳೇಗಾಲ ಟೌನ್(ಕೆ.ಎಚ್.ಡಿ.ಸಿ) | ೭೯ | ೫೦೯ |
| ೪. | **ಗುಂಡ್ಲುಪೇಟೆ** | ೧) ಕಲ್ಲಹಳ್ಳಿ | ೦೯ | |
| | | ೨) ವೀರನಪುರ | ೦೪ | |
| | | ೩) ಯಡಹುಂಡಿ | ೧೫ | |
| | | ೪) ಹಳೆಹುಂಡಿ | ೦೮ | |
| | | ೫) ಚಿಕ್ಕೇಗೌಡನಹುಂಡಿ | ೧೦ | |
| | | ೬) ಸಂಜೇಗೌಡನ ಹುಂಡಿ | ೪೦ | |
| | | ೭) ತೆರಕಣಾಂಬಿ ಹುಂಡಿ | ೦೩ | |
| | | ೮) ಪೇಟೆ ಹೊಸೂರು | ೬೦ | ೧೪೯ |
| | | | **ಒಟ್ಟು** | **೭೪೧** |

## ಖಾದಿ ಮತ್ತು ಗ್ರಾಮೋದ್ಯೋಗ

ಗ್ರಾಮೀಣ ಪ್ರದೇಶದ ತೀವ್ರತರ ಸಮಸ್ಯೆಗಳಾದ ನಿರುದ್ಯೋಗ ಮತ್ತು ಬಡತನಗಳ ನಿರ್ಮೂಲನೆಗೆ ಪರಿಹಾರ ಮಾರ್ಗವೊಂದಿರಬೇಕೆಂದು ಮನಗಂಡ ಗಾಂಧೀಜಿಯವರು ಖಾದಿ ಮತ್ತು ಗ್ರಾಮೋದ್ಯೋಗಗಳ ಪುನರುತ್ಥಾನಕ್ಕೆ ರಾಷ್ಟ್ರೀಯ ಆಂಧೋಲನವನ್ನು ಆರಂಭಿಸಿದರು. ಸ್ವದೇಶಿ ಚಳವಳಿಯಿಂದ ಖಾದಿ ನೂಲು ಮತ್ತು ನೇಯ್ಗೆಗೆ ಪ್ರಾಮುಖ್ಯತೆ ದೊರಕಿತು. ಸ್ವಾತಂತ್ರ್ಯ ಪೂರ್ವದಲ್ಲಿ ಖಾದಿ ಬಟ್ಟೆ ಸ್ವಾತಂತ್ರ್ಯ ಹೋರಾಟಗಾರರ ಸಮವಸ್ತ್ರವಾಗಿತ್ತು. ಖಾದಿ ತೊಡುವ ಜನರು ಗಾಂಧೀಜಿಯವರ ಹಾಗೆ ಚರಕ ಸಂಘದ ಜನಕರಾದರು. ಕರ್ನಾಟಕ ರಾಜ್ಯ ಸರ್ಕಾರ ೧೯೫೭ರಲ್ಲಿ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯನ್ನು ಶಾಸನಬದ್ಧ ಸಂಸ್ಥೆಯನ್ನಾಗಿ ಮಾಡಿ ಗ್ರಾಮೀಣ ಕುಶಲಕರ್ಮಿಗಳು, ಕಸುಬುದಾರರು, ವಿದ್ಯಾವಂತ ನಿರುದ್ಯೋಗಿಗಳು ಮತ್ತು ಮಹಿಳೆಯರು ಇವರಿಗೆ ತಾವಿರುವ ಸ್ಥಳದಲ್ಲಿಯೇ ಉದ್ಯೋಗ ದೊರಕಿಸಿಕೊಡುವಂತೆ ಮಾಡಿದೆ. ಗ್ರಾಮೀಣ ಪ್ರದೇಶದಲ್ಲಿ ಖಾದಿ ಮತ್ತು ಗ್ರಾಮೋದ್ಯೋಗಗಳನ್ನು ಕೈಗೊಂಡು ನಡೆಸುವ ವೈಯಕ್ತಿಕ ಕಸುಬುದಾರರಿಗೆ, ನೋಂದಾಯಿತ ಸಂಘ ಸಂಸ್ಥೆಗಳಿಗೆ ಹಣಕಾಸಿನ ನೆರವು ಮತ್ತು ತಾಂತ್ರಿಕ ಮಾರ್ಗದರ್ಶನ ನೀಡುವುದು ಈ ಮಂಡಳಿಯ ಮುಖ್ಯ ಕರ್ತವ್ಯವಾಗಿದೆ. ಕೇಂದ್ರ ಖಾದಿ ಮತ್ತು ಗ್ರಾಮೋದ್ಯೋಗ ಆಯೋಗವು ಆಯವ್ಯಯ ಹಂಚಿಕೆಯ ಮೂಲಕ ನೀಡುವ ಹಣಕಾಸನ್ನು ರಾಜ್ಯಮಂಡಳಿಯು ಪ್ರತಿ ವರ್ಷ ತಯಾರಿಸುವ ಕ್ರೀಯಾ ಯೋಜನೆಯ ರಿತ್ಯ ವೈಯಕ್ತಿಕ ಕಸುಬುದಾರರಿಗೆ, ನೋಂದಾಯಿತ ಸಂಘ ಸಂಸ್ಥೆಗಳಿಗೆ ಹಾಗೂ ಸಹಕಾರ ಸಂಘಗಳಿಗೆ, ಖಾದಿ ಮತ್ತು ಗ್ರಾಮೋದ್ಯೋಗಗಳನ್ನು ನಡೆಸಲು, ಖಾದಿ ಆಯೋಗವು ಗೊತ್ತುಪಡಿಸಿರುವ "ಧನಸಹಾಯ ಸ್ವರೂಪ"ದನ್ವಯ ವಿತರಣೆ ಮಾಡುತ್ತದೆ.

ಸರ್ಕಾರದ ಪರವಾಗಿ ಖಾದಿ ಕಾರ್ಯವನ್ನು ಮೊಟ್ಟ ಮೊದಲು ಪ್ರಾರಂಭಿಸಿದ ಕೀರ್ತಿ ಅಂದಿನ ಮೈಸೂರು ಮಹಾರಾಜರ ಸರಕಾರಕ್ಕೆ ಸಲ್ಲುತ್ತದೆ. ಸರ್. ಮಿರ್ಜಾ ಇಸ್ಮಾಯಿಲ್‌ರವರು ಗಾಂಧೀಜಿಯವರ ಭೇಟಿಯ ಸವಿ ನೆನಪಿಗಾಗಿ ೧೯೨೭ರಲ್ಲಿ ಮೈಸೂರು ಜಿಲ್ಲೆಯ ಬದನವಾಳು ಮತ್ತು ಚಿತ್ರದುರ್ಗ ಜಿಲ್ಲೆಯ ಐಮಂಗಲದಲ್ಲಿ ಸರ್ಕಾರದ ಪರವಾಗಿ ಖಾದಿ ಕಾರ್ಯವನ್ನಾರಂಭಿಸಿದರು. ಇದೇ ಸಮಯದಲ್ಲಿ ಚರಕಾ ಸಂಘ, ಅಖಿಲಭಾರತ ನೂಲುವವರ ಸಂಘ, ಸರ್ವಸೇವಾ ಸಂಘ ಮೊದಲಾದವುಗಳು ಪ್ರಾರಂಭಗೊಂಡವು. ಅಖಿಲ ಭಾರತ ಗ್ರಾಮೋದ್ಯೋಗ ಮಂಡಳಿ ರಚನೆಯಾದದ್ದು ಇದೇ ಕಾಲಾವಧಿಯಲ್ಲಿ. ತಾಂತ್ರಿಕತೆಯಲ್ಲಿ ಅನೇಕ ಸಂಶೋಧನೆಗಳು ನಡೆದು ಆರು ಕದಿರುಗಳ ಅಂಬರ ಚರಕದ ಅವಿಷ್ಕಾರವಾಯಿತು. ಸುಧಾರಿತ ಸೇವಾಗ್ರಾಮದ ಮಾದರಿಯ ಮಗ್ಗಗಳು ತಯಾರಿಸಲ್ಪಟ್ಟವು.

ಖಾದಿ ವ್ಯಾಖ್ಯೆಯಲ್ಲಿ ಅರಳೆ ಖಾದಿಯಲ್ಲದೆ ರೇಷ್ಮೆ, ಉಣ್ಣೆ, ಮಸ್ಲಿನ್ ಮತ್ತು ಪಾಲಿವಸ್ತ್ರಗಳ ಉತ್ಪಾದನೆಯೂ ಸೇರಿಸಲ್ಪಟ್ಟಿದೆ. ಗ್ರಾಮೀಣ ಕೈಗಾರಿಕೆ ಎಂದರೆ ಕಂದಾಯ ಇಲಾಖೆಯ ದಾಖಲೆಯಂತೆ ಯಾವ ಪ್ರದೇಶವನ್ನು ಗ್ರಾಮ ಎಂದು ಪರಿಗಣಿಸಲಾಗಿದೆಯೊ ಅಂತಹ ಪ್ರದೇಶದಲ್ಲಿ ಉತ್ಪತ್ತಿಮಾಡಲಾಗುವ ವಸ್ತುಗಳ ಉದ್ದಿಮೆ ಹಾಗೂ ಸೇವೆ ಎಂದು ಮತ್ತು ಬಂಡವಾಳ ಹೂಡಿಕೆಯು ₹ ೧೫ಸಾವಿರಕ್ಕಿಂತ ಅಧಿಕವಿರಕೂಡದೆಂದು ವ್ಯಾಖ್ಯಾನಿಸಲಾಗಿದೆ. ಆರಂಭದ ದಿನಗಳಲ್ಲಿ ಮಂಡಳಿಯ ವ್ಯಾಪ್ತಿಯಲ್ಲಿ ಸಾಂಪ್ರದಾಯಕವೆನ್ನಬಹುದಾಂತಹ ೨೬ ಉದ್ದಿಮೆಗಳಿದ್ದವು. ಈಗ ಆ ೨೬ ಉದ್ದಿಮೆಗಳ ಜೊತೆಗೆ ಇನ್ನೂ ಸುಮಾರು ೯೦ ಉದ್ದಿಮೆಗಳು ಸೇರ್ಪಡೆಯಾಗಿವೆ. ಇವುಗಳನ್ನು ಪ್ರಧಾನವಾಗಿ ಖನಿಜ ಆಧಾರಿತ ಉದ್ದಿಮೆಗಳು, ಅರಣ್ಯ ಆಧಾರಿತ ಕೈಗಾರಿಕೆ, ಕೃಷಿ ಹಾಗೂ ಆಹಾರ ಆಧಾರಿತ ಉದ್ದಿಮೆಗಳು, ಪಾಲಿಮರ್ ಮತ್ತು ರಾಸಾಯನಿಕ ಆಧಾರಿತ ಉದ್ದಿಮೆಗಳು, ಎಂಜಿನಿಯರಿಂಗ್ ಹಾಗೂ ಅಸಂಪ್ರದಾಯಕ ಶಕ್ತಿ ಆಧಾರಿತ ಉದ್ದಿಮೆಗಳು, ವಸ್ತ್ರೋದ್ಯಮ (ಖಾದಿಯನ್ನು ಹೊರತುಪಡಿಸಿ) ಮತ್ತು ಸೇವಾ ಉದ್ದಿಮೆಗಳು ಎಂದು ವಿಂಗಡಿಸಲ್ಪಟ್ಟ ೧೧೬ ಕೈಗಾರಿಕಾ ಚಟುವಟಿಕೆಗಳು ಇದರ ಕಕ್ಷೆಗೆ ಸೇರಿವೆ.

ಖಾದಿ ಮತ್ತು ಗ್ರಾಮೋದ್ಯೋಗಕ್ಕೆ ಹೆಚ್ಚಿನ ಪ್ರೋತ್ಸಾಹ ಕೊಡುವುದಕ್ಕಾಗಿ ೧೯೫೬ರ ಖಾದಿ ಮತ್ತು ಗ್ರಾಮೋದ್ಯೋಗ ಕಾಯ್ದೆಯನ್ನು ಜಾರಿಗೊಳಿಸಿದುದರ ಪರಿಣಾಮವಾಗಿ ಅಖಿಲ ಭಾರತ ಖಾದಿ ಮಂಡಳಿಯು ಹೆಚ್ಚಿನ ಅಧಿಕಾರದೊಂದಿಗೆ ೧೯೫೭ರಲ್ಲಿ ಅಖಿಲ ಭಾರತ ಖಾದಿ ಆಯೋಗವಾಗಿ ಪರಿವರ್ತಿತಗೊಂಡಿತು. ಇದರ ಅಧಿಕೃತ ಕಾರ್ಯಗಳು ಕಚ್ಚಾ ಮಾಲು ಸಂಗ್ರಹಿಸುವುದು ಮತ್ತು ಪೂರೈಸುವುದು, ಸಿದ್ಧವಸ್ತುಗಳನ್ನು ವಿಲೇವಾರಿಮಾಡುವುದು, ಕಸುಬುದಾರರ ತರಬೇತಿಯ ಮೇಲ್ವಿಚಾರಣೆ ನಡೆಸುವುದು, ತಾಂತ್ರಿಕ ಕಾರ್ಯಕ್ಕೆ ನೆರವನ್ನೊದಗಿಸುವುದು, ಸುಧಾರಿತ ಸಾಧನಗಳ ಪೂರೈಕೆ ಮಾಡುವುದು ಮತ್ತು ಗ್ರಾಮೋದ್ಯೋಗ ಕಾರ್ಯಗಳಿಗೆ ಸಹಾಯಧನ, ಸಾಲ ಸೌಲಭ್ಯ ಮೊದಲಾದವುಗಳನ್ನು ನಿರ್ವಹಿಸುವುದಾಗಿದೆ.

ಸ್ವಾತಂತ್ರ್ಯ ಪೂರ್ವದಿಂದಲೂ ಜಿಲ್ಲೆಯಲ್ಲಿ ಕೆಲವು ಜನರ ಕುಲಕಸುಬುಗಳಾದ ಕುಂಬಾರಿಕೆ, ಬಡಗಿ ಕೆಲಸ, ಗಾಣದಿಂದ ಎಣ್ಣೆ ತೆಗೆಯುವುದು, ಚರ್ಮೋದ್ಯಮ ಬೆತ್ತ ಮತ್ತು ಬಿದಿರಿನಿಂದ ಬುಟ್ಟಿ ಎಣೆಯುವುದು ಮೊದಲಾದ ಉದ್ಯಮಗಳು ಕಾಣಬರುತ್ತವೆ. ಇವು ೧೯೫೭ರ ನಂತರ ಖಾದಿ ಮತ್ತು ಗ್ರಾಮೋದ್ಯೋಗಗಳ ವ್ಯಾಪ್ತಿಗೊಳಪಟ್ಟು ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯಿಂದ ಆರ್ಥಿಕ ನೆರವನ್ನು ಪಡೆಯುತ್ತಿವೆ. ಇವುಗಳಲ್ಲಿ ಪ್ರಮುಖವಾದವುಗಳನ್ನು ಈ ಕೆಳಗೆ ವಿವರಿಸಲಾಗಿದೆ.

**ಕಮ್ಮಾರಿಕೆ ಮತ್ತು ಮರಗೆಲಸ:** ಕಮ್ಮಾರಿಕೆ ಮತ್ತು ಬಡಗಿ ಕೆಲಸ ಗ್ರಾಮಾಂತರ ಪ್ರದೇಶದಲ್ಲಿನ ಪ್ರಮುಖ ಉದ್ಯಮವಾದ ಕೃಷಿಗೆ ಪೂರಕವಾಗಿವೆ. ರೈತರ ಉಳುಮೆಗೆ ಬೇಕಾದ ಬೇಸಾಯ ಉಪಕರಣಗಳು, ಗೃಹನಿರ್ಮಾಣಕ್ಕೆ ಬೇಕಾಗುವ ತೊಲೆ, ಬಾಗಿಲು, ಕಿಟಕಿ ಮೊದಲಾದವುಗಳು, ಗೃಹ ಅಲಂಕಾರಿಕ ವಸ್ತುಗಳು, ಪೀಠೋಪಕರಣಗಳು, ಮೊದಲಾದವುಗಳನ್ನು ತಯಾರಿಸಲು ಕಮ್ಮಾರ ಮತ್ತು ಬಡಗಿ ಇವರುಗಳ ನೆರವು ಅತ್ಯಾವಶ್ಯಕವಾಗಿ ಬೇಕಾಗುತ್ತದೆ. ಜಿಲ್ಲೆಯಲ್ಲಿ ಕಮ್ಮಾರಿಕೆ ಮತ್ತು ಮರಗೆಲಸ ಮಾಡುವುದು ಕೆಲವರ ಉಪಕಸುಬಾಗಿದ್ದರೆ ಮತ್ತೆ ಕೆಲವರು ವಂಶಪಾರಂಪರ್ಯಾ ಕಸುಬನ್ನು ಬಿಡದೆ ಹಾಗೆ ಮುಂದುವರಿಸಿಕೊಂಡು ಬಂದಿದ್ದಾರೆ. ಜಿಲ್ಲೆಯಲ್ಲಿ ೨೦೦೮ರ ಮಾರ್ಚ್ ಅಂತ್ಯದಲ್ಲಿ ೩೦೮೮ ಮಂದಿ ಕಮ್ಮಾರಿಕೆ ಮತ್ತು ಬಡಗಿ ಕೆಲಸದಲ್ಲಿ ತೊಡಗಿದ್ದರು. ಇವರು ಜಿಲ್ಲೆಯ ಎಲ್ಲಾ ದೊಡ್ಡ ಹಳ್ಳಿಗಳಲ್ಲಿ ವಾಸವಾಗಿದ್ದು, ರೈತರಿಗೆ ನೆರವನ್ನೊದಗಿಸುತ್ತಿರುವರು.

**ಎಣ್ಣೆ ತೆಗೆಯುವುದು:** ಜಿಲ್ಲೆಯ ಗ್ರಾಮಾಂತರ ಪ್ರದೇಶದಲ್ಲಿ ಗಾಣಗಳ ಸಹಾಯದಿಂದ ಎಣ್ಣೆ ತೆಗೆಯುವುದು ಗಾಣಿಗ ಜನಾಂಗದ ಪ್ರಮುಖ ಕಸುಬಾಗಿತ್ತು. ಇತ್ತೀಚೆಗೆ ಗಾಣಗಳು ಕಣ್ಮರೆಯಾಗಿ ಅವುಗಳ ಸ್ಥಾನವನ್ನು ಎಣ್ಣೆ ಮಿಲ್ಲುಗಳು ಆಕ್ರಮಿಸಿಕೊಂಡು ಪಟ್ಟಣ ಪ್ರದೇಶದಲ್ಲಿ ಸ್ಥಾಪನೆಗೊಂಡಿವೆ. ಇವು ಎಳ್ಳು, ಹುಚ್ಚೆಳ್ಳು, ಹರಳು, ಸೂರ್ಯಕಾಂತಿ, ಹೊಂಗೆ, ಹಿಪ್ಪೆ, ಬೇವು ಮೊದಲಾದವುಗಳಿಂದ ಎಣ್ಣೆ ತೆಗೆದುಕೊಡುತ್ತವೆ ಅಥವಾ ಎಣ್ಣೆ ತೆಗೆದು ಮಾರಾಟ ಮಾಡುತ್ತವೆ. ಹಿಂದೆ ಇದು ಗಾಣಿಗರ ಮುಖ್ಯ ಕಸುಬಾಗಿತ್ತು. ಈಗ ಈ ಉದ್ಯಮದಲ್ಲಿ ಎಲ್ಲಾ ಜಾತಿಯವರೂ ತೊಡಗಿದ್ದಾರೆ. ೧೯೮೬ರಲ್ಲಿ ೧೧ ಎಣ್ಣೆಗಾಣಗಳು ಜಿಲ್ಲೆಯಲ್ಲಿದ್ದವು. ಈಗ ಅವು ಪೂರ್ಣವಾಗಿ ಕಣ್ಮರೆಯಾಗಿವೆ.

**ಕುಂಬಾರಿಕೆ:** ಮಣ್ಣಿನಿಂದ ಮಡಿಕೆ, ಕುಡಿಕೆ, ಹೂಕುಂಡ, ದೀಪ ಮೊದಲಾವುಗಳನ್ನು ತಯಾರಿಸಿ ಮಾರಾಟ ಮಾಡುವ ಕಸುಬನ್ನು ಕರಗತ ಮಾಡಿಕೊಂಡಿರುವ ಜನಾಂಗವನ್ನು ಕುಂಬಾರರೆನ್ನುತ್ತಾರೆ. ಇವರು ಜಿಲ್ಲೆಯ ದೊಡ್ಡ ದೊಡ್ಡ ಹಳ್ಳಿಗಳಲ್ಲಿ ವಾಸವಾಗಿದ್ದುಕೊಂಡು ಸ್ಥಳೀಯರಿಗೆ ಅವಶ್ಯಕವಾಗಿ ಬೇಕಾಗುವ ಮಣ್ಣಿನ ಮಡಿಕೆ, ಕುಡಿಕೆ, ಮುಚ್ಚಳ, ಹೂಕುಂಡ, ನಾಡಹೆಂಚು ಮೊದಲವುಗಳನ್ನು ತಯಾರಿಸಿಕೊಡುತ್ತಾರೆ. ದೀಪಾವಳಿ, ಗಣೇಶಹಬ್ಬಗಳ ಕಾಲದಲ್ಲಿ ಜನಗಳಿಗೆ ಬೇಕಾಗುವ ದೀಪ, ಗೌರಿ ಮತ್ತು ಗಣೇಶ ವಿಗ್ರಹಗಳು ಮೊದಲಾದವುಗಳನ್ನು ತಯಾರಿಸಿ ಮಾರಾಟಮಾಡುತ್ತಾರೆ. ಇದನ್ನು ತಯಾರಿಸಲು ಬೇಕಾಗುವ ಉಪಕರಣಗಳು ಮರದಿಂದ ತಯಾರಿಸಿದವುಗಳಾಗಿರುತ್ತವೆ. ಮಡಿಕೆ ತಯಾರಿಕೆಗೆ ಬೇಕಾಗುವ ಮಣ್ಣನ್ನು ಕೆರೆಯ ಅಂಗಳ ಅಥವಾ ನದಿಯ ದಂಡೆಯಿಂದ ಅಗೆದು ತರುತ್ತಾರೆ. ಜಿಲ್ಲೆಯಲ್ಲಿ ೨೦೦೮ನೇ ಮಾರ್ಚ್ ಅಂತ್ಯದಲ್ಲಿ ೩೩೫ ಮಂದಿ ಕುಂಬಾರಿಕಾ ಉದ್ಯಮಾವಲಂಭಿಗಳಿದ್ದರು.

**ಚರ್ಮೋದ್ಯಮ:** ಚರ್ಮ ಹದ ಮಾಡುವುದು, ಅದರಿಂದ ಚಪ್ಪಲಿ, ತಮಟೆ, ಕುದುರೆ ಜೀನ್ಸ್ ಮೊದಲಾದವುಗಳನ್ನು ತಯಾರಿಸಿ ಮಾರಾಟ ಮಾಡುವುದು. ಮೋಚಿಗಳ ಮುಖ್ಯ ಕಸುಬು. ಇವರು ಗ್ರಾಮಾಂತರ ಮತ್ತು ಪಟ್ಟಣ ಪ್ರದೇಶಗಳೆರಡರಲ್ಲೂ ವಾಸಿಸುವುದುನ್ನು ಕಾಣಬಹುದು. ಜಿಲ್ಲೆಯಲ್ಲಿ ೨೦೦೮ರ ಮಾರ್ಚ್ ಅಂತ್ಯದ ವೇಳೆಯಲ್ಲಿ ೮೬೮ ಮಂದಿ ಚರ್ಮೋದ್ಯಮಾವಲಂಬಿಗಳಿದ್ದರು.

**ಇತರೆ ಗೃಹ ಕೈಗಾರಿಕೆ:** ಇತರೆ ಗೃಹ ಕೈಗಾರಿಕಾ ವ್ಯಾಪ್ತಿಯಲ್ಲಿ ಅಕ್ಕಸಾಲಿಗರು, ಸುಣಗಾರರು, ಚಿಪ್ಪಿಗರು, ಮನೆಕಟ್ಟುವವರು, ಕಲ್ಲುಕುಟಕರು, ಹತ್ತಿ ಮತ್ತು ರೇಷ್ಮೆ ಕುಶಲಕರ್ಮಿಗಳು, ರೇಷ್ಮೆ ನೂಲು ತೆಗೆಯುವವರು, ಮೇದರು, ಜೇನು ಸಾಕಣೆದಾರರು, ಅಗರಬತ್ತಿ ತಯಾರಕರು, ದೋಬಿಗಳು, ಕ್ಷೌರಿಕರು, ಬೀಡಿ ಸುತ್ತುವವರು ಮೊದಲಾದವರು ಸೇರಿದ್ದು, ಹೆಚ್ಚಿನ ವಿವರಗಳಿಗೆ ಕೋಷ್ಟಕ ೫.೬ ಅನ್ನು ನೋಡಿ

**ಕೋಷ್ಟಕ ೫.೬: ಜಿಲ್ಲೆಯಲ್ಲಿ ೩೧–೩–೨೦೦೮ರಲ್ಲಿದ್ದ ತಾಲೂಕುವಾರು ವೃತ್ತಿಪರ ಕಸುಬುದಾರರ ವಿವರ**

| ಕ್ರ.ಸಂ | ವೃತ್ತಿಪರ ಕಸುಬುದಾರರು | ಚಾಮರಾಜನಗರ | ಗುಂಡ್ಲುಪೇಟೆ | ಕೊಳ್ಳೇಗಾಲ | ಯಳಂದೂರು | ಒಟ್ಟು ಕಸುಬು ದಾರರು |
|---|---|---|---|---|---|---|
| ೧. | ಬಡಗಿ (ಮರಗೆಲಸ) | ೫೫೦ | ೫೮೩ | ೫೮೬ | ೧೩೨ | ೧,೮೫೧ |
| ೨. | ಕಮ್ಮಾರರು | ೪೫೦ | ೩೦೬ | ೩೮೪ | ೯೭ | ೧,೨೩೭ |
| ೩. | ಅಕ್ಕಸಾಲಿಗರು | ೧೨೦ | ೯೫ | ೭೪ | ೨೧ | ೩೧೦ |
| ೪. | ಸಮಗಾರರು (ಮೋಚಿ) | ೩೫೦ | ೧೫೫ | ೨೪೭ | ೧೧೬ | ೮೬೮ |
| ೫. | ಸುಣಗಾರರು (ಸುಣ್ಣ ಸುಡುವವರು) | ೮೦ | ೫೪ | ೬೨ | ೧೪೬ | ೩೪೨ |
| ೬. | ಚಿಪ್ಪಿಗರು (ಒಟ್ಟೆ ಹೊಲೆಯುವವರು) | ೪೧೦ | ೩೦೭ | ೬೬೬ | ೩೫೮ | ೧,೭೪೧ |
| ೭. | ಕಟ್ಟಡದವರು | ೮೦೦ | ೪೭೪ | ೭೨೮ | ೧೮೦ | ೨,೧೮೨ |
| ೮. | ಕಲ್ಲು ಕುಟಕರು | ೫೫೦ | ೨೩೪ | ೩೧೪ | ೨೧೮ | ೧,೩೧೬ |
| ೯. | ಹತ್ತಿ ಮತ್ತು ರೇಷ್ಮೆ ಕುಶಲಕರ್ಮಿಗಳು | ೫೪೦ | ೧೩ | ೫೧೯ | ೫೧೪ | ೧,೫೮೬ |
| ೧೦. | ಉಣ್ಣೆ ನೇಯ್ಗೆಯವರು | ೫೨ | ೪೯ | ೨೮ | ೧೨೭ | ೨೫೬ |
| ೧೧. | ನಾರು ತಯಾರಕರು | ೩೫೦ | ೩೨೦ | – | ೫೭ | ೭೨೭ |
| ೧೨. | ಚಾಪೆ ಹೆಣೆಯುವವರು | ೬೨ | ೯೬ | ೧೫೭ | ೧೦ | ೩೨೫ |
| ೧೩. | ಕೈಮಗ್ಗ ನೇಯ್ಗೆಯವರು | ೦೪ | ೧೨ | ೨೪೩ | ೧೨ | ೨೭೧ |
| ೧೪. | ಕುಂಬಾರರು | ೯೦ | ೧೧೦ | ೨೫ | ೧೧೦ | ೩೩೫ |
| ೧೫. | ಮೇದರು (ಬಿದಿರು ಕೆಲಸದವರು) | ೨೨೦ | ೧೬೨ | ೧೫೩ | ೧೬೦ | ೬೯೫ |
| ೧೬. | ಜೇನು ಸಾಕಣೆದಾರರು | ೬೦ | ೭೭ | ೬೧ | ೮೦ | ೨೭೮ |
| ೧೭. | ರೇಷ್ಮೆ ನೂಲು ತೆಗೆಯುವವರು | ೮೦ | ೦೧ | ೩೦೭ | ೬೨೨ | ೧,೦೧೦ |
| ೧೮. | ಮರದ ಕೆತ್ತನೆ ಕೆಲಸದವರು | – | ೧೮ | ೧೫ | ೦೪ | ೩೭ |
| ೧೯. | ಲೋಹದ ಕುಶಲಕರ್ಮಿಗಳು | ೧೦ | ೦೬ | – | – | ೧೬ |
| ೨೦. | ಲೋಹದ ತಗಡು ತಯಾರಕರು | ೧೦ | – | ೧೮ | ೧೦ | ೩೮ |
| ೨೧. | ಅಗರಬತ್ತಿ ತಯಾರಕರು | ೪೦೦ | ೫೫ | ೩೦ | ೧೬೦ | ೬೪೫ |
| ೨೨. | ಹೆಣಿಕೆಗಾರರು (ನಿಟ್ಟಿಂಗ್) | ೬೦ | ೬೩ | ೪೨೭ | ೭೭ | ೬೨೭ |
| ೨೩. | ಕಡ್ಡಿ ಪೊರಕೆ ತಯಾರಕರು | ೧೦೦ | ೧೨೫ | ೦೯ | ೨೭ | ೨೬೧ |
| ೨೪. | ದೋಬಿಗಳು | ೨೫೦ | ೨೪೮ | ೨೪೮ | ೧೪೦ | ೮೮೬ |
| ೨೫. | ಕ್ಷೌರಿಕರು | ೨೫೦ | ೪೧೯ | ೨೮೧ | ೧೩೪ | ೧,೦೮೪ |
| ೨೬. | ಬೀಡಿ ಸುತ್ತುವವರು | ೧,೫೦೦ | ೮೩ | ೧೮೭ | ೪೩೫ | ೨,೨೦೫ |
| | ಒಟ್ಟು | **೭,೩೪೮** | **೪,೦೬೫** | **೫,೮೧೪** | **೩,೯೪೭** | **೨೧,೧೭೪** |

*ಆಧಾರ: ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ, ಚಾಮರಾಜನಗರ.*

ಜಿಲ್ಲೆಯಲ್ಲಿ ವಿವಿಧ ಯೋಜನೆಯಡಿಯಲ್ಲಿ ೨೦೧೧–೧೨ರ ವರೆಗೆ ನೀಡಲಾಗಿರುವ ಸಾಲ ಹಾಗೂ ಅನುದಾನ ಮತ್ತು ಅಂಚು ಹಣ ಸೌಲಭ್ಯ, ಸಾಲ ಮರುಪಾವತಿ ಹಾಗೂ ಬಾಕಿ ಇವುಗಳ ವಿವರಗಳನ್ನು ಕೋಷ್ಟಕ ೫.೭ರಲ್ಲಿ ನೀಡಿದೆ.

**ಕೋಷ್ಟಕ ೫.೭**

(ಲಕ್ಷ ₹ ಗಳಲ್ಲಿ)

| ಕ್ರ. ಸಂ | ಯೋಜನೆ | ಸಾಲ | ಅನುದಾನ ಅಂಚು ಹಣ | ಮರುಪಾವತಿ | | ಬಾಕಿ | |
|---|---|---|---|---|---|---|---|
| | | | | ಸಾಲ | ಬಡ್ಡಿ | ಸಾಲ | ಬಡ್ಡಿ |
| ೧. | ಧನ ಸಹಾಯ ಸ್ವರೂಪ ಯೋಜನೆ ೨೦೧೨ರ ವರೆಗೆ | ೬೬.೧೬ | ೨.೫೨ | ೨೮.೩೭ | ೯.೮೯ | ೩೯.೧೭ | ೧೨.೧೬ |
| ೨. | ಸಮೂಹ ಬ್ಯಾಂಕ್ ಸಾಲಸೌಲಭ್ಯ ಯೋಜನೆ ೨೦೧೨ರ ವರೆಗೆ | ೬೦.೧೬ | ೨೩.೧೩ | ೯.೩೨ | ೨೬.೮೩ | ೫೮.೭೯ | ೭೪.೭೫ |
| ೩. | ಆರ್. ಇ. ಜಿ. ಪಿ. ಅಂಚು ಹಣ ೩೧-೦೩-೨೦೧೨ರ ವರೆಗೆ | – | ೫೬.೦೨ | – | – | – | – |
| | ಒಟ್ಟು | ೧೨೬.೩೨ | ೮೧.೬೭ | ೩೭.೬೯ | ೩೬.೭೨ | ೯೭.೯೬ | ೮೬.೯೧ |

*ಆಧಾರ: ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ, ಚಾಮರಾಜನಗರ.*

ಜಿಲ್ಲಾ ಖಾದಿ ಮತ್ತು ಗ್ರಾಮೊದ್ಯೋಗ ಘಟಕಗಳಿಗೆ ವಿವಿಧ ಯೋಜನೆಗಳಲ್ಲಿ ನೀಡಲಾದ ಸಾಲ, ಧನಸಹಾಯ, ಉತ್ಪಾದನೆ ಹಾಗೂ ಮಾರಾಟ ಮೌಲ್ಯಗಳ ವಿವರಗಳನ್ನು ಕೋಷ್ಟಕ ೫.೮ರಲ್ಲಿ ಕೊಡಲಾಗಿದೆ

**ಕೋಷ್ಟಕ ೫.೮**

| ಕ್ರ.ಸಂ. | ವರ್ಷ | ಯೋಜನೆ | ಖಾದಿ ಗ್ರಾಮೋದ್ಯೋಗ ಘಟಕಗಳು | ಉತ್ಪಾದನಾ ಮೌಲ್ಯ (ಲಕ್ಷ ₹ ಗಳಲ್ಲಿ) | ಮಾರಾಟ ಮೌಲ್ಯ (ಲಕ್ಷ ₹ ಗಳಲ್ಲಿ) |
|---|---|---|---|---|---|
| ೧ | ೨೦೦೯-೧೦ | ಧನ ಸಹಾಯ ಸ್ವರೂಪ ಯೋಜನೆ | ೦೪ | ೧೬.೩೦ | ೨೦.೭೩ |
| ೨ | ೨೦೧೦-೧೧ | ಸಮೂಹ ಬ್ಯಾಂಕ್ ಯೋಜನೆ | ೦೩ | ೩೨.೯೦ | ೪೨.೭೧ |
| ೩ | ೨೦೧೧-೧೨ | ಅಂಚು ಹಣ ಯೋಜನೆ | ೩೫ | ೩೭೭.೨೫ | ೪೮೯.೧೭ |
| | ಒಟ್ಟು | | ೪೨ | ೪೨೬.೪೫ | ೫೫೨.೬೧ |

*ಆಧಾರ: ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ, ಚಾಮರಾಜನಗರ.*

ಜಿಲ್ಲೆಯಲ್ಲಿ ೨೦೧೧-೧೨ನೇ ಸಾಲಿನಲ್ಲಿದ್ದ ತಾಲೂಕುವಾರು ಧನ ಸಹಾಯ ಸೌಲಭ್ಯ, ಸಮೂಹ ಬ್ಯಾಂಕ್ ಸಾಲ ಸೌಲಭ್ಯ ಮತ್ತು ಅಂಚು ಹಣ ಯೋಜನೆ ಸೌಲಭ್ಯ ಪಡೆದವರ ವಿವರಗಳನ್ನು ಕೋಷ್ಟಕ ೫.೯ರಲ್ಲಿ ನೀಡಲಾಗಿದೆ.

**ಕೋಷ್ಟಕ ೫.೯**

| ಕ್ರ ಸಂ | ಯೋಜನೆ | ವರ್ಗವಾರು ಘಟಕಗಳು | ಚಾಮರಾಜ ನಗರ | ಗುಂಡ್ಲುಪೇಟೆ | ಕೊಳ್ಳೇಗಾಲ | ಯಳಂದೂರು | ಒಟ್ಟು |
|---|---|---|---|---|---|---|---|
| ೧. | ಧನ ಸಹಾಯ ಸ್ವರೂಪ ಯೋಜನೆ | ಪರಿಶಿಷ್ಟ ಜಾತಿ | ೧೦ | – | ೧೩ | ೦೩ | ೨೬ |
| | | ಪರಿಶಿಷ್ಟ ಪಂಗಡ | – | – | ೦೨ | ೦೩ | ೦೫ |
| | | ಹಿಂದುಳಿದ ವರ್ಗ | ೦೬ | ೦೬ | ೦೮ | ೧೨ | ೩೨ |
| | | ಅಲ್ಪಸಂಖ್ಯಾತರು | ೦೨ | ೦೧ | ೦೪ | – | ೦೭ |
| | | ಸಾಮಾನ್ಯ ವರ್ಗ | ೨೧ | ೧೫ | ೧೬ | ೨೨ | ೭೪ |

*ಮುಂದುವರೆದಿದೆ*

**ಕೋಷ್ಟಕ ೫.೯ ಮುಂದುವರೆದಿದೆ**

| ಕ್ರ ಸಂ | ಯೋಜನೆ | ವರ್ಗವಾರು ಘಟಕಗಳು | ಚಾಮರಾಜ ನಗರ | ಗುಂಡ್ಲುಪೇಟೆ | ಕೊಳ್ಳೇಗಾಲ | ಯಳಂದೂರು | ಒಟ್ಟು |
|---|---|---|---|---|---|---|---|
| ೨. | **ಸಮೂಹ ಬ್ಯಾಂಕ್ ಸಾಲ ಸೌಲಭ್ಯ** | ಪರಿಶಿಷ್ಟ ಜಾತಿ | ೦೧ | – | ೦೧ | ೦೩ | ೦೮ |
| | | ಪರಿಶಿಷ್ಟ ಪಂಗಡ | – | – | – | – | – |
| | | ಹಿಂದುಳಿದ ವರ್ಗ | ೦೪ | – | – | ೦೧ | ೦೫ |
| | | ಅಲ್ಪಸಂಖ್ಯಾತರು | ೦೧ | – | – | – | ೦೧ |
| | | ಸಾಮಾನ್ಯ ವರ್ಗ | ೨೨ | – | ೦೬ | ೦೬ | ೩೪ |
| ೩. | **ಅಂಚುಹಣ ಯೋಜನೆ ಸೌಲಭ್ಯ** | ಪರಿಶಿಷ್ಟ ಜಾತಿ | ೧೬ | ೧೦ | ೦೭ | ೦೪ | ೩೭ |
| | | ಪರಿಶಿಷ್ಟ ಪಂಗಡ | ೦೧ | – | ೦೨ | – | ೦೩ |
| | | ಹಿಂದುಳಿದ ವರ್ಗ | ೦೨ | ೦೩ | ೦೩ | ೦೨ | ೧೦ |
| | | ಅಲ್ಪಸಂಖ್ಯಾತರು | ೦೧ | ೦೧ | ೦೩ | ೦೧ | ೦೬ |
| | | ಸಾಮಾನ್ಯ ವರ್ಗ | ೦೭ | ೦೫ | ೧೪ | ೦೩ | ೨೯ |

*ಆಧಾರ: ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ, ಚಾಮರಾಜನಗರ.*

## ಜೇನು ಸಾಕಣೆ

ವ್ಯವಸಾಯ ಪ್ರಧಾನವಾಗಿರುವ ಚಾಮರಾಜನಗರ ಜಿಲ್ಲೆಯಲ್ಲಿ ರೈತರು ತಮ್ಮ ಆದಾಯವನ್ನು ಹೆಚ್ಚಿಸಿಕೊಳ್ಳಲು ಜೇನುತುಪ್ಪ, ಜೇನುಮೇಣ ತಯಾರಿಕೆ ಸಹಕಾರಿಯಾಗಿವೆ. ನಮ್ಮ ದೇಶದಲ್ಲಿ ಹೆಜ್ಜೇನು (ಬಂಡೆ ಜೇನು, ಮರ ಜೇನು), ತುಡುವ ಜೇನು (ಪೊಟರೆ ಜೇನು), ಕೊಲ್ಜೇನು (ಕಡ್ಡಿ ಜೇನು, ಕಿರುಜೇನು) ಮಜಂಟಿ ಜೇನು (ರಾಳಜೇನು), ಇಟಾಲಿಯನ್ ಜೇನು (ಯೂರೋಪಿಯನ್ ಜೇನು) ಎಂದು ಐದು ಜಾತಿಯ ಜೇನು ನೊಣಗಳು ಕಾಣಬರುತ್ತವೆ. ಹೆಜ್ಜೇನು ನೊಣಗಳು ಇತರ ಜೇನು ನೊಣಗಳಿಗಿಂತ ದೊಡ್ಡದಿದ್ದು ಎತ್ತರವಾದ ಸ್ಥಳಗಳಲ್ಲಿ ವಾಸಿಸುತ್ತವೆ. ಇವು ಸಾಮಾನ್ಯವಾಗಿ ಮುಂಗೋಪಿಯಾಗಿರುತ್ತವೆ. ಅಲ್ಲದೆ ತಮ್ಮ ವಾಸಸ್ಥಳವನ್ನು ಆಹಾರ ದೊರಕುವ ಕಡೆಗೆ ಬದಲಾಯಿಸುತ್ತಿರುತ್ತವೆ. ಇವು ಉತ್ಪಾದಿಸುವ ಜೇನುತುಪ್ಪ ತೆಳುವಾಗಿದ್ದು ರುಚಿಕಡಿಮೆ ಇರುತ್ತದೆ. ಇವು ಒಂದು ಕಡೆಯಿಂದ ಇನ್ನೊಂದು ಕಡೆಗೆ ವಲಸೆ ಹೋಗುವ ಸ್ವಭಾವದವುಗಳಾಗಿರುವುದರಿಂದ ಸಾಕುವುದು ಕಷ್ಟ. ತುಡುವೆ ಜೇನುನೊಣಗಳಲ್ಲಿ ಬೆಟ್ಟದ ಸೀಮೆಯ ದೊಡ್ಡ ನೊಣ, ಬಯಲು ಸೀಮೆಯ ಚಿಕ್ಕನೊಣಗಳೆಂದು ಎರಡು ವಿಧಗಳಿವೆ. ಇವುಗಳ ಬಣ್ಣದಲ್ಲಿ ಮಾತ್ರ ವ್ಯತ್ಯಾಸವಿದ್ದು, ಪ್ರಭೇದದಲ್ಲಿ ವ್ಯತ್ಯಾಸವಿರುವುದಿಲ್ಲ. ಇವು ಹೆಜ್ಜೇನು ನೊಣಗಳಿಗಿಂತಲೂ ಗಾತ್ರದಲ್ಲಿ ಚಿಕ್ಕದಿದ್ದು ಕತ್ತಲಿರುವ ಸ್ಥಳಗಳಲ್ಲಿ ಅಂದರೆ ಮರದ ಪೊಟರೆಗಳ ಸಂದು ಮತ್ತು ಹುತ್ತಗಳಲ್ಲಿ ವಾಸಿಸುತ್ತವೆ. ಇವು ಒಂದು ಸ್ಥಳದಲ್ಲಿ ಹೆಚ್ಚು ಕಾಲವಾಸಿಸುವುದರಿಂದ ಮತ್ತು ಹೆಚ್ಚು ಜೇನನ್ನು ಸಂಗ್ರಹಿಸುವುದರಿಂದ ಜೇನು ಪೆಟ್ಟಿಗೆಗಳಲ್ಲಿಟ್ಟು ಸಾಕಬಹುದು. ಕೋಲ್ಜೇನು ನೊಣಗಳು ತುಡುವೆ ಜೇನುನೋಣಗಳಿಗಿಂತ ಆಕಾರದಲ್ಲಿ ಚಿಕ್ಕದಿದ್ದು ಅತಿಸಣ್ಣ ಹೂವುಗಳಿಂದಲೂ ಮಧುವನ್ನು ಸಂಗ್ರಹಿಸುವುದರಿಂದ ರುಚಿಯಾದ ಜೇನನ್ನು ಸಂಗ್ರಹಿಸಬಹುದು. ಇವು ಸಹ ಹೆಜ್ಜೇನಿನಂತೆ ವಲಸೆ ಹೋಗುವ ಸ್ವಭಾವದವುಗಳಾಗಿರುವುದರಿಂದ ಸಾಕಲು ಸಾಧ್ಯವಿರುವುದಿಲ್ಲ. ಇಟಾಲಿಯನ್ ಜೇನುನೊಣಗಳು ತುಡುವೆ ಜೇನುನೊಣಗಳಿಗಿಂತ ಗಾತ್ರದಲ್ಲಿ ದೊಡ್ಡದಿದ್ದು, ಹೆಚ್ಚು ಜೇನನ್ನು ಸಂಗ್ರಹಿಸಲು ಸಮರ್ಥವಾಗಿವೆ. ಇವು ಉತ್ತರ ಭಾರತದಲ್ಲಿ ಸಾಕಷ್ಟು ಪ್ರಚಾರದಲ್ಲಿವೆ. ನಮ್ಮ ರಾಜ್ಯದಲ್ಲಿಯೂ ಸಹ ಇವುಗಳ ಅಭಿವೃದ್ಧಿಗೆ ಪ್ರಯತ್ನ ನಡೆಸಲಾಗಿದೆ. ಮಂಜೇಟು ಜೇನುನೊಣಗಳು ಎಲ್ಲಾ ಜಾತಿಯ ಜೇನುನೊಣಗಳಿಗಿಂತ ಗಾತ್ರದಲ್ಲಿ ಚಿಕ್ಕದಿದ್ದು ಮರದ ಪೊಟರೆಗಳಲ್ಲಿ ಮತ್ತು ಗೋಡೆಗಳ ಸಂದುಗಳಲ್ಲಿ ವಾಸಿಸುತ್ತವೆ. ಇವುಗಳಿಗೆ ಚುಚ್ಚುವ ಮುಳ್ಳುಗಳಿರುವುದಿಲ್ಲ. ಇವು ಸಂಗ್ರಹಿಸುವ ಜೇನುತುಪ್ಪ ತುಂಬ ರುಚಿಯಾಗಿರುತ್ತದೆ. ಇವುಗಳನ್ನು ಸಾಕುವುದು ಬಹಳ ಸುಲಭ. ಆದರೆ ಹೆಚ್ಚಿನ ಜೇನನ್ನು ನಿರೀಕ್ಷಿಸುವಂತಿಲ್ಲ.

ಎಲ್ಲಾ ಜೇನು ಕುಟುಂಬಗಳಲ್ಲೂ ಮೂರು ಜಾತಿಯ ಜೇನುನೊಣಗಳಿರುತ್ತವೆ. ಇವು ರಾಣಿ ಜೇನು (ಪೂರ್ಣ ಬೆಳೆದ ಹೆಣ್ಣು), ಕೆಲಸಗಾರ ಜೇನುನೊಣ (ಅಪೂರ್ಣ ಬೆಳೆದ ಹೆಣ್ಣು) ಮತ್ತು ಗಂಡು ನೊಣ (ಪೂರ್ಣ ಬೆಳೆದ ಗಂಡು). ರಾಣಿ ನೊಣವು ಗಂಡು ಮತ್ತು ಕೆಲಸಗಾರ ನೊಣಗಳಿಗಿಂತ ಗಾತ್ರದಲ್ಲಿ ದೊಡ್ಡದಿದ್ದು, ಗೂಡಿನಲ್ಲಿ ದೊರಕುವ ಆಹಾರಕ್ಕನುಗುಣವಾಗಿ ದಿನ ಒಂದಕ್ಕೆ ೫೦೦ ರಿಂದ ೧೫೦೦ರ ವರೆಗೆ ಮೊಟ್ಟೆಗಳನ್ನಿಡುತ್ತದೆ ಮತ್ತು ತನ್ನ ತಲೆಯಲ್ಲಿರುವ ಮ್ಯಾಂಡಿಬೂಲಾರ್ ಗ್ರಂಥಿಗಳಿಂದ ಉತ್ಪತ್ತಿಯಾಗುವ ವಸ್ತುಸಾರವನ್ನು ಎಲ್ಲಾ ಕೆಲಸಗಾರ ನೊಣಗಳಿಗೆ ಒದಗಿಸಿ ಅವುಗಳ ಅಂಡಾಶಯ ಬೆಳೆಯದಂತೆ ತಡೆದು ನಿಗದಿತ ಕೆಲಸಕಾರ್ಯಗಳನ್ನು ನಿರ್ವಹಿಸುವಂತೆ ನಿಯಂತ್ರಿಸುತ್ತದೆ. ರಾಣಿನೊಣವು ಮೊಟ್ಟೆ ಹಾಕಿದ ಮೂರು ದಿವಸದ ಅವಧಿಯ ನಂತರ ಮೊಟ್ಟೆಯೊಡೆದು ಹುಳುವಾಗುತ್ತದೆ. ಆನಂತರ ೫–೬ ದಿನಗಳವರೆಗೆ ಹುಳದ ಅವಸ್ಥೆಯಲ್ಲಿಯೇ ಇರುತ್ತದೆ. ಕೆಲಸಗಾರ ನೊಣಗಳು ಪೂರ್ಣ ಅವಧಿಯವರೆಗೆ ಪೋಷಿಸಿ ನಂತರ ಕಣಗಳಿಗೆ ಮುಚ್ಚಳ ಹಾಕುತ್ತವೆ. ೧೫–೧೬ ದಿನಗಳಲ್ಲಿ ರಾಣಿನೊಣವಾಗಿ ಮುಚ್ಚಳಹೊಡೆದು ಹೊರಬರುತ್ತದೆ ಮತ್ತು ಗಂಡು ನೊಣದೊಡನೆ ಸೇರಿ ೨–೩ ದಿನಗಳಲ್ಲಿ ಗೂಡಿನಲ್ಲಿ ಮೊಟ್ಟೆ ಇಡಲು ಪ್ರಾರಂಭಿಸುತ್ತದೆ. ಕೆಲಸಗಾರ ನೊಣಗಳು ಒಂದು ಕುಟುಂಬದಲ್ಲಿ ಸಹಸ್ರಾರು ಸಂಖ್ಯೆಯಲ್ಲಿದ್ದು, ಗೂಡಿನ ಎಲ್ಲಾ ಕೆಲಸ ಕಾರ್ಯಗಳಾದ ಪರಾಗ, ಮಧು, ನೀರು ಮುಂತಾದವುಗಳನ್ನು ತರುವುದು, ಮಧುವನ್ನು ಜೇನುತುಪ್ಪವಾಗಿ ಪರಿವರ್ತಿಸುವುದು, ಗೂಡಿನ ರಕ್ಷಣೆ ಮಾಡುವುದು, ಆಹಾರದ ನೆಲೆಗಳನ್ನು ಹುಡುಕುವುದು, ವಾಸಕ್ಕೆ ಯೋಗ್ಯವಾದ ಸ್ಥಳವನ್ನು ಪತ್ತೆಹಚ್ಚುವುದು, ಗೂಡಿನ ಸ್ವಚ್ಛತೆ ಮತ್ತು ಉಷ್ಣತೆ ನೋಡಿಕೊಳ್ಳುವುದು ಮೊದಲಾದ ಕೆಲಸಗಳನ್ನು ಮಾಡುತ್ತಾ ಕೆಲಸದ ಕಠಿಣತೆಯನ್ನವಲಂಭಿಸಿ ೨ ರಿಂದ ೬ ತಿಂಗಳವರೆಗೆ ಬದುಕಿರುತ್ತವೆ. ಗಂಡುನೊಣಗಳು ಆಕಾರದಲ್ಲಿ ದುಂಡಾಗಿದ್ದು, ಕಪ್ಪುಬಣ್ಣದಿಂದ ಕೂಡಿರುತ್ತವೆ. ಇವಕ್ಕೆ ಜೇನು ಸಂಗ್ರಹಿಸುವ ಅಂಗಾಂಗಗಳಿರುವುದಿಲ್ಲ. ಇವನ್ನು ಕೆಲಸಗಾರ ನೊಣಗಳು ವಂಶಾಭಿವೃದ್ಧಿ ಕ್ರಿಯೆಗಾಗಿ ಮಾತ್ರ ಬಳಸಿಕೊಳ್ಳುತ್ತವೆ. ಇವು ಸೋಮಾರಿ ನೊಣಗಳಾದ್ದರಿಂದ ರಾಣಿಯೊಡನೆ ಸಂಯೋಗ ಹೊಂದಿದ ನಂತರ ಕೆಲಸಗಾರ ನೊಣಗಳು ಇವುಗಳನ್ನು ಗೂಡಿನಿಂದ ಹೊರಗಟ್ಟುತ್ತವೆ.

## ಜೇನುಪೆಟ್ಟಿಗೆ ಹಾಗೂ ಉಪಕರಣಗಳು

ವೈಜ್ಞಾನಿಕ ಜೇನುಕೃಷಿಯಲ್ಲಿ ಕೆಲವು ಆಧುನಿಕ ಉಪಕಣಗಳು ಅತ್ಯಗತ್ಯ. ಇವುಗಳಲ್ಲಿ ಜೇನುಪೆಟ್ಟಿಗೆಯೂ ಒಂದು. ಇದು ನಾಲ್ಕು ಭಾಗಗಳಿಂದ ಕೂಡಿದ್ದು, ತಳಭಾಗದಲ್ಲಿ ಅಡಿ ಹಲಗೆ, ಅದಕ್ಕಿಂತ ಮೇಲೆ ಸಂಸಾರ ಕೋಣೆ ಮತ್ತು ಚೌಕಟ್ಟು, ನಂತರ ಜೇನುಕೋಣೆ ಚೌಕಟ್ಟು ಹಾಗೂ ಮೇಲ್ಭಾಗದಲ್ಲಿ ಮೇಲ್ಮುಚ್ಚಳವಿರುತ್ತದೆ. ಸಂಸಾರ ಕೋಣೆ ಮತ್ತು ಜೇನುಕೋಣೆಗಳಲ್ಲಿ ಎಂಟು ಚೌಕಟ್ಟುಗಳಿದ್ದು, ಪ್ರತಿ ಚೌಕಟ್ಟುಗಳ ಅಂತರ ಏಳು ಮಿ.ಮೀ ಇರಬೇಕು ಮತ್ತು ಎಲ್ಲ ಚೌಕಟ್ಟುಗಳು ಚಲಿಸುವಂತಿರಬೇಕು. ಸಂಸಾರ ಕೋಣೆಯ ಚೌಕಟ್ಟುಗಳಿಗೆ ಆಯಾ ಜೇನು ಕುಟುಂಬಗಳ ಎರಿಗಳನ್ನು ಹಾಗೂ ಜೇನು ಕೋಣೆಗೆ ಕೃತಕ ಎರಿ ತಳಹದಿಯ ಹಾಳೆಗಳನ್ನು ಉಪಯೋಗಿಸಬೇಕು. ಜೇನುಪೆಟ್ಟಿಗೆಯ ಜೊತೆಗೆ ಜೇನು ತೆಗೆಯುವ ಯಂತ್ರ, ಶುಚಿಗೊಳಿಸುವ ಸಾಧನ, ಮುಖಪರದೆ, ಕೈಕವಚ, ಮೇಣದ ಹಾಳೆಗಳು, ಒತ್ತರಿಸುವ ಹಲಗೆ, ಹೊಗೆತಿದಿ, ರಾಣಿತಡೆಗೇಟು, ತಂತಿಬಲೆ ಚೌಕಟ್ಟು, ಮರಿಜೇನು ಪಾಲನಪೆಟ್ಟಿಗೆ ಮೊದಲಾದವುಗಳು ಅವಶ್ಯಕವಾಗಿ ಬೇಕಾಗುತ್ತವೆ.

ಜೇನು ಹುಳುಗಳಿಂದ ಗೂಡು ನಿರ್ಮಾಣ ಮತ್ತು ಅವುಗಳ ಸಾಮಾಜಿಕ ಜೀವನ ಅನುಕರಣೀಯ ಮತ್ತು ಕುತೂಹಲಕಾರಿ. ಹುಳುಗಳಿಂದ ತುಂಬಿದ ಎರಿಗಳಲ್ಲಿ ರಾಯಲ್ ಜೆಲ್ಲಿ ನೀಡುವ ಎಳೆಯ ಪ್ರಾಯದ ನೊಣಗಳದ್ದೇ ದರ್ಬಾರು. ಕಟ್ಟಡ ನಿರ್ಮಾಣಕ್ಕಾಗಿ ತಮ್ಮ ಶರೀರದಿಂದ ಬರುವ ಮೇಣದ ದ್ರವವನ್ನು ಬಂಡೆ

ಕಟ್ಟಿ ಷಡ್ಭುಜಾಕೃತಿಯಲ್ಲಿ ತುಂಬಿದ ಆಹಾರ ಚೆಲ್ಲದಂತೆ ಕೋಣೆಗಳನ್ನು ಮೇಲ್ಮುಖವಾಗಿ ನಿರ್ಮಿಸುತ್ತವೆ. ಎರಿಗಳಲ್ಲಿ ಮೂರು ವಿಭಾಗಗಳಿರುತ್ತವೆ. ಮೊದಲು ಮೇಲ್ಮಟ್ಟದ ವಿಭಾಗದಲ್ಲಿ ಸಂಸ್ಕರಿಸಿದ ಜೇನು, ಮಧ್ಯಭಾಗದ ಕಣಗಳಲ್ಲಿ ಪರಾಗ, ತಳಭಾಗ ಮೊಟ್ಟೆಮರಿಗಳ ವಾಸಸ್ಥಾನವಿರುವಂತೆ ಗೂಡನ್ನು ನಿರ್ಮಿಸುತ್ತವೆ. ಇದಕ್ಕೆ ಉಪಯೋಗಿಸಲ್ಪಡುವ ಜೇನುಮೇಣ ಬಹಳ ದುಬಾರಿ. ಎಂಟು ಗ್ರಾಂ ಜೇನನ್ನು ನೊಣಗಳು ತಿಂದಾಗ ಒಂದು ಗ್ರಾಂ ಮೇಣ ಉತ್ಪತ್ತಿಯಾಗುತ್ತದೆ. ಇದು ಜೇನುಗೂಡು ನಿರ್ಮಾಣದ ಕಚ್ಚಾವಸ್ತುವಾಗಿ ಉಪಯೋಗಿಸಲ್ಪಡುವುದೇ ಅಲ್ಲದೆ ಕೈಗಾರಿಕೆಗೂ ಕಚ್ಚಾ ವಸ್ತು. ಇದು ಮೇಣದ ಬತ್ತಿ ತಯಾರಿಕೆಗೆ ಮತ್ತು ಔಷಧಿಯಾದ ಮುಲಾಮುಗಳ ತಯಾರಿಕೆಯಲ್ಲಿ ಉಪಯೋಗಿಸಲ್ಪಡುತ್ತದೆ.

ಜೇನು ಹುಳುವಿನಿಂದ ಜೇನು ಮತ್ತು ಜೇನುಮೇಣವೇ ಅಲ್ಲದೆ ಅವು ಮರಿ ನೊಣಗಳಿಗೆ ಆಹಾರವಾಗಿ ಉಪಯೋಗಿಸಲ್ಪಡುವುದಕ್ಕಾಗಿ ಸಂಗ್ರಹಿಸಿಡುವ ಪರಾಗದಲ್ಲಿ ವಿಟಮಿನ್ ಜೀವಸತ್ವಗಳು, ಕಾರ್ಬೋಹೈಡ್ರೇಟ್‌ಗಳು, ಪ್ರೋಟೀನ್‌ಗಳು, ಕೊಬ್ಬು, ಲವಣಗಳು, ಅಮೀನೋ ಆಸಿಡ್‌ಗಳು, ಎನ್‌ಜೈಮ್‌ಗಳು, ಅಂಟಿಬಯೋಟಿಕ್ ಕಾಂಪೌಂಡ್‌ಗಳು ತುಂಬಿರುತ್ತವೆ. ಪಾಶ್ಚಿಮಾತ್ಯ ದೇಶಗಳಲ್ಲಿ ಪರಾಗವನ್ನು ಮಾನವ ಉಪಯೋಗಕ್ಕಾಗಿ ಸಂಗ್ರಹಿಸಿ ಕ್ಯಾಪ್ಸೂಲ್, ಹರಳು, ಮಾತ್ರೆ, ಹುಡಿ ರೂಪದಲ್ಲಿ ಪರಿವರ್ತಿಸಿ ಉಪಯೋಗಿಸುತ್ತಾರೆ. ಜೇನ್ನೊಣಗಳಿಂದ ಸಿಗುವ ಇನ್ನೊಂದು ಪ್ರಮುಖ ವಸ್ತುವೇ ರಾಯಲ್ ಜೆಲ್ಲಿ ಅಥವಾ ರಾಜಶಾಹಿ ರಸ. ಇದು ಸೂಕ್ಷ್ಮಾಣು ನಿರೋಧಕವಾಗಿದ್ದು, ಅನೇಕ ಬಗೆಯ ಶಕ್ತಿವರ್ಧಕ ಔಷಧಿಗಳಲ್ಲಿ ಉಪಯೋಗಿಸುತ್ತಾರೆ. ಇದಕ್ಕೆ ಅಮೇರಿಕಾ, ಜಪಾನ್ ಹಾಗೂ ಯುರೋಪ್ ದೇಶಗಳಲ್ಲಿ ಅಧಿಕ ಬೇಡಿಕೆ ಇದೆ. ಕಾರ್ಮಿಕ ನೊಣಗಳ ಹಿಂಭಾಗದಲ್ಲಿರುವ ಮುಳ್ಳಿನ ಜೊತೆಗೆ ವಿಷದ ಚೀಲವೂ ಅಂಟಿಕೊಂಡಿದ್ದು, ಅದರಲ್ಲಿ ವಿಷ ಸಂಗ್ರಹವಾಗಿರುತ್ತದೆ. ಇದನ್ನು ಔಷಧಿಯಾಗಿ ಉಪಯೋಗಿಸಲಾಗುತ್ತದೆ.

ಚಾಮರಾಜನಗರ ಜಿಲ್ಲೆಯಲ್ಲಿ ಜೇನುಸಾಗಣೆಗೆ ಸಂಬಂಧಿಸಿದಂತೆ ನಿರುದ್ಯೋಗಿ ಯುವಕ/ಯುವತಿಯರಿಗೆ ಆಯ್ದ ಸ್ಥಳಗಳಲ್ಲಿ ಏಳು ದಿನಗಳ ಅವಧಿಯ ತರಬೇತಿ ನೀಡಲಾಗುತ್ತದೆ. ಉನ್ನತಮಟ್ಟದ ತರಬೇತಿಗಾಗಿ ಹೊರರಾಜ್ಯಗಳಲ್ಲಿ ಗುರುತಿಸಿರುವ ಸಂಸ್ಥೆಗಳಿಗೆ ಕಳುಹಿಸಿಕೊಡುವುದು, ಜೇನುತುಪ್ಪ ತೆಗೆಯುವ ಪ್ರಾತ್ಯಕ್ಷಿಕೆ ಕಾರ್ಯಕ್ರಮ ನಡೆಸುವುದು, ಶೇಕಡ ೫೦ ಸಹಾಯಧನದಲ್ಲಿ ಜೇನುಪೆಟ್ಟಿಗೆ ಮತ್ತು ಜೇನು ಕುಟುಂಬಗಳನ್ನು ಸರಬರಾಜು ಮಾಡುವುದು, ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ/ಗಿರಿಜನರಿಗೆ ಪೂರ್ವಭಾವಿ ತರಬೇತಿ, ಆರ್ಥಿಕ ಸೌಲಭ್ಯ, ಸುಧಾರಿತ ಉಪಕರಣಗಳನ್ನು ನೀಡುವುದು ಮೊದಲಾದ ಸೌಲಭ್ಯವನ್ನೊದಗಿಸಲಾಗಿದೆ.

## ರೇಷ್ಮೆ ಕೈಗಾರಿಕೆ

ರೇಷ್ಮೆ ಕೈಗಾರಿಕೆಯು ಜಿಲ್ಲೆಯ ಗೃಹ ಕೈಗಾರಿಕೆಗಳಲ್ಲೊಂದಾಗಿರುವುದರ ಜೊತೆಗೆ ವ್ಯವಸಾಯಾವಲಂಬಿಗಳ ಆದಾಯಕ್ಕೆ ಪೂರಕನೆರವನ್ನೊದಗಿಸುತ್ತಿದೆ. ರಾಜ್ಯದಲ್ಲಿ ರೇಷ್ಮೆ ಬೆಳವಣಿಗೆಯನ್ನು ಹದಿನೆಂಟನೇ ಶತಮಾನದ ಉತ್ತರಾರ್ಧದಿಂದ ಕಾಣಬಹುದಾಗಿದೆ. ಟಿಪ್ಪುಸುಲ್ತಾನ್ ಮೈಸೂರು ರಾಜ್ಯವನ್ನು ಪ್ರಪಂಚದ ರೇಷ್ಮೆ ಉತ್ಪಾದಿಸುವ ರಾಜ್ಯಗಳಲ್ಲೊಂದನ್ನಾಗಿ ಮಾಡಬೇಕೆಂಬ ಉದ್ದೇಶದಿಂದ ರಾಜ್ಯದ ದಕ್ಷಿಣ ಭಾಗದಲ್ಲಿ ರೇಷ್ಮೆ ಹುಳುಗಳ ಸಾಕಾಣಿಕಾ ಘಟಕಗಳನ್ನು ಸ್ಥಾಪಿಸಿ, ಜಪಾನ್ ಮತ್ತು ಚೀನಾ ತಳಿಯ ಮೂಲಕ ಸುಧಾರಣೆಗೊಂಡ ತಳಿಯನ್ನು ಅಲ್ಲಿ ಬೆಳೆಸಿರುವುದನ್ನು ಕಾಣಬಹುದು. ೧೯೧೪ರಲ್ಲಿ ಇಟಲಿಯಿಂದ ಹನ್ನೆರಡು ಜಾತಿಯ ರೇಷ್ಮೆ ಹುಳುಗಳನ್ನು ತರಿಸಿ ಅಭಿವೃದ್ಧಿಪಡಿಸಿದುದೇ ಅಲ್ಲದೆ ೧೯೧೫ರಲ್ಲಿ ಮೈಸೂರು ತಳಿ ಮತ್ತು ಇಟಲಿ ತಳಿಗಳನ್ನು ಸೇರಿಸಿ ಅಧಿಕ

ಇಳುವರಿಯ ತಳಿಯನ್ನು ಪಡೆಯಲಾಗಿದೆ. ಇದೇ ಕಾಲಾವಧಿಯಲ್ಲಿ ಅನೇಕ ರೇಷ್ಮೆ ಕೃಷಿ ಕ್ಷೇತ್ರಗಳು ಮತ್ತು ರೇಷ್ಮೆ ಹುಳುಸಾಕಣೆ ಕೇಂದ್ರಗಳು ಪ್ರಾರಂಭಗೊಂಡವು. ಭಾರತ ಸ್ವಾತಂತ್ರ್ಯಪೂರ್ವದಲ್ಲೇ ಚಾಮರಾಜನಗರ ಜಿಲ್ಲಾ ವ್ಯಾಪ್ತಿಯಲ್ಲಿ ರೇಷ್ಮೆ ಕೃಷಿ ಮತ್ತು ರೇಷ್ಮೆ ಕೈಗಾರಿಕೆ ಪ್ರಚಲಿತದಲ್ಲಿತ್ತೆಂಬುದನ್ನು ತಿಳಿಯಬಹುದು. ಜಿಲ್ಲೆಯಲ್ಲಿ ಹಿಪ್ಪುನೇರಳೆಯನ್ನು ಅಧಿಕ ಪ್ರಮಾಣದಲ್ಲಿ ಬೆಳೆಯುತ್ತಿದ್ದರೆಂಬುದನ್ನು ಕೊಯಮತ್ತೂರು ಮ್ಯಾನುಯಲ್‌ನಲ್ಲಿ ಉಲ್ಲೇಖಿಸಲಾಗಿದೆ. ೧೮೮೨ರಲ್ಲಿ ಕೊಳ್ಳೇಗಾಲ ತಾಲೂಕೊಂದರಲ್ಲೇ ೩೬೩ ಎಕರೆ ಪ್ರದೇಶದಲ್ಲಿ ಹಿಪ್ಪುನೇರಳೆಯನ್ನು ಬೆಳೆಯಲಾಗಿತ್ತೆಂಬುದು ಆ ಉಲ್ಲೇಖದಲ್ಲಿ ಸ್ಪಷ್ಟಪಡಿಸಲಾಗಿದೆ. ೧೯೪೦–೪೧ರಲ್ಲಿ ವಿದೇಶಿ ತಳಿಯ ರೇಷ್ಮೆ ಹುಳುಸಾಕಣೆ ಮತ್ತು ಅವುಗಳ ಸಂರಕ್ಷಣೆಗಾಗಿ ಬಿಳಿಗಿರಿರಂಗನ ಬೆಟ್ಟದಲ್ಲಿ ರೇಷ್ಮೆ ತಳಿ ಸಾಕಣೆ ಕೇಂದ್ರವನ್ನು ಸ್ಥಾಪಿಸಲಾಯಿತು. ಚಾಮರಾಜನಗರ ತಾಲೂಕಿನ ಬೆಟ್ಟದ ಸಾಲಿನಲ್ಲಿರುವ ಬೆಡಗುಳಿಯಲ್ಲಿ ೧೯೪೪–೪೫ರಲ್ಲಿ ಮಿಶ್ರ ಮತ್ತು ದ್ವಿತಳಿ ರೇಷ್ಮೆಹುಳು ಸಾಕಣೆ ಕೇಂದ್ರವನ್ನು ಸ್ಥಾಪಿಸಲಾಯಿತು.

ರೇಷ್ಮೆ ತಳಿಯನ್ನು ಅಭಿವೃದ್ಧಿಪಡಿಸುವುದು, ಹೆಚ್ಚು ಇಳುವರಿ ಕೊಡುವ ಹಿಪ್ಪುನೇರಳೆಯನ್ನು ಪ್ರಚಾರಮಾಡುವುದು, ಹಿಪ್ಪುನೇರಳೆಯನ್ನು ಬೆಳೆಸುವುದು, ಹಿಪ್ಪುನೇರಳೆ ಸೊಪ್ಪನ್ನು ಕಟಾವು ಮಾಡುವುದು ಮತ್ತು ಸಂರಕ್ಷಿಸುವುದು, ರೇಷ್ಮೆ ಹುಳುಗಳನ್ನು ಸಾಕುವುದು ಮತ್ತು ಅವು ರೋಗರಹಿತವಾಗಿರುವಂತೆ ನೋಡಿಕೊಳ್ಳುವುದು, ಅವುಗಳಿಗೆ ತಗುಲುವ ರೋಗವನ್ನು ತಡೆಗಟ್ಟುವುದು ಮತ್ತು ರೇಷ್ಮೆ ಕೃಷಿಕರಿಗೆ ತರಬೇತಿ ನೀಡುವ ಉದ್ದೇಶದಿಂದ ಸಿಲ್ಕ್ ಫಾರಂಗಳನ್ನು ಸ್ಥಾಪಿಲಾಗಿದೆ. ಇವು ಜಿಲ್ಲೆಯ ಚಾಮರಾಜನಗರ ತಾಲೂಕಿನ ಮಾಗಳ, ಉಮ್ಮತ್ತೂರು, ಗಂಗನೂರು ಮತ್ತು ಕುದೇರುಗಳಲ್ಲಿ, ಯಳಂದೂರು ತಾಲೂಕಿನ ಬಿಳಿರಂಗನಬೆಟ್ಟದಲ್ಲಿ ಮತ್ತು ಗುಂಡ್ಲುಪೇಟೆ ಹಾಗೂ ಕೊಳ್ಳೇಗಾಲಗಳಲ್ಲಿ ಕಾರ್ಯತತ್ಪರವಾಗಿವೆ. ಇವುಗಳ ಜೊತೆಗೆ ಟಸ್ಸಾರ್ ತಳಿಯ ಫಾರಂಗಳು ಚಾಮರಾಜನಗರ ತಾಲೂಕಿನ ಚಾಮರಾಜನಗರ ಮತ್ತು ಸಂತೆಮರಳ್ಳಿ, ಕೊಳ್ಳೇಗಾಲ ತಾಲೂಕಿನ ಮುಡಿಗುಂಡಂ ಮತ್ತು ಯಳಂದೂರು ತಾಲೂಕಿನ ಮಾಂಬಳ್ಳಿಯಲ್ಲಿ ಕಾರ್ಯನಿರ್ವಹಿಸುತ್ತಿವೆ. ೨೦೦೭–೦೮ನೇ ಸಾಲಿನಲ್ಲಿ ಜಿಲ್ಲೆಯ ಒಟ್ಟು ೨೯೫೯.೮೪ ಹೆಕ್ಟೇರ್ ಭೂಮಿಯಲ್ಲಿ ಹಿಪ್ಪುನೇರಳೆಯನ್ನು ಬೆಳೆಯಲಾಗಿತ್ತು. ಇದರಲ್ಲಿ ೧೭೯೧.೪೯ ಹೆಕ್ಟೇರ್ ಪ್ರದೇಶವು ನೀರಾವರಿ ಸೌಲಭ್ಯವನ್ನು ಹೊಂದಿದ್ದರೆ, ಉಳಿದ ೬೧೬೮.೩೫ ಹೆಕ್ಟೇರ್ ಪ್ರದೇಶವು ಮಳೆ ಆಶ್ರಯಪಡೆದದ್ದಾಗಿತ್ತು. ಜಿಲ್ಲೆಯ ಹಿಪ್ಪುನೇರಳೆಯನ್ನು ಬೆಳೆದ ಒಟ್ಟು ಪ್ರದೇಶದ ಪೈಕಿ ಚಾಮರಾಜನಗರ ತಾಲೂಕು ೫,೭೮೪.೩೪ ಹೆಕ್ಟೇರ್ ಪ್ರದೇಶದಲ್ಲಿ ಹಿಪ್ಪುನೇರಳೆಯನ್ನು ಬೆಳೆದು ಮೊದಲ ಸ್ಥಾನದಲ್ಲಿದ್ದರೆ ಕೊಳ್ಳೇಗಾಲ ತಾಲೂಕು ೧೦೮೬.೯೩ಹೆಕ್ಟೇರಿನೊಂದಿಗೆ ಎರಡನೆ ಸ್ಥಾನವನ್ನು, ಗುಂಡ್ಲುಪೇಟೆ ಮತ್ತು ಯಳಂದೂರು ತಾಲೂಕುಗಳು ಅನುಕ್ರಮವಾಗಿ ೬೦೩.೩೪ ಹೆಕ್ಟೇರ್ ಮತ್ತು ೪೮೫.೨೩ ಹೆಕ್ಟೇರ್ ಪ್ರದೇಶದಲ್ಲಿ ಹಿಪ್ಪುನೇರಳೆಯನ್ನು ಬೆಳೆದು ಮೂರು ಮತ್ತು ನಾಲ್ಕನೇ ಸ್ಥಾನದಲ್ಲಿದ್ದವು. ಜಿಲ್ಲೆಯಲ್ಲಿ ರೇಷ್ಮೆ ಕೃಷಿಯಲ್ಲಿ ತೊಡಗಿದ್ದ ಹಳ್ಳಿಗಳು ೪೩೫, ರೇಷ್ಮೆ ಬೆಳೆಗಾರರು ೯೨೯. ಜಿಲ್ಲೆಯಲಿದ್ದ ಐದು ಸರ್ಕಾರಿ ರೇಷ್ಮೆ ಕೃಷಿ ಕ್ಷೇತ್ರಗಳಲ್ಲಿ ಎರಡು ಕ್ಷೇತ್ರಗಳು ಚಾಮರಾಜನಗರ ತಾಲೂಕಿನಲ್ಲೂ, ಉಳಿದ ಮೂರು ಕ್ಷೇತ್ರಗಳು ಜಿಲ್ಲೆಯ ಉಳಿದ ತಾಲೂಕುಗಳಲ್ಲಿ ತಲಾ ಒಂದೊಂದರಂತೆ ಕಾರ್ಯಪ್ರವೃತ್ತವಾಗಿದ್ದವು. ಜಿಲ್ಲೆಯಲ್ಲಿ ಮೂರು ಸರ್ಕಾರಿ ಬಿತ್ತನೆ ಕೋಠಿಗಳಿದ್ದು, ಒಂದು ಚಾಮರಾಜನಗರ ತಾಲೂಕಿನಲ್ಲೂ, ಉಳಿದೆರಡು ಕೊಳ್ಳೇಗಾಲದಲ್ಲೂ ಕಾರ್ಯನಿರ್ವಹಿಸುತ್ತಿದ್ದವು. ಜಿಲ್ಲೆಯಲ್ಲಿದ್ದ ೨೨ ಖಾಸಗಿ ಬಿತ್ತನೆ ಕೋಠಿಗಳ ಪೈಕಿ ೧೦ ಚಾಮರಾಜನಗರ ತಾಲೂಕಿನಲ್ಲೂ, ನಾಲ್ಕು ಗುಂಡ್ಲುಪೇಟೆ ತಾಲೂಕಿನಲ್ಲೂ, ಎರಡು ಕೊಳ್ಳೇಗಾಲ ತಾಲೂಕಿನಲ್ಲೂ ಮತ್ತು ಆರು ಯಳಂದೂರು ತಾಲೂಕಿನಲ್ಲಿದ್ದು, ಇವು ಬಿತ್ತನೆಬೀಜ ಉತ್ಪಾದನೆ ಮತ್ತು ಸರಬರಾಜು ಕಾರ್ಯದಲ್ಲಿ ತೊಡಗಿದ್ದವು. ಜಿಲ್ಲೆಯಲ್ಲಿನ ೨೨ ತಾಂತ್ರಿಕ ಸೇವಾ ಕೇಂದ್ರಗಳ ಪೈಕಿ ಐದು ಕೇಂದ್ರಗಳು ಚಾಮರಾಜನಗರ ತಾಲೂಕಿನಲ್ಲಿ, ಎರಡು ಕೇಂದ್ರಗಳು ಗುಂಡ್ಲುಪೇಟೆ ತಾಲೂಕಿನಲ್ಲಿ, ಏಳು ಕೇಂದ್ರಗಳು ಕೊಳ್ಳೇಗಾಲ ತಾಲೂಕಿನಲ್ಲಿ ಮತ್ತು ಆರು ಕೇಂದ್ರಗಳು ಯಳಂದೂರು ತಾಲೂಕಿನಲ್ಲಿದ್ದವು. ಚಾಮರಾಜನಗರ ಮತ್ತು ಕೊಳ್ಳೇಗಾಲ ತಾಲೂಕುಗಳಲ್ಲಿ ತಲಾ ಒಂದರಂತೆ ಎರಡು ರೀಲಿಂಗ್ ತಾಂತ್ರಿಕ ಸೇವಾ ಕೇಂದ್ರಗಳು, ತಲಾ ಒಂದರಂತೆ ಎರಡು ರೇಷ್ಮೆ

ವಿನಿಮಯ ಕೇಂದ್ರಗಳು, ಇವೇ ತಾಲೂಕುಗಳಲ್ಲಿ ಅನುಕ್ರಮವಾಗಿ ಮೂರು ಮತ್ತು ಎರಡರಂತೆ ಒಟ್ಟು ಐದು ರೇಷ್ಮೆಗೂಡಿನ ಮಾರುಕಟ್ಟೆಗಳು ಹಾಗೂ ಚಾಮರಾಜನಗರ ತಾಲೂಕಿನಲ್ಲಿ ಒಂದು ರೇಷ್ಮೆ ತರಬೇತಿ ಸಂಘ ಕಾರ್ಯನಿರ್ವಹಿಸುತ್ತಿದ್ದವು.

ಜಿಲ್ಲೆಯಲ್ಲಿ ೨೦೦೮ರ ಮಾರ್ಚ್ ಅಂತ್ಯದಲ್ಲಿದ್ದ ಒಟ್ಟು ರೇಷ್ಮೆ ಬೆಳೆಗಾರರ ಸಂಖ್ಯೆ ೮೯೨೯. ಇವರ ಪೈಕಿ ದೊಡ್ಡ ಪ್ರಮಾಣದ ರೇಷ್ಮೆ ಬೆಳೆಗಾರರು ೧೧೭೮, ಮಧ್ಯಮ ಪ್ರಮಾಣದ ರೇಷ್ಮೆ ಬೆಳೆಗಾರರು ೨೫೦೦, ಸಣ್ಣ ಪ್ರಮಾಣದ ರೇಷ್ಮೆ ಬೆಳೆಗಾರರು ೩೬೮೪, ಅತೀಸಣ್ಣ ಪ್ರಮಾಣದ ರೇಷ್ಮೆ ಬೆಳೆಗಾರರು ೧೫೬೭. ಈ ಒಟ್ಟು ರೇಷ್ಮೆ ಬೆಳೆಗಾರರಲ್ಲಿ ಪರಿಶಿಷ್ಟ ಜಾತಿಗೆ ಸೇರಿದವರು ೧೨೩೧, ಪರಿಶಿಷ್ಟ ಪಂಗಡಕ್ಕೆ ಸೇರಿದವರು ೪೫, ಅಲ್ಪಸಂಖ್ಯಾತರ ಗುಂಪಿಗೆ ಸೇರಿದವರು ೫೭ ಮತ್ತು ಇತರೆ ಗುಂಪಿಗೆ ಸೇರಿದವರು ೭೫೭೬, ಈ ಎಲ್ಲಾ ಗುಂಪಿಗೂ ಸೇರಿದಂತೆ ಒಟ್ಟು ೪೯೫ ಮಹಿಳೆಯರು ಮತ್ತು ೮೪೩೪ ಪುರುಷರು ಜಿಲ್ಲೆಯ ರೇಷ್ಮೆ ಕೃಷಿಯಲ್ಲಿ ನಿರತರಾಗಿದ್ದರು. ಜಿಲ್ಲೆಯಲ್ಲಿ ಮಾರ್ಚ್ ೨೦೧೨ರ ಅಂತ್ಯಕ್ಕೆ ತಾಲೂಕುವಾರು ಮತ್ತು ಜಾತಿವಾರು ರೇಷ್ಮೆ ಕುಟುಂಬಗಳ ವಿವರಗಳನ್ನು ಕೋಷ್ಟಕ ೫.೧೦ರಲ್ಲಿ ನೀಡಿದೆ.

**ಕೋಷ್ಟಕ ೫.೧೦**

| ಕ್ರ.ಸಂ. | ತಾಲೂಕು | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಅಲ್ಪ ಸಂಖ್ಯಾತರು | ಇತರೆ | ಒಟ್ಟು |
|---|---|---|---|---|---|---|
| ೧. | ಚಾಮರಾಜನಗರ | ೨೬೨ | ೦೭ | ೧೭ | ೧೯೬೨ | ೨೨೫೦ |
| ೨. | ಗುಂಡ್ಲುಪೇಟೆ | ೨೮ | ೦೧ | – | ೩೯೦ | ೪೧೯ |
| ೩. | ಕೊಳ್ಳೇಗಾಲ | ೩೯ | – | ೦೭ | ೨೯೪ | ೩೪೦ |
| ೪. | ಯಳಂದೂರು | ೧೮ | ೧೪ | ೦೧ | ೮೮ | ೧೨೧ |
| | **ಒಟ್ಟು** | **೩೪೭** | **೨೨** | **೨೫** | **೨೭೩೪** | **೩೧೩೦** |

*ಆಧಾರ: ರೇಷ್ಮೆ ಉಪನಿರ್ದೇಶಕರು, ಜಿಲ್ಲಾಪಂಚಾಯತ್, ಚಾಮರಾಜನಗರ.*

ಜಿಲ್ಲೆಯಲ್ಲಿ ೨೦೧೨ರ ಮಾರ್ಚ್ ಅಂತ್ಯಕ್ಕೆ ತಾಲೂಕುವಾರು ರೇಷ್ಮೆಗೂಡಿನ ಉತ್ಪಾದನೆಯ ಗುರಿ ಮತ್ತು ಸಾಧನೆಯ ವಿವರಗಳನ್ನು ಕೋಷ್ಟಕ ೫.೧೧ರಲ್ಲಿ ನೀಡಲಾಗಿದೆ.

**ಕೋಷ್ಟಕ ೫.೧೦**

| ಕ್ರ. ಸಂ. | ತಾಲೂಕು | ಗುರಿ | | | ಸಾಧನೆ | | | ಶೇಡಕವಾರು ಸಾಧನೆ |
|---|---|---|---|---|---|---|---|---|
| | | ಮಿಶ್ರತಳಿ | ದ್ವಿತಳಿ | ಒಟ್ಟು | ಮಿಶ್ರತಳಿ | ದ್ವಿತಳಿ | ಒಟ್ಟು | |
| ೧. | ಚಾಮರಾಜನಗರ | ೩೪೪.೦೦೦ | ೨೪.೦೦೦ | ೩೬೮.೦೦೦ | ೨೧೩.೩೯೪ | ೨೨.೦೫೨ | ೨೩೫.೪೪೬ | ೬೪.೦ |
| ೨. | ಗುಂಡ್ಲುಪೇಟೆ | ೭೫.೦೦೦ | ೭.೨೦೦ | ೮೨.೨೦೦ | ೪೫.೨೭೮ | ೫.೬೬೨ | ೫೦.೯೪೦ | ೬೨.೦ |
| ೩. | ಕೊಳ್ಳೇಗಾಲ | ೫೭.೦೦೦ | ೨೪.೦೦೦ | ೮೧.೦೦೦ | ೫೪.೯೪೮ | ೧೮.೫೩೮ | ೭೩.೪೮೬ | ೯೦.೭ |
| ೪. | ಯಳಂದೂರು | ೨೪.೦೦೦ | ೪.೮೦೦ | ೨೮.೮೦೦ | ೧೫.೬೧೭ | ೪.೯೮೬ | ೨೦.೬೦೩ | ೭೧.೫ |
| | **ಒಟ್ಟು** | **೫೦೦.೦೦೦** | **೬೦.೦೦೦** | **೫೬೦.೦೦೦** | **೩೨೯.೨೩೭** | **೫೧.೨೩೮** | **೩೮೦.೪೭೫** | **೬೭.೯** |

*ಆಧಾರ: ರೇಷ್ಮೆ ಉಪನಿರ್ದೇಶಕರು, ಜಿಲ್ಲಾಪಂಚಾಯತ್, ಚಾಮರಾಜನಗರ.*

ಜಿಲ್ಲೆಯಲ್ಲಿ ೩೧-೩-೨೦೧೨ ರಲ್ಲಿದ್ದಂತೆ ತಾಲೂಕುವಾರು ಸಂಚಿತ ಇಳುವರಿ ಮತ್ತು ಉತ್ಪಾದಿಸಿದ ರೇಷ್ಮೆಗೂಡು ಇವುಗಳ ವಿವರಗಳನ್ನು ಕೋಷ್ಟಕ ೫.೧೨ರಲ್ಲಿ ನೀಡಿದೆ.

**ಕೋಷ್ಟಕ ೫.೧೨**

| ಕ್ರ.ಸಂ | ತಾಲೂಕು | ಸಂಚಿತ ಇಳುವರಿ ೧೦೦ ಮೊಟ್ಟೆಗಳಿಗೆ | | | | ಉತ್ಪಾದಿಸಿದ ಗೂಡು (ಮೆ..ಟನ್‌ಗಳಲ್ಲಿ) | | |
|---|---|---|---|---|---|---|---|---|
| | | ಮಿಶ್ರ ತಳಿ | | ದ್ವಿತಳಿ | ಒಟ್ಟು | ಮಿಶ್ರತಳಿ | ದ್ವಿತಳಿ | ಒಟ್ಟು |
| | | ಸಿ.ನಿ.ಜಿ. | ಸುಧಾರಿತ | | | | | |
| ೧ | ಚಾಮರಾಜನಗರ | – | ೫೩.೧ | ೫೯.೧ | ೫೩.೬ | ೨೧೩.೩೯೪ | ೨೨.೦೫೨ | ೨೩೫.೪೪೬ |
| ೨ | ಗುಂಡ್ಲುಪೇಟೆ | – | ೫೫.೨ | ೬೦.೨ | ೫೫.೭ | ೪೫.೨೭೮ | ೫.೬೬೨ | ೫೦.೯೪೦ |
| ೩ | ಕೊಳ್ಳೇಗಾಲ | – | ೫೫.೮ | ೫೩.೬ | ೫೫.೨ | ೫೪.೯೪೮ | ೧೭.೫೩೮ | ೭೨.೪೮೬ |
| ೪ | ಯಳಂದೂರು | – | ೫೭.೦ | ೬೧.೫ | ೫೮.೦ | ೧೫.೬೧೭ | ೪.೯೮೬ | ೨೦.೬೦೩ |
| | ಒಟ್ಟು | – | ೫೪.೦ | ೫೭.೨ | ೫೪.೪ | ೩೨೯.೨೩೭ | ೫೧.೨೩೮ | ೩೮೦.೪೭೫ |

*ಆಧಾರ: ರೇಷ್ಮೆ ಉಪನಿರ್ದೇಶಕರು, ಜಿಲ್ಲಾಪಂಚಾಯತ್, ಚಾಮರಾಜನಗರ.*

ರೇಷ್ಮೆ ಗೂಡಿನಿಂದ ನೂಲು ತೆಗೆಯುವುದರೊಂದಿಗೆ ರೇಷ್ಮೆ ಕೈಗಾರಿಕೆ ಪ್ರಾರಂಭಗೊಳ್ಳುತ್ತದೆ. ರೇಷ್ಮೆ ಕ್ರಿಮಿಕೋಶವನ್ನು ಬಿಸಿನೀರಿಗೆ ಹಾಕುವುದರ ಮೂಲಕ ಅದರಲ್ಲಿರುವ ಅಂಟು ನೀರಲ್ಲಿ ಕರಗುವಂತೆ ಮಾಡುವುದು, ರೇಷ್ಮೆ ಗೂಡನ್ನು ಒಣಗಿಸುವುದು, ನೂಲು ತೆಗೆಯುವುದು, ಎರಡರಿಂದ ಹನ್ನೆರಡು ಎಳೆಗಳನ್ನು ಒಂದುಗೂಡಿಸಿ ಒಂದು ದಾರವನ್ನಾಗಿ ಮಾಡುವುದು, ಲಡಿಗಳಾಗಿಸುವುದು, ಕೈಮಗ್ಗ ಅಥವಾ ಮಿಲ್ಲುಗಳ ಸಹಾಯದಿಂದ ಬಟ್ಟೆ ತಯಾರಿಸುವುದು, ಮೊದಲಾದವುಗಳು ರೇಷ್ಮೆ ಕೈಗಾರಿಕಾ ವ್ಯಾಪ್ತಿಗೊಳಪಡುತ್ತವೆ. ನೂಲು ತೆಗೆಯುವುದು ಮೊದಮೊದಲು ಒಂದು ಗೃಹ ಕೈಗಾರಿಕೆಯಾಗಿದ್ದು, ಚರಕ ಅಥವಾ ಕಾಟೇಜ್ ಬೇಸಿನ್‌ಗಳ ಮೂಲಕ ಕಾರ್ಯನಿರ್ವಹಿಸಲ್ಪಡುತ್ತಿತ್ತು. ಈಗ ಆಧುನಿಕ ಯಂತ್ರಗಳು ಈ ಕಾರ್ಯನಿರ್ವಹಿಸುತ್ತವೆ.

ಜಿಲ್ಲೆಯ ಚಾಮರಾಜನಗರ ಮತ್ತು ಸಂತೆಮರಳ್ಳಿಯ ಸರ್ಕಾರಿ ಸಿಲ್ಕ್ ಫಿಲೇಚರ್‌ಗಳು ೧೯೨೧ರಲ್ಲಿ ಮೈಸೂರಿನಲ್ಲಿ ಸ್ಥಾಪನೆಗೊಂಡ ಸರ್ಕಾರಿ ಸಿಲ್ಕ್ ಫಿಲೇಚರ್‌ನ ಪೂರಕ ಫಿಲೇಚರ್ಸ್‌ಗಳಾಗಿ ಕಾರ್ಯನಿರ್ವಹಿಸಿ ೧೯೭೦-೭೧ರಲ್ಲಿ ಸ್ವತಂತ್ರ ಫಿಲೇಚರ್‌ಗಳಾಗಿದ್ದವು. ೧೯೩೭ರಲ್ಲಿ ಕೊಳ್ಳೇಗಾಲದಲ್ಲಿ ಪ್ರಾರಂಭಗೊಂಡ ಸಿಲ್ಕ್ ಫಿಲೇಚರ್ ರಾಜ್ಯ ಪುನರ್‌ವಿಂಗಡಣೆಯ ನಂತರ ಕರ್ನಾಟಕ ರಾಜ್ಯಕ್ಕೆ ಸೇರಿತು. ೧೯೭೦-೭೧ರ ವರೆಗೆ ಮುಡಿಗುಂಡಂನ ನೂಲು ಮತ್ತು ನೇಯ್ಗೆ ಕಾರ್ಖಾನೆ ಮತ್ತು ಮಾಂಬಳ್ಳಿಯ ರೇಷ್ಮೆ ಫಿಲೇಚರ್‌ಗಳು ಕೊಳ್ಳೇಗಾಲದ ಸಿಲ್ಕ್ ಫಿಲೇಚರ್‌ನ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿದ್ದು ಆನಂತರ ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ಆರಂಭಿಸಿದವು. ಹೆಚ್ಚಿನ ವಿವರಗಳಿಗೆ ಕೋಷ್ಟಕ ೫.೧೩ ಹಾಗೂ ಕೋಷ್ಟಕ ೫.೧೪ ಅನ್ನು ನೋಡಿ

**ಕೋಷ್ಟಕ ೫.೧೩ ಜಿಲ್ಲೆಯಲ್ಲಿ ೨೦೦೧೨ರ ಮಾರ್ಚ್ ಅಂತ್ಯದಲ್ಲಿದ್ದಂತೆ ತಾಲೂಕುವಾರು ವರ್ಗೀಕೃತ ರೇಷ್ಮೆ ರೀಲರು ಕುಟುಂಬಗಳ ವಿವರ**

| ಕ್ರ.ಸಂ. | ತಾಲೂಕು | ವರ್ಗೀಕೃತ ರೀಲರು ಕುಟುಂಬ | | | | ಒಟ್ಟು |
|---|---|---|---|---|---|---|
| | | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಅಲ್ಪಸಂಖ್ಯಾತರು | ಇತರೆ | |
| ೧. | ಚಾಮರಾಜನಗರ | ೨೦ | – | ೧೨ | ೩೫ | ೬೭ |
| ೨. | ಗುಂಡ್ಲುಪೇಟೆ | – | – | – | – | – |
| ೩. | ಕೊಳ್ಳೇಗಾಲ | ೨೬೮ | ೦೪ | ೬೨ | ೭೩ | ೪೦೩ |
| ೪. | ಯಳಂದೂರು | ೧೫೩ | ೨೩ | ೫೧ | ೧೭ | ೨೪೪ |
| | ಒಟ್ಟು | ೪೪೧ | ೨೭ | ೧೨೫ | ೧೨೫ | ೭೧೪ |

**ಕೋಷ್ಟಕ ೫.೧೪: ಜಿಲ್ಲೆಯಲ್ಲಿ ೨೦೧೨ರ ಮಾರ್ಚ್ ಅಂತ್ಯದಲ್ಲಿದ್ದಂತೆ ತಾಲೂಕುವಾರು ರೀಲಿಂಗ್ ಘಟಕಗಳ ವಿವರ**

| ಕ್ರ ಸಂ | ತಾಲೂಕು | ಚರಕಗಳು | | ಕಾಟೇಜ್ ಬೇಸಿನ್‌ಗಳು | | ಫಿಲೇಚರ್‌ಗಳು | | ಮಲ್ಟಿ ಎಂಡ್ | |
|---|---|---|---|---|---|---|---|---|---|
| | | ಘಟಕಗಳು | ಬೇಸಿನ್‌ಗಳು | ಘಟಕಗಳು | ಬೇಸಿನ್‌ಗಳು | ಘಟಕಗಳು | ಬೇಸಿನ್‌ಗಳು | ಘಟಕಗಳು | ಬೇಸಿನ್‌ಗಳು |
| ೧. | ಚಾಮರಾಜನಗರ | – | ೮೭ | – | – | – | – | – | – |
| ೨. | ಗುಂಡ್ಲುಪೇಟೆ | – | – | – | – | – | – | – | – |
| ೩. | ಕೊಳ್ಳೇಗಾಲ | – | ೬೪೦ | – | ೧೦ | – | ೬೩೨ | – | ೭೦ |
| ೪. | ಯಳಂದೂರು | – | ೪೧೫ | – | ೦೫ | – | ೨೨೫ | – | ೧೦ |
| | ಒಟ್ಟು | – | **೧೧೪೨** | – | **೧೫** | – | **೮೫೭** | – | **೮೦** |

ಜಿಲ್ಲೆಯಲ್ಲಿ ೨೦೧೧–೧೨ರಲ್ಲಿದಂತೆ ತಾಲೂಕುವಾರು ಹಿಪ್ಪುನೇರಳೆ ಬೆಳೆ ವಿಸ್ತೀರ್ಣ, ರೇಷ್ಮೆಗೂಡು ಉತ್ಪಾದನೆ, ಕಸುಬು ಕೈಗೊಂಡ ರೈತರ ಸಂಖ್ಯೆ ಹಾಗೂ ಉತ್ಪಾದಿಸಿದ ರೇಷ್ಮೆಯ ಮೌಲ್ಯ ಮೊದಲಾದ ವಿವರಗಳನ್ನು ಕೋಷ್ಟಕ ೫.೧೫ರಲ್ಲಿ ನೀಡಲಾಗಿದೆ.

**ಕೋಷ್ಟಕ ೫.೧೫**

| ಕ್ರ.ಸಂ | ತಾಲೂಕು | ಹಿಪ್ಪು ನೇರಳೆ ಬೆಳೆ ವಿಸ್ತೀರ್ಣ (ಹೆ.ಗಳಲ್ಲಿ) | ರೇಷ್ಮೆಗೂಡು ಉತ್ಪಾದನೆ (ಟನ್‌ಗಳಲ್ಲಿ) | ಕಸಬು ಕೈಗೊಂಡ ರೈತರ ಸಂಖ್ಯೆ | ಉತ್ಪಾದಿಸಿದ ರೇಷ್ಮೆಯ ಮೌಲ್ಯ (ಲಕ್ಷ ₹ ಗಳಲ್ಲಿ) |
|---|---|---|---|---|---|
| ೧. | ಚಾಮರಾಜನಗರ | ೧೨೪೪.೧೦ | ೨೩೫.೪೪೬ | ೨೨೫೦ | ೬೪೭.೪೮ |
| ೨. | ಗುಂಡ್ಲುಪೇಟೆ | ೨೬೧.೪೨ | ೫೦.೯೪೦ | ೪೧೯ | ೧೪೦.೦೮ |
| ೩. | ಕೊಳ್ಳೇಗಾಲ | ೧೯೨.೭೦ | ೭೩.೪೮೬ | ೩೪೦ | ೨೦೨.೦೯ |
| ೪. | ಯಳಂದೂರು | ೮೦.೩೦ | ೨೦.೬೦೩ | ೧೨೧ | ೫೬.೬೬ |
| | ಒಟ್ಟು | **೧೭೭೮.೫೨** | **೩೮೦.೪೭೫** | **೩೧೩೦** | **೧೦೪೬.೩೧** |

*ಆಧಾರ: ಚಾಮರಾಜನಗರ ಜಿಲ್ಲಾ ಅಂಕಿಅಂಶಗಳ ನೋಟ ೨೦೦೬–೦೭.*

ವಿವಿಧ ಯೋಜನೆಗಳಡಿಯಲ್ಲಿ ೨೦೧೨ರ ಮಾರ್ಚ್ ಅಂತ್ಯಕ್ಕೆ ಸಾಧಿಸಲಾದ ಪ್ರಗತಿಯ ವಿವರಗಳನ್ನು ಕೋಷ್ಟಕ ೫.೧೬ರಲ್ಲಿ ನೀಡಲಾಗಿದೆ.

**ಕೋಷ್ಟಕ ೫.೧೬** (₹ ಲಕ್ಷಗಳಲ್ಲಿ)

| ಕ್ರ.ಸಂ. | ಕಾರ್ಯಕ್ರಮದ ವಿವರ | ವಾರ್ಷಿಕ ಗುರಿ | | ಸಾಧನೆ | |
|---|---|---|---|---|---|
| | | ಆರ್ಥಿಕ | ಭೌತಿಕ (ಹೆ.) | ಆರ್ಥಿಕ | ಭೌತಿಕ (ಹೆ.) |
| **I** | ಜಿಲ್ಲಾ ಪಂಚಾಯತ್ ಕಾರ್ಯಕ್ರಮಗಳು | | | | |
| ೧. | ಸಲಹಾ ಸೇವೆಗಳು | ೮.೮೦ | ೪೫೯ | ೭.೦೧ | ೩೮೦ |
| ೨. | ತರಬೇತಿ | ೪.೦೦ | ೨೮೫ | ೩.೩೩ | ೩೦೩ |
| ೩. | ರೇಷ್ಮೆ ಬೆಳೆಗಾರರಿಗೆ ಸಹಾಯ (ರೋಗನಿಯಂತ್ರಣ ಕಾರ್ಯಕ್ರಮ) | ೧೦.೦೦ | ೯೦೦೦ | ೧೦.೦೦ | ೬೭೦೬ |
| | ಒಟ್ಟು | **೨೨.೮೦** | **೯೭೪೪** | **೨೦.೩೪** | **೭೩೮೯** |

*ಮುಂದುವರೆದಿದೆ..*

**ಕೋಷ್ಟಕ ೫.೧೬ ಮುಂದುವರೆದಿದೆ** (₹ ಲಕ್ಷಗಳಲ್ಲಿ)

| ಕ್ರ.ಸಂ. | ಕಾರ್ಯಕ್ರಮದ ವಿವರ | ವಾರ್ಷಿಕ ಗುರಿ | | ಸಾಧನೆ | |
|---|---|---|---|---|---|
| | | ಆರ್ಥಿಕ | ಭೌತಿಕ (ಹೆ.) | ಆರ್ಥಿಕ | ಭೌತಿಕ (ಹೆ.) |
| **II** | ರಾಜ್ಯ ವಲಯ ಕಾರ್ಯಕ್ರಮಗಳು | | | | |
| ೧. | ರೇಷ್ಮೆ | – | – | – | – |
| ೨. | ವಿಶೇಷ ಘಟಕ ಯೋಜನೆ (ರಾಜ್ಯ ನೆರವು) ರೇಷ್ಮೆ ಹುಳು ಸಾಕುವ ಮನೆಗೆ ಸಹಾಯಧನ | | | | |
| | ಅ) ೧೦೦೦ ಚದರ ಅಡಿ | ೨.೪೬ | ೦೨ | ೧.೨೩ | ೦೧ |
| | ಆ) ೬೦೦ ಚದರ ಅಡಿ | ೧.೫೦ | ೦೩ | ೧.೦೦ | ೦೨ |
| | ಇ) ೩೭೫ ಚದರ ಅಡಿ | – | – | – | – |
| | **ಒಟ್ಟು** | **೩.೯೬** | **೦೫** | **೨.೨೩** | **೦೩** |
| **III** | ಅಭಿವೃದ್ಧಿ ಯೋಜನೆ | | | | |
| ೩. | ಹುಳು ಸಾಕುವ ಮನೆ ನಿರ್ಮಾಣಕ್ಕೆ ಸಹಾಯಧನ | | | | |
| | ಅ) ೧೦೦೦ ಚದರ ಅಡಿ | ೭.೫೦ | ೧೦ | ೬.೦೦ | ೧೦ |
| | ಆ) ೬೦೦ ಚದರ ಅಡಿ | – | – | – | – |
| | ಇ) ೩೭೫ ಚದರ ಅಡಿ | – | – | – | – |
| | **ಒಟ್ಟು** | **೭.೫೦** | **೧೦** | **೬.೦೦** | **೧೦** |
| ೨. | ಹನಿ ನೀರಾವರಿ ಅಳವಡಿಕೆಗೆ ಸಹಾಯಧನ | ೨.೬೩ | ೭.೦೦ | ೪.೭೨ | ೧೨.೫೯ |
| ೩. | ಹುಳು ಸಾಕಣೆ ಸಲಕರಣೆಗಳ ಖರೀದಿಗೆ ಸಹಾಯಧನ | ೧೭.೫೦ | ೫೮ | ೧೯.೭೫ | ೧೧೮ |

*ಆಧಾರ: ರೇಷ್ಮೆ ಉಪನಿರ್ದೇಶಕರು, ಜಿಲ್ಲಾ ಪಂಚಾಯತ್, ಚಾಮರಾಜನಗರ. (ಹೆ. – ಹೆಕ್ಟೇರು)*

**ಸೆಂಟ್ರಲ್ ಸಿಲ್ಕ್ ಬೋರ್ಡ್:** ೧೯೪೯ರಲ್ಲಿ ಕೇಂದ್ರ ಸರ್ಕಾರದಿಂದ ಸ್ಥಾಪಿಸಲ್ಪಟ್ಟ ಸೆಂಟ್ರಲ್ ಸಿಲ್ಕ್ ಬೋರ್ಡ್‌ನ ಕೇಂದ್ರ ಕಛೇರಿ ಮುಂಬೈನಲ್ಲಿದ್ದು ೧೯೮೧ರಲ್ಲಿ ಬೆಂಗಳೂರಿಗೆ ವರ್ಗಾವಣೆಗೊಂಡಿತು. ಇದು ರಾಜ್ಯಾದ್ಯಂತ ಅನೇಕ ಕಡೆಗಳಲ್ಲಿ ತರಬೇತಿ ಮತ್ತು ಸಂಶೋಧನಾ ಸಂಸ್ಥೆಗಳನ್ನು ತೆರೆದು ರೈತರಿಗೆ ನೆರವನ್ನೊದಗಿಸುತ್ತಿದೆ. ನೀರಾವರಿ ಸೌಲಭ್ಯವಿಲ್ಲದ ಮಳೆ ಆಧಾರಿತ ಪ್ರದೇಶದಲ್ಲಿ ನೂತನ ರೇಷ್ಮೆ ತಾಂತ್ರಿಕ ಸೌಲಭ್ಯದ ಮೂಲಕ ಅಧಿಕ ಇಳುವರಿಯ ಹಿಪ್ಪುನೇರಳೆ ಮತ್ತು ರೇಷ್ಮೆ ಗೂಡನ್ನು ಪಡೆಯುವ ಮತ್ತು ಆರ್ಥಿಕವಾಗಿ ಹಿಂದುಳಿದಿರುವ ರೈತರ ಜೀವನಮಟ್ಟವನ್ನು ಸುಧಾರಿಸುವ ಉದ್ದೇಶದಿಂದ ೧೯೮೨ರಲ್ಲಿ ಚಾಮರಾಜನಗರದಲ್ಲಿ "ರೀಜನಲ್ ಸಿರಿಕಲ್ಚರಲ್ ರೀಸರ್ಚ್ ಸ್ಟೇಷನ್" ಪ್ರಾರಂಭಿಸಿತು. ಇದರ ಕಾರ್ಯಕ್ಷೇತ್ರ ಚಾಮರಾಜನಗರ ಜಿಲ್ಲೆಯ ಎಲ್ಲಾ ತಾಲೂಕುಗಳೂ ಮತ್ತು ಮೈಸೂರು ಜಿಲ್ಲೆಯ ಟಿ.ನರಸೀಪುರ ತಾಲೂಕಿಗೆ ಸೀಮಿತಗೊಂಡಿದೆ. ಇದು ಸಂಶೋಧನೆಯ ಜೊತೆಗೆ ಚಾಕಿ ಸಾಕಿ ಬೆಳೆಸುವುದಕ್ಕೂ ನೆರವನ್ನೊದಗಿಸುತ್ತಿದೆ. ೨೦೦೮ರ ಆಗಸ್ಟ್ ಅಂತ್ಯದ ವೇಳೆಗೆ ಇದು ೭೦೨೦ ರೋಗರಹಿತ ಮೊಟ್ಟೆಯನ್ನು ರೈತರಿಗೆ ನೀಡಿ ಪ್ರತೀ ೧೦೦ ಮೊಟ್ಟೆಗೆ ೫೧.೧೨ಕೆ.ಜಿ. ರೇಷ್ಮೆ ಗೂಡಿನ ಇಳುವರಿ ಪಡೆಯಲಾಗಿರುವುದೇ ಅಲ್ಲದೇ ತನ್ನ ಸಂಶೋಧನಾಲಯದಲ್ಲಿ ೧೦೫೦ ರೋಗರಹಿತ ಮೊಟ್ಟೆ ಮೂಲಕ ೧೦೦ಕ್ಕೆ ೫೦.೬೩ಕೆ.ಜಿ. ರೇಷ್ಮೆಗೂಡನ್ನು ಉತ್ಪಾದಿಸಲಾಗಿದೆ. ಜಿಲ್ಲೆಯಲ್ಲಿ ಪ್ರಚಲಿತವಿರುವ ರೇಷ್ಮೆ ತಳಿಗಳಾದ ಮಳೆ ಆಧಾರಿತ ಪ್ರದೇಶಕ್ಕೆ ಸ್ಥಳೀಯ ಕೆ–೨, ಎಸ್–೧೩ ಮತ್ತು ಎಸ್–೩೪; ನೀರಾವರಿ ಪ್ರದೇಶಕ್ಕೆ ಎಸ್–೧೩, ಕೆ–೨, ಮುಂತಾದುವು. ಈ ಸ್ಟೇಷನ್ ಸ್ಥಳೀಯ ಸಮಸ್ಯೆಯನ್ನು ಸಂಶೋಧನೆ ಮತ್ತು ತರಬೇತಿಯ ಮೂಲಕ

ಬಗೆಹರಿಸುತ್ತದೆ ಮತ್ತು ರೇಷ್ಮೆ ಹುಳುಗಳ ಗೊಬ್ಬರವನ್ನು ಉಪಯೋಗಿಸುವುದರ ಮೂಲಕ ಅಧಿಕ ಹಿಪ್ಪುನೇರಳೆ ಇಳುವರಿಯನ್ನು ಪಡೆಯಬಹುದೆಂಬುದನ್ನು ಸಂಶೋಧನೆಯ ಮೂಲಕ ದೃಢಪಡಿಸಿದೆ. ಸಾಮಾಜಿಕವಾಗಿ ಹಿಂದುಳಿದಿರುವವರಿಗೆ ಬಿಳಿಗಿರಿರಂಗನಬೆಟ್ಟ ಮತ್ತು ಚಾಮರಾಜನಗರಗಳಲ್ಲಿ ರೇಷ್ಮೆ ತರಬೇತಿ ನೀಡಲಾಗುತ್ತದೆ. ಬಿಳಿಗಿರಿರಂಗನಬೆಟ್ಟದಲ್ಲಿ ಈಗಾಗಲೇ ೧೦ ಬ್ಯಾಚ್‌ಗೆ ತರಬೇತಿ ನೀಡಲಾಗಿದ್ದು, ೧೦೭ ಕೃಷಿಕರು ಈ ಸೌಲಭ್ಯವನ್ನು ಪಡೆದಿರುವರು.

**ಮೈಸೂರು–ಚಾಮರಾಜನಗರ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ಮೈಸೂರು:** ಕರ್ನಾಟಕ ಹೈನು ಅಭಿವೃದ್ಧಿ ಯೋಜನೆಯಡಿಯಲ್ಲಿ ವಿಶ್ವ ಬ್ಯಾಂಕಿನ ನೆರವಿನೊಂದಿಗೆ ಮೈಸೂರು–ಚಾಮರಾಜನಗರ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟವು ದಿ:೨೩–೧೧–೧೯೭೬ರಲ್ಲಿ ನೋಂದಾಯಿಸಲ್ಪಟ್ಟಿತು. ಇದರ ವ್ಯಾಪ್ತಿಗೆ ಈಗಿನ ಚಾಮರಾಜನಗರ ಜಿಲ್ಲೆಯು ಒಳಗೊಂಡಿದ್ದು, ಮೈಸೂರು ಜಿಲ್ಲೆ ಮತ್ತು ಮಂಡ್ಯಜಿಲ್ಲೆಯ ಐದು ತಾಲೂಕುಗಳು ಸೇರಿದ್ದವು. ಆನಂತರ ದಿ. ೧–೪–೧೯೮೭ ರಿಂದ ಮಂಡ್ಯ ಜಿಲ್ಲೆಯ ಗೆಜ್ಜಲಗೆರೆ, ಮದ್ದೂರು ತಾಲೂಕಿನಲ್ಲಿ ಮಂಡ್ಯ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ಸ್ಥಾಪನೆಗೊಂಡಿದ್ದರಿಂದ ಮಂಡ್ಯ ಜಿಲ್ಲೆಯ ಐದು ತಾಲೂಕುಗಳು ಇದರ ಕಾರ್ಯ ವ್ಯಾಪ್ತಿಯಿಂದ ಹೊರತುಪಡಿಸಲಾಯಿತು. ಪ್ರಸ್ತುತ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಿಗೆ ಸೀಮಿತಗೊಂಡಿದೆ. ಇದರ ಮುಖ್ಯ ಗುರಿ ಗ್ರಾಮೀಣ ಪ್ರದೇಶದಿಂದ ಹಾಲು ಸಂಗ್ರಹಿಸುವುದು ಮತ್ತು ಮಾರಾಟ ಮಾಡುವುದರ ಮೂಲಕ ರೈತರಿಗೆ ಮಾರುಕಟ್ಟೆ ಸೌಲಭ್ಯವನ್ನೊದಗಿಸುವುದು. ಚಾಮರಾಜನಗರ ಜಿಲ್ಲೆಯಲ್ಲಿ ೨೦೦೭–೦೮ಲ್ಲಿ ೪,೪೫,೬೬,೧೭೩ ಲೀಟರ್ ಹಾಲು ಶೇಖರಣೆ ಮಾಡಲಾಗಿತ್ತು. ಅದು ದಿನವಹಿ ೧,೨೧,೭೬೬ ಲೀಟರ್‌ನಷ್ಟಿತ್ತು. ಇದೇ ಕಾಲಾವಧಿಯಲ್ಲಿ ಮಾರಾಟಗೊಂಡ ಹಾಲು ೩೮,೬೨,೭೬೪ ಲೀಟರ್‌ನಷ್ಟಾಗಿದ್ದು, ದಿನವಹಿ ೧೦,೫೫೪ ಲೀಟರ್‌ನಷ್ಟಾಗಿರುವುದು. ಉಳಿದ ಹಾಲನ್ನು ತುಪ್ಪ, ಮೊಸರು, ಲಸ್ಸಿ, ಮಸಾಲ ಮಜ್ಜಿಗೆ, ಸುವಾಸಿತ ಹಾಲು, ಪೇಡಾ, ಮೈಸೂರುಪಾಕ್, ಬಾದಾಮಿ ಬರ್ಫಿ, ಕ್ಯಾಷ್ಯುಬರ್ಫಿ, ಮೊದಲಾದ ಹಾಲಿನ ಉಪ–ಉತ್ಪನ್ನಗಳ ಉತ್ಪಾದನೆಗಾಗಿ ಬಳಸಿಕೊಳ್ಳಲಾಗಿದೆ. ಹೆಚ್ಚಿನ ವಿವರಗಳಿಗೆ ಕೋಷ್ಟಕ ೫.೨೬ರನ್ನು ನೋಡಿ.

## ಆಂತರಿಕ ಸಾಧನ ಸೌಲಭ್ಯಗಳು

ಜಿಲ್ಲಾ ಕೈಗಾರಿಕಾ ಬೆಳವಣಿಗೆಯು ಜಿಲ್ಲೆಯಲ್ಲಿ ದೊರಕುವ ಖನಿಜ ಸಂಪತ್ತು, ವ್ಯವಸಾಯೋತ್ಪನ್ನ, ಅರಣ್ಯಸಂಪತ್ತು, ಜಲಸಂಪತ್ತು, ಮಾನವಶಕ್ತಿ ಮೊದಲಾದವುಗಳ ಜೊತೆಗೆ ಇತರ ಆಂತರಿಕ ಸಾಧನ ಸೌಲಭ್ಯಗಳಾದ ವಿದ್ಯುಚ್ಛಕ್ತಿ, ಬ್ಯಾಂಕಿಂಗ್, ಮಾರುಕಟ್ಟೆ, ಸಾರಿಗೆ–ಸಂಪರ್ಕ, ಕೈಗಾರಿಕಾ ವಸಾಹತು ಮತ್ತು ಕೈಗಾರಿಕಾ ಕ್ಷೇತ್ರ, ಕೈಗಾರಿಕಾ ತರಬೇತಿ ಸಂಸ್ಥೆ ಮತ್ತು ಕುಶಲಕರ್ಮಿ ತರಬೇತಿ ಸಂಸ್ಥೆ ಮೊದಲಾದವುಗಳನ್ನು ಅವಲಂಬಿಸಿರುತ್ತದೆ. ಮೇಲೆ ಹೇಳಿರುವ ಕೆಲವು ಅಂಶಗಳನ್ನು ಈ ಅಧ್ಯಾಯದಲ್ಲಿ ಸಂಕ್ಷಿಪ್ತವಾಗಿ ತಿಳಿಸಲಾಗಿದೆ.

**ಬ್ಯಾಂಕಿಂಗ್:** ಜಿಲ್ಲೆಯ ಸಣ್ಣ ಕೈಗಾರಿಕೆಗಳಿಗೆ ರಾಷ್ಟ್ರೀಕೃತ ವಾಣಿಜ್ಯ ಬ್ಯಾಂಕುಗಳು, ಕೈಗಾರಿಕಾ ಸಹಕಾರಿ ಬ್ಯಾಂಕು, ಕರ್ನಾಟಕ ಹಣಕಾಸು ನಿಗಮ, ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ, ರಾಷ್ಟ್ರೀಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ಮತ್ತು ನಬಾರ್ಡ್ ಇವು ಅವಧಿ ಸಾಲಗಳ ಅಗತ್ಯವನ್ನು ಪೂರೈಸುತ್ತವೆ. ಇವುಗಳ ಜೊತೆಗೆ ಕರ್ನಾಟಕ ರಾಜ್ಯ ನಾರು ಅಬಿವೃದ್ಧಿ ನಿಗಮ, ಕರ್ನಾಟಕ ರಾಜ್ಯ ಕೈಮಗ್ಗ (ಹ್ಯಾಂಡ್‌ಲೂಂ) ಅಭಿವೃದ್ಧಿ ನಿಗಮ, ಕರ್ನಾಟಕ ರಾಜ್ಯ ಚರ್ಮೋದ್ಯಮ ಅಭಿವೃದ್ಧಿ ನಿಗಮ, ಕರ್ನಾಟಕ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಇವು ಆರ್ಥಿಕ ಮತ್ತು ಮಾರುಕಟ್ಟೆ ಸೌಲಭ್ಯವನ್ನೊದಗಿಸುತ್ತವೆ.

**ಮಾರುಕಟ್ಟೆ:** ಜಿಲ್ಲೆಯಲ್ಲಿ ಒಂದು ಪೂರೈಕೆ ಮತ್ತು ಮಾರಾಟ ಸಂಘದ ಶಾಖೆಯಿದ್ದು, ಷೋರೂಮನ್ನು (ಪ್ರದರ್ಶನ ಮತ್ತು ಮಾರಾಟ ಮಳಿಗೆಯನ್ನು) ತೆರೆಯಲಾಗಿದೆ. ಕೈಗಾರಿಕಾ ಸಹಕಾರ ಸಂಘವು ಜಿಲ್ಲೆಯ ಎಲ್ಲಾ ಕೈಗಾರಿಕೆಗಳಿಗೆ ಆರ್ಥಿಕ ನೆರವನ್ನೊದಗಿಸುತ್ತದೆ. ಜಿಲ್ಲೆಯ ಚಾಮರಾಜನಗರ, ಕೊಳ್ಳೇಗಾಲ ಮತ್ತು ಗುಂಡ್ಲುಪೇಟೆ ತಾಲೂಕುಗಳಲ್ಲಿ ಪ್ರತಿಯೊಂದರಲ್ಲೂ ಒಂದು ಮುಖ್ಯ ಮತ್ತು ಒಂದು ಉಪಕೃಷಿ ಪ್ರಾಥಮಿಕ ಮಾರುಕಟ್ಟೆಗಳಿವೆ. ಯಳಂದೂರು ತಾಲೂಕಿನಲ್ಲಿ ಎ.ಪಿ.ಎಂ.ಸಿ. ಸೌಲಭ್ಯವಿರುವುದಿಲ್ಲ. ಜಿಲ್ಲೆಯಲ್ಲಿ ಒಟ್ಟು ೧೭ ನೇಕಾರರ ಸಹಕಾರ ಸಂಘಗಳಿವೆ. ಜಿಲ್ಲೆಯಲ್ಲಿ ಹೆಚ್ಚಾಗಿ ಉತ್ಪಾದನೆಯಾಗುತ್ತಿರುವ ಬೆಲ್ಲ, ತರಕಾರಿ, ತೆಂಗಿನಕಾಯಿ ಮೊದಲಾದವುಗಳು ವಾರದ ಸಂತೆಗಳಲ್ಲಿ ಮಾರಾಟಗೊಳ್ಳುತ್ತಿರುವುದರಿಂದ ರೆಗ್ಯುಲೇಟಿಂಗ್ ಮಾರುಕಟ್ಟೆಯಲ್ಲಿ ವಹಿವಾಟಿನ ಪ್ರಯಾಣ ಬಹಳ ಕಡಿಮೆಯಿದೆ.

**ಕೈಗಾರಿಕಾ ವಸಾಹತು ಮತ್ತು ಕೈಗಾರಿಕಾ ಕ್ಷೇತ್ರ:** ಕೈಗಾರಿಕೆಗಳು ಸ್ಥಾಪನೆಗೊಳ್ಳಲು ಮೂಲಭೂತ ಸೌಲಭ್ಯಗಳಾದ ವಿದ್ಯುಚ್ಛಕ್ತಿ, ನೀರು, ಸಾರಿಗೆ – ಸಂಪರ್ಕ ಮೊದಲಾದವುಗಳನ್ನು ಸಮೀಪದಲ್ಲೇ ದೊರಕುವಂತೆ ಅನುಕೂಲ ಮಾಡಿಕೊಡುವುದರ ಜೊತೆಗೆ ಸುಲಭ ದರದಲ್ಲಿ ನಿವೇಶನವನ್ನು ಉದ್ಯಮಿಗಳಿಗೊದಗಿಸಿದರೆ ಮಾತ್ರ ಸಾಧ್ಯವಾಗುವುದು. ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮವು ಕಳೆದ ೩೦ ವರ್ಷಗಳಿಂದ ಕೆಲವು ಆಯ್ದ ಪ್ರದೇಶಗಳಲ್ಲಿ ಕೈಗಾರಿಕಾ ವಸಾಹತು (ಇಂಡಸ್ಟ್ರೀಯಲ್ ಎಸ್ಟೇಟ್) ಗಳನ್ನು ನಿರ್ಮಿಸಿ ಉದ್ದಿಮೆದಾರರಿಗೆ ವಿತರಣೆ ಮಾಡುತ್ತಾ ಬಂದಿದೆ. ಕರ್ನಾಟಕ ಕೈಗಾರಿಕಾ ಅಭಿವೃದ್ಧಿ ಮಂಡಳಿಯು ಕೈಗಾರಿಕಾ ಕ್ಷೇತ್ರಗಳನ್ನು ನಿರ್ಮಿಸಿ ಬೃಹತ್ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳಿಗೆ ವಿತರಣೆ ಮಾಡುತ್ತಿದೆ. ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲದಲ್ಲಿ ೭.೨೬ ಎಕರೆ ಭೂಮಿಯನ್ನು ವಶಪಡಿಸಿಕೊಂಡು ೧೬ ಪ್ಲಾಟು ಮತ್ತು ೨೪ ಶೆಡ್ಡುಗಳನ್ನು ನಿರ್ಮಿಸಿ ಉದ್ದಿಮೆದಾರರಿಗೆ ವಿತರಿಸಿದೆ. ಇದನ್ನು ಬಿಟ್ಟರೆ ಉಳಿದ ಯಾವ ತಾಲೂಕಿನಲ್ಲೂ ಕೈಗಾರಿಕಾ ವಸಾಹತುವನ್ನಾಗಲಿ ಅಥವಾ ಕೈಗಾರಿಕಾ ಕ್ಷೇತ್ರವನ್ನಾಗಲಿ ಅಭಿವೃದ್ಧಿಪಡಿಸಲಾಗಿಲ್ಲ. ಜಿಲ್ಲಾ ಕೈಗಾರಿಕಾ ಕೇಂದ್ರವು ಕರ್ನಾಟಕ ಕೈಗಾರಿಕಾ ಕ್ಷೇತ್ರಾಭಿವೃದ್ಧಿ ಮಂಡಳಿಯ ಸಹಯೋಗದೊಂದಿಗೆ ಚಾಮರಾಜನಗರ ತಾಲೂಕಿನ ಉತ್ತವಳ್ಳಿಯಲ್ಲಿ ಕೈಗಾರಿಕಾ ವಸಾಹತು ಮತ್ತು ಕೈಗಾರಿಕಾ ಕ್ಷೇತ್ರವನ್ನು ನಿರ್ಮಿಸುವ ಗುರಿಯನ್ನು ಹೊಂದಿದ್ದು, ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದಿಂದ ೧೨.೦೪ ಎಕರೆ ಭೂಮಿಯನ್ನು ಪಡೆದಿದೆ. ಚಾಮರಾಜನಗರದಲ್ಲಿ ವಿಜ್ಞಾನ ಮತ್ತು ತಾಂತ್ರಿಕ ಉದ್ಯಮಿಗಳ ಪಾರ್ಕ್ (ಎಸ್.ಟಿ.ಇ.ಪಿ)ನ್ನು ಜಿಲ್ಲಾ ಕೈಗಾರಿಕಾ ಕೇಂದ್ರ ಮತ್ತು ಸರ್ಕಾರಿ ಪಾಲಿಟೆಕ್ನಿಕ್ ಸಹಯೋಗದೊಂದಿಗೆ ಸ್ಥಾಪಿಸುವ ಉದ್ದೇಶವಿದೆ.

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮವು ಚಾಮರಾಜನಗರ ಜಿಲ್ಲಾ ಕೈಗಾರಿಕಾ ವಸಾಹತು ನಿರ್ಮಾಣಕ್ಕಾಗಿ ದಿ. ೨೦–೬–೨೦೦೮ರ ವರೆಗೆ ಕೊಳ್ಳೇಗಾಲದಲ್ಲಿ ೭.೪೮ ಎಕರೆ, ಗುಂಡ್ಲುಪೇಟೆಯಲ್ಲಿ ೧೦.೦೦ ಎಕರೆ ಮತ್ತು ಚಾಮರಾಜನಗರದಲ್ಲಿನ ೯.೦೦ ಎಕರೆ ಸೇರಿ ಒಟ್ಟು ೨೬.೪೮ ಎಕರೆ ಭೂಮಿಯನ್ನು ವಶಪಡಿಸಿಕೊಂಡಿದ್ದು, ಕೊಳ್ಳೇಗಾಲದಲ್ಲಿ ೧೬ ಮಳಿಗೆಗಳನ್ನು ನಿರ್ಮಾಣಮಾಡಿ ವಿತರಿಸಿದೆ. ಚಾಮರಾಜನಗರ ಮತ್ತು ಗುಂಡ್ಲುಪೇಟೆಗಳಲ್ಲಿ ನಿವೇಶನಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಕೊಳ್ಳೇಗಾಲದಲ್ಲಿ ನಿರ್ಮಾಣಗೊಂಡಿರುವ ೧೬ ಮಳಿಗೆಗಳ ಪೈಕಿ ಎಂಟು ಸಿ–ಟೈಪ್, ನಾಲ್ಕು ಡಿ–ಟೈಪ್ ಮತ್ತು ನಾಲ್ಕು ಎಂ–ಟೈಪ್‌ಗಳಾಗಿವೆ. ಇವುಗಳಲ್ಲಿ ಆರು ಮಳಿಗೆಗಳು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದವುಗಳಾಗಿವೆ.

**'ವಿಶ್ವ'ಯೋಜನೆ:** ಗ್ರಾಮಾಂತರ ಪ್ರದೇಶದಲ್ಲಿ ದೊರಕುವ ಕಚ್ಚಾ ಸರಕನ್ನು ಉಪಯೋಗಿಸಿ ಬಹು ಜನರು ಉಪಯೋಗಿಸುವಂತಹ ತಿನಿಸುಗಳನ್ನು ತಯಾರಿಸುವುದರ ಮೂಲಕ ಗ್ರಾಮಾಂತರ ಅಥವಾ

ಗೃಹ ಉದ್ಯಮಿಗಳಿಗೆ ಶಾಶ್ವತ ಉದ್ಯೋಗ ದೊರಕುವಂತೆ ಮಾಡುವ ಉದ್ದೇಶದಿಂದ ರಾಜ್ಯ ಸರ್ಕಾರವು ವಿಶ್ವಯೋಜನೆಯನ್ನು ಅನುಷ್ಠಾನಗೊಳಿಸಿರುವುದು. ಈ ಯೋಜನೆಯಡಿಯಲ್ಲಿ ಉದ್ಯೋಗಾಸಕ್ತ ಗ್ರಾಮಾಂತರ ಜನರಿಗೆ ತರಬೇತಿ ನೀಡುವುದು, ಉತ್ಪಾದನಾ ಘಟಕಗಳನ್ನು ಸ್ಥಾಪಿಸುವುದು, ಪ್ರೋತ್ಸಾಹಾರ್ಥವಾಗಿ ಕಚ್ಚಾ ಸರಕುಗಳನ್ನೊದಗಿಸುವುದು ಮತ್ತು ಅವರು ತಯಾರಿಸಿದ ವಸ್ತುಗಳನ್ನು ಜಿಲ್ಲಾ ಪೂರೈಕೆ ಮತ್ತು ಮಾರುಕಟ್ಟೆ ಸೇವೆ (ಡಿ.ಎಸ್.ಎಂ.ಎಸ್) ಹಾಗೂ ರಾಜ್ಯಮಟ್ಟದ ಮಂಡಳಿ ಮತ್ತು ನಿಗಮಗಳ ಮೂಲಕ ಮಾರಾಟ ಮಾಡುವುದಾಗಿದೆ. ಸಂಘ ಅಥವಾ ಸಂಸ್ಥೆಗಳಿಲ್ಲದೆ ಅಸಂಘಟಿತ ಜನರಿಗೆ ಜಿಲ್ಲಾ ಕೈಗಾರಿಕಾ ಕೇಂದ್ರ ತರಬೇತಿ ಸೌಲಭ್ಯವನ್ನೊದಗಿಸುತ್ತದೆ. ಸಂಘಟಿತರಿಗೆ ರಾಜ್ಯ ಮಟ್ಟದ ಮಂಡಳಿ ಮತ್ತು ನಿಗಮಗಳು ತರಬೇತಿ ಸೌಲಭ್ಯವನ್ನೊದಗಿಸುತ್ತವೆ. ಚಾಮರಾಜನಗರ ಜಿಲ್ಲೆಯಲ್ಲಿನ ಒಟ್ಟು ೨೩ ವಿಶ್ವ ವರ್ಕ್ ಶೆಡ್ಡುಗಳ ಪೈಕಿ ಆರು ಚಾಮರಾಜನಗರ ತಾಲೂಕಿನಲ್ಲಿ, ಐದು ಗುಂಡ್ಲುಪೇಟೆ ತಾಲೂಕಿನಲ್ಲಿ, ಆರು ಕೊಳ್ಳೇಗಾಲ ತಾಲೂಕಿನಲ್ಲಿ ಮತ್ತು ಆರು ಯಳಂದೂರು ತಾಲೂಕಿನಲ್ಲಿ ನಿರ್ಮಾಣಗೊಂಡಿವೆ. ಒಟ್ಟು ೨೩ ಶೆಡ್ಡುಗಳ ಪೈಕಿ ೧೦ ಶೆಡ್ಡುಗಳು ಮಾತ್ರ ಕಾರ್ಯನಿರ್ವಹಿಸುತ್ತಿವೆ.

**ತರಬೇತಿ ಸಂಸ್ಥೆಗಳು:** ಕೈಗಾರಿಕೆಗಳು ಉತ್ಪಾದನೆಯ ಗುಣಮಟ್ಟವನ್ನು ಕಾಯ್ದು ಕೊಳ್ಳಬೇಕಾಗಿದ್ದರೆ ತಾಂತ್ರಿಕ ಶಿಕ್ಷಣ ಮತ್ತು ತಾಂತ್ರಿಕ ತರಬೇತಿಯನ್ನು ಹೊಂದಿದವರು ಅತ್ಯಾವಶ್ಯಕವಾಗಿ ಬೇಕಾಗುತ್ತದೆ. ಜಿಲ್ಲೆಯಲ್ಲಿ ೨೦೦೯–೧೦ರಲ್ಲಿ ಒಂದು ಸರ್ಕಾರಿ ಇಂಜನಿಯರಿಂಗ್ ಕಾಲೇಜ್ ಚಾಮರಾಜನಗರದಲ್ಲಿದ್ದು, ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್, ಕಂಪ್ಯುಟರ್ ಸೈನ್ಸ್, ಮೆಕಾನಿಕಲ್ ಮತ್ತು ಸಿವಿಲ್ ಇಂಜನಿಯರಿಂಗ್ ಕೋರ್ಸುಗಳು ಲಭ್ಯವಿದೆ. ಒಂದು ಪಾಲಿಟೆಕ್ನಿಕ್, ನಾಲ್ಕು ಕೈಗಾರಿಕಾ ತರಬೇತಿ ಸಂಸ್ಥೆಗಳು ಹಾಗೂ ಒಂದು ಕರಕುಶಲಕರ್ಮಿಗಳ ತರಬೇತಿ ಸಂಸ್ಥೆಯು ವಿದ್ಯಾರ್ಥಿಗಳಿಗೆ ತಮ್ಮ ನೈಪುಣ್ಯತೆಯನ್ನು ಹೆಚ್ಚಿಸಿಕೊಳ್ಳಲು ಮತ್ತು ಆಧುನಿಕ ಯಂತ್ರೋಪಕರಣಗಳನ್ನು ಉಪಯೋಗಿಸುವುದನ್ನು ತಿಳಿಸಿಕೊಡುತ್ತಿವೆ. ಇದರಿಂದ ಯುವಕರು ಸ್ವಯಂ ಉದ್ಯೋಗವನ್ನು ಕೈಗೊಳ್ಳಲು ಮತ್ತು ಇತರ ಉದ್ದಿಮೆಗಳಲ್ಲಿ ಉದ್ಯೋಗ ಪಡೆಯಲು ಸಹಾಯವಾಗುವುದು. ಜಿಲ್ಲೆಯ ಚಾಮರಾಜನಗರ ತಾಲೂಕಿನಲ್ಲಿ ಒಂದು ಪಾಲಿಟೆಕ್ನಿಕ್, ಒಂದು ಕರಕುಶಲ ತರಬೇತಿ ಸಂಸ್ಥೆ ಮತ್ತು ಎರಡು ಕೈಗಾರಿಕಾ ತರಬೇತಿ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿದ್ದವು. ಉಳಿದೆರಡು ಕೈಗಾರಿಕಾ ತರಬೇತಿ ಸಂಸ್ಥೆಗಳ ಪೈಕಿ ಕೊಳ್ಳೇಗಾಲ ತಾಲೂಕಿನಲ್ಲಿ ಒಂದು ಮತ್ತು ಯಳಂದೂರು ತಾಲೂಕಿನಲ್ಲಿ ಒಂದು ಇದ್ದು, ಆಸಕ್ತ ಯುವ ಪೀಳಿಗೆಗೆ ತರಬೇತಿ ನೀಡುತ್ತಿವೆ.

## ಕೇಂದ್ರ ಸರ್ಕಾರದ ಯೋಜನೆಗಳು

ಕೈಗಾರಿಕೀಕರಣದ ಮೂಲಕ ಉದ್ಯೋಗ ಸೃಷ್ಟಿಸುವುದು ಅಥವಾ ಸ್ವ–ಉದ್ಯೋಗವಂತರನ್ನಾಗಿ ಮಾಡುವುದರಿಂದ ಬಹುಸಂಖ್ಯಾತ ನಿರುದ್ಯೋಗಿಗಳು ಅಥವಾ ಅರೆ ಉದ್ಯೋಗಿಗಳಿಗೆ ಉದ್ಯೋಗ ದೊರಕಿಸಿಕೊಡಲು ಅನುಕೂಲವಾಗಲೆಂದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅನೇಕ ಯೋಜನೆಗಳನ್ನು ಕಾರ್ಯರೂಪಕ್ಕೆ ತಂದಿವೆ. ಇದಕ್ಕೆ ಹಣಕಾಸು ಸಂಸ್ಥೆಗಳು ಸಹಾಯಧನದ ಮೂಲಕ ನೆರವನ್ನು ನೀಡುತ್ತಿವೆ. ಜಿಲ್ಲೆಯ ಕೈಗಾರಿಕಾಭಿವೃದ್ಧಿಗೆ ನೆರವು ನೀಡುತ್ತಿರುವ ಯೋಜನೆಗಳ ಸಂಕ್ಷಿಪ್ತ ಪರಿಚಯವನ್ನು ಇಲ್ಲಿ ಕೊಡಲಾಗಿದೆ.

**೧. ಪ್ರಧಾನಮಂತ್ರಿಗಳ ರೋಜಗಾರ್‌ಯೋಜನೆ:** ವಿದ್ಯಾವಂತ ನಿರುದ್ಯೋಗಿಗಳಿಗೆ ಸ್ವ–ಉದ್ಯೋಗಾವಕಾಶ ಕಲ್ಪಿಸಿಕೊಡುವ ಉದ್ದೇಶದಿಂದ ಪ್ರಧಾನಮಂತ್ರಿಗಳ ರೋಜ್‌ಗಾರ್ ಯೋಜನೆ ೧೯೯೩–೯೪ರಲ್ಲಿ

ಕಾರ್ಯಾರಂಭಗೊಂಡಿತು. ಈ ಯೋಜನೆಯ ಪ್ರಕಾರ ಜಿಲ್ಲೆಯ ೧೮ ರಿಂದ ೩೫ ವರ್ಷ ವಯಸ್ಸಿನವರು ಕನಿಷ್ಠ ಎಂಟನೇ ತರಗತಿಯಲ್ಲಿ ಉತ್ತೀರ್ಣರಾಗಿದ್ದು, ₹ ೪೦,೦೦೦ಕ್ಕೂ ಕಡಿಮೆ ಆದಾಯ ಹೊಂದಿದ್ದವರಾಗಿದ್ದರೆ; ಸರ್ಕಾರ ಅನುಮೋದನೆ ಪಡೆದ ಯಾವುದೇ ತರಬೇತಿ ಕೇಂದ್ರದಲ್ಲಿ ಆರು ತಿಂಗಳ ಅವಧಿಯ ತರಬೇತಿ ಪಡೆಯಲವಕಾಶವಿದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಮಾಜಿಯೋಧರು ಅಂಗವಿಕಲರು ಮತ್ತು ಸ್ತ್ರೀಯರಿಗೆ ೧೦ ವರ್ಷಗಳ ವಯೋಮಿತಿ ರಿಯಾಯಿತಿ ಸೌಲಭ್ಯವಿರುವುದು. ಇಂತಹ ತರಬೇತಿ ಸೌಲಭ್ಯಕ್ಕೆ ತಗಲುವ ವೆಚ್ಚದ ಶೇ. ೧೫ ಅಥವಾ ಗರಿಷ್ಠ ₹ ೭೫೦೦ ಅನ್ನು ಕೇಂದ್ರ ಸರ್ಕಾರ ಭರಿಸುತ್ತದೆ. ಹೀಗೆ ತರಬೇತಿ ಪಡೆದವರು ಸ್ವಂತ ವ್ಯಾಪಾರ ಮಾಡುವುದಾದರೆ ತಲಾ ₹ ಒಂದು ಲಕ್ಷ ಅಥವಾ ಕೈಗಾರಿಕೆ ಪ್ರಾರಂಭಿಸುವುದಾದರೆ ತಲಾ ₹ ಎರಡು ಲಕ್ಷ ಧನ ಸಹಾಯವನ್ನು ವಾಣಿಜ್ಯ ಬ್ಯಾಂಕುಗಳು ನೀಡುತ್ತವೆ.

**೨. ಖಾದಿ ಮತ್ತು ಗ್ರಾಮೋದ್ಯೋಗ ಯೋಜನೆ:** ಜಿಲ್ಲೆಯ ಗ್ರಾಮಾಂತರ ಪ್ರದೇಶದಲ್ಲಿ ಸ್ಥಾಪಿಸುವ ಗೃಹ ಕೈಗಾರಿಕೆಗಳಿಗೆ ಈ ಯೋಜನೆಯ ಅಂಚಿನ ಹಣದ ಯೋಜನೆಯಡಿಯಲ್ಲಿ ಪ್ರತಿ ಘಟಕಕ್ಕೆ ₹ ೨೫ಲಕ್ಷದವರೆಗೆ ಧನ ಸಹಾಯ ನೀಡಲಾಗುವುದು. ಈ ಸೌಲಭ್ಯ ಸಾಮಾನ್ಯ ವರ್ಗದವರಾದರೆ ಪ್ರಾಜೆಕ್ಟ್ ವೆಚ್ಚದ ಶೇ. ೨೫ ರಷ್ಟಿರುತ್ತದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಅಲ್ಪಸಂಖ್ಯಾತರು, ಮಹಿಳೆಯರು ಮತ್ತು ಹಿಂದುಳಿದ ವರ್ಗದವರಿಗೆ ಶೇ. ೩೦ ರಷ್ಟಿರುತ್ತದೆ. ಈ ಅಂಚಿನ ಹಣ ಸೌಲಭ್ಯವನ್ನು ಸ್ಥಾವರ ಪ್ರಾರಂಭಗೊಂಡ ಎರಡು ವರ್ಷದವರೆಗೆ ಸಾಲವೆಂದು ಆನಂತರ ಸಹಾಯಧನವೆಂದು ಪರಿಗಣಿಸಲಾಗುವುದು.

**೩. ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆ:** ಈ ಯೋಜನೆಯನ್ನು ೧೯೯೯ರಲ್ಲಿ ಜಾರಿಗೊಳಿಸಲಾಗಿದೆ. ಇದರ ಪ್ರಕಾರ ಸ್ವ ಉದ್ಯೋಗಕ್ಕೆ ಸಂಬಂಧಿಸಿದಂತೆ ತರಬೇತಿ, ತಾಂತ್ರಿಕತೆ, ಆಂತರಿಕ ಸಾಧನಗಳು, ವಿಮೆ, ಮಾರುಕಟ್ಟೆ ಮೊದಲಾದ ಸೌಲಭ್ಯಗಳನ್ನೊದಗಿಸುವುದರ ಮೂಲಕ ಆದಾಯವನ್ನು ಹೆಚ್ಚಿಸಿಕೊಳ್ಳಲು ಒಟ್ಟು ವೆಚ್ಚದ ಶೇ. ೩೦ರಷ್ಟು ಗರಿಷ್ಠ ₹ ೭೫೦೦/– ದೊರೆಯುವುದು. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ/ಅಂಗವಿಕಲರಿಗೆ ಶೇ. ೫೦ರಷ್ಟು, ಅಥವಾ ಗರಿಷ್ಠ ₹ ೧೦,೦೦೦/– ಬ್ಯಾಂಕ್ ಸಾಲ ಮತ್ತು ಸರ್ಕಾರದ ಸಹಾಯಧನ ಸೌಲಭ್ಯವಿರುವುದು.

**೪. ಸಣ್ಣ ಕೈಗಾರಿಕೆಗಳ ತಾಂತ್ರಿಕ ಉನ್ನತೀಕರಣಕ್ಕಾಗಿ ಸಾಲಕ್ಕೆ ಹೊಂದಿಕೊಂಡ ಬಂಡವಾಳ ಯೋಜನೆ:** ಈ ಯೋಜನೆಯಡಿಯಲ್ಲಿ ಕೈಗಾರಿಕೆಗಳ ತಾಂತ್ರಿಕ ಉನ್ನತೀಕರಣಕ್ಕೆ ಶೇ. ೧೫ರಷ್ಟು ಸಹಾಯಧನವನ್ನು ಅರ್ಹ ಸಣ್ಣ ಕೈಗಾರಿಕೆಗಳಿಗೆ ನಬಾರ್ಡ್ (ಎನ್.ಎ.ಬಿ.ಎ.ಆರ್.ಡಿ), ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಬ್ಯಾಂಕ್ ಆಫ್ ಇಂಡಿಯಾ (ಸಿಡ್‌ಬಿ) ಮತ್ತು ವಾಣಿಜ್ಯ ಬ್ಯಾಂಕುಗಳ ಮೂಲಕ ವಿತರಿಸಲಾಗುವುದು.

**೫. ಸಣ್ಣ ಕೈಗಾರಿಕೆಗಳ ಕ್ರೆಡಿಟ್ ಗ್ಯಾರಂಟಿ ಫಂಡ್ ಟ್ರಸ್ಟ್:** ಕ್ರೆಡಿಟ್ ಗ್ಯಾರಂಟಿ ನಿಧಿ ಟ್ರಸ್ಟ್ ಕೇಂದ್ರ ಸರ್ಕಾರ ಮತ್ತು ಸಿಡ್‌ಬಿ ಒಟ್ಟಿಗೆ ಸೇರಿ ೨೦೦೧ರಲ್ಲಿ ಸ್ಥಾಪಿಸಲಾಗಿದೆ. ಇದು ಬ್ಯಾಂಕುಗಳು ಅಥವಾ ಹಣಕಾಸು ಸಂಸ್ಥೆಗಳು ಸಣ್ಣ ಕೈಗಾರಿಕೆಗಳಿಗೆ ₹ ೨೫ ಲಕ್ಷಗಳ ವರೆಗೆ ಸಾಲಕೊಡಲು ಅನುವು ಮಾಡಿಕೊಟ್ಟಿದೆ.

**೬. ಸ್ವರೋಜ್‌ಗಾರ್ ಕ್ರೆಡಿಟ್ ಕಾರ್ಡ್ ಯೋಜನೆ:** ಈ ಯೋಜನೆಯನ್ನು ೨೦೦೩–೦೪ರಲ್ಲಿ ಜಾರಿಗೊಳಿಸಲಾಗಿದೆ. ಸಣ್ಣ ಉದ್ದಿಮೆದಾರರಾದ ನೇಕಾರರು, ಮೀನುಗಾರರು, ಸ್ವ–ಉದ್ಯೋಗಸ್ಥರು, ರಿಕ್ಷಾ ಹೊಂದಿರುವವರು ಮೊದಲಾದವರಿಗೆ ₹ ೨೫,೦೦೦/– ಸಾಲ ನೀಡಲು ಸ್ವರೋಜ್‌ಗಾರ್ ಕ್ರೆಡಿಟ್ ಕಾರ್ಡ್

ಯೋಜನೆ ಅವಕಾಶ ಕಲ್ಪಿಸಿಕೊಟ್ಟಿದೆ. ಈ ವಿಧದ ಫಲಾನುಭವಿಗಳಿಗೆ ವಿಳಾಸವಿರುವ ಪಾಸ್ ಬುಕ್ ಮತ್ತು ಕ್ರೆಡಿಟ್‌ಕಾರ್ಡ್‌ಗಳನ್ನು ವಿತರಿಸಲಾಗುವುದು.

**೭. ಸ್ಪೆಷಲ್ ಕಾಂಪೊನೆಂಟ್ ಯೋಜನೆ:** ಸಮಾಜ ಕಲ್ಯಾಣ ಇಲಾಖೆಯು ಸ್ಪೆಷಲ್ ಕಾಂಪೊನೆಂಟ್ ಪ್ಲಾನ್ ಮತ್ತು ಟ್ರೈಬಲ್ ಸಬ್ ಪ್ಲಾನ್‌ಗಳ ಅಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ಯಮಿಗಳು ಪ್ರಾರಂಭಿಸುವ ಉದ್ಯಮಗಳಿಗೆ ಶೇ. ೬೦ರಷ್ಟು ಸಹಾಯಧನ ಮತ್ತು ಶೇ. ೪೦ರಷ್ಟು ಬ್ಯಾಂಕ್ ಸಾಲ ಸೌಲಭ್ಯವನ್ನೊದಗಿಸುವುದು. ಈ ಸೌಲಭ್ಯದ ಗರಿಷ್ಠ ಮಿತಿ ₹ ೧೦,೦೦೦/– ಮಾತ್ರವಿರುವುದು.

## ವಿದ್ಯುಚ್ಛಕ್ತಿ

ವಿದ್ಯುಚ್ಛಕ್ತಿಯು ಗೃಹ, ಸಣ್ಣ, ಬೃಹತ್ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳೇ ಅಲ್ಲದೆ ಇನ್ನಿತರ ಆದ್ಯತಾ ವಲಯಗಳ ಮೂಲಶಕ್ತಿಯಾಗಿ ಉಪಯೋಗಿಸಲ್ಪಡುವುದು. ಚಾಮರಾಜನಗರದಲ್ಲಿ ಸಾಂಪ್ರದಾಯಿಕ ಮತ್ತು ಅಸಾಂಪ್ರದಾಯಕ ವಲಯಗಳೆರಡರಲ್ಲೂ ವಿದ್ಯುತ್ ಉತ್ಪಾದನೆಯಾಗುತ್ತಿಲ್ಲ. ಜಿಲ್ಲೆಯ ಸಮೀಪದಲ್ಲೇ ಇರುವ ಶಿವನಸಮುದ್ರ ಜಲವಿದ್ಯುತ್ ಕೇಂದ್ರದಿಂದ ಮತ್ತು ಜೋಗದ ವಿದ್ಯುತ್ ಉತ್ಪಾದನಾ ಕೇಂದ್ರದಿಂದ ವಿದ್ಯುತ್ ಪೂರೈಕೆಯಾಗುತ್ತಿದ್ದರೂ, ಅದು ಸಮರ್ಪಕವಾಗಿಲ್ಲದಿರುವುದರ ಜೊತೆಗೆ ವೋಲ್ಟೇಜ್‌ನಲ್ಲಿ ವ್ಯತ್ಯಯ ಉಂಟಾಗಿದ್ದು, ಇದನ್ನು ತಪ್ಪಿಸಿ ಒಳ್ಳೇಯ ಗುಣಮಟ್ಟದ ವಿದ್ಯುತ್‌ನ್ನು ಜಿಲ್ಲೆಗೆ ಪೂರೈಸಬೇಕೆಂಬ ಉದ್ದೇಶದಿಂದ ಗ್ರಾಮಾಂತರ ವಿದ್ಯುತ್ ಪೂರೈಕೆ ಯೋಜನೆ ಮತ್ತು ಕುಟುಂಬ ವಿದ್ಯುತ್ ಹರವಿನ ಜಾಲದ ಪೂರೈಕೆ ವ್ಯವಸ್ಥೆ (ಸ್ಕೀಂ ಫಾರ ರೂರಲ್ ಇಲೆಕ್ಟ್ರೀಕ್‌ಸಿಟಿ ಇನ್‌ಫ್ರಾಸ್ಟ್ರಕ್ಚರ್ ಅಂಡ್ ಹೌಸ್ ಹೋಲ್ಡ್ ಗ್ರಿಡ ಸಪ್ಲೈ ಸಿಸ್ಟಮ್) (ಎಸ್.ಆರ್.ಇ.ಡಿ.ಹೆಚ್.ಎಸ್.ಎಸ್.) ಯೋಜನೆಯಡಿಯಲ್ಲಿ ಉಪ ಸ್ಟೇಷನ್ ಮತ್ತು ಪರಿವರ್ತಕಗಳನ್ನು (ಟಾನ್ಸ್‌ಫಾರಮರ್‌ಗಳನ್ನು) ಹೆಚ್ಚಿಸಲಾಗಿದೆ. ವ್ಯವಾಯೋತ್ಪನ್ನ ಮತ್ತು ಸಣ್ಣ ಕೈಗಾರಿಕೆಗಳಿಗೆ ಒಳ್ಳೇಯ ಗುಣಮಟ್ಟದ ವಿದ್ಯುತ್ ಪೂರೈಕೆ ಮಾಡುವುದರ ಜೊತೆಗೆ ವಿದ್ಯುತ್ ಕಡಿತವನ್ನು ತಪ್ಪಿಸುವ ಗುರಿಯನ್ನು ಹೊಂದಲಾಗಿದೆ. ಕೊಳ್ಳೇಗಾಲ ತಾಲೂಕಿನಲ್ಲಿ ಮೆ॥ ಎಸ್.ಎಲ್.ಎಸ್. ಪವರ್ ಪ್ರಾಜೆಕ್ಟ್ ಮತ್ತು ಮೆ॥ಪಯನೀರ್ ಪವರ್ ಕಾರ್ಪೋರೇಷನ್ ಲಿ. ಕಂಪನಿಗಳು ಪ್ರಾರಂಭಗೊಂಡು ಜಲವಿದ್ಯುತ್ ಉತ್ಪಾದನೆಯ ಪ್ರಾಯೋಗಿಕ ಕಾರ್ಯಾರಂಭಿಕ ಹಂತದಲ್ಲಿವೆ. ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ಕಂಪನಿ (ಚೆಸ್‌ಕಾಂ) ಜಿಲ್ಲೆಯ ವಿದ್ಯುತ್ ಪೂರೈಕೆಯ ಸಾಮರ್ಥ್ಯವನ್ನು ೧೨ ಮೆ. ವೋ. ನಿಂದ ೨೦ ಮೆ. ವೋ. ಗೆ ಹೆಚ್ಚಿಸಿದೆ. ಕರ್ನಾಟಕ ವಿದ್ಯುತ್ ಸರಬರಾಜು ನಿಗಮ ಲಿ. (ಕೆ.ಪಿ.ಟಿ.ಸಿ.ಎಲ್) ಜಿಲ್ಲೆಯ ವಿದ್ಯುತ್ ಪೂರೈಕೆಯ ಮಟ್ಟವನ್ನು ಹೆಚ್ಚಿಸುವ ಉದ್ದೇಶದಿಂದ ಒಂಬತ್ತು ಆಂತರಿಕ ಯೋಜನೆಗಳನ್ನು ಬೇಗೂರು ಮತ್ತು ಬೊಮ್ಮಲಪುರ, ಹೊನ್ನಳ್ಳಿ, ಅಟ್ಟಗುಳಿಪುರ ಮತ್ತು ಪನ್ಯದ ಹುಂಡಿ, ಮಧುವನಹಳ್ಳಿ, ಮರತ್ತಳ್ಳಿ ಮತ್ತು ರಾಂಪುರ, ಪಿ.ಜಿ.ಪಾಳ್ಯ, ಸಂತೆಮರಳ್ಳಿ, ಯಳಂದೂರು ಮತ್ತು ಕಬ್ಬಳ್ಳಿ ಮತ್ತು ಹೊರೆಯಾಲಗಳಲ್ಲಿ ಕಾರ್ಯರೂಪಗೊಳಿಸಿದೆ.

ಚಾಮರಾಜನಗರ ತಾಲೂಕಿನಲ್ಲಿ ೬೬/೧೧ ಕಿ.ವೋ. ಎರಡು ಪವರ್ ಸ್ಟೇಷನ್‌ಗಳು ಹಾಗೂ ೩೩/೧೧ ಕಿ.ವೋ.ನ ಮೂರು ಪವರ್ ಸ್ಟೇಷನ್‌ಗಳು; ಕೊಳ್ಳೇಗಾಲ ತಾಲೂಕಿನಲ್ಲಿ ೬೬/೧೧ ಕಿ.ವೋ. ಆರು ಪವರ್‌ಸ್ಟೇಷನ್‌ಗಳು ಮತ್ತು ಗುಂಡ್ಲುಪೇಟೆ ತಾಲೂಕಿನಲ್ಲಿ ೬೬/೧೧ ಕಿ.ವೋ. ಮೂರು ಪವರ್ ಸ್ಟೇಷನ್‌ಗಳು ಮತ್ತು ೩೩/೧೧ಕಿ.ವೋ. ಒಂದು ಪವರ್‌ಸ್ಟೇಷನ್ ಕೈಗಾರಿಕೆಗಳಿಗೆ ಸಮರ್ಪಕ ವಿದ್ಯುತ್ ಪೂರೈಕೆ ಮಾಡುತ್ತಿವೆ. ಜಿಲ್ಲೆಯ ಕೊಳ್ಳೇಗಾಲ ವಿಭಾಗಕ್ಕೆ ಅ) ೬೬ಕೆ.ವಿ. ಎಸ್. ಎಫ್.ಸಿ. ವಿದ್ಯುತ್ ವಿತರಣಾ ಕೇಂದ್ರದಿಂದ ಅಲ್ಪ

ಪ್ರಮಾಣದಲ್ಲಿ ವಿದ್ಯುತ್ ೬೬/೧೧ ವಿದ್ಯುತ್ ವಿತರಣಾ ಕೇಂದ್ರದಿಂದ ಮತ್ತು ಕೊಳ್ಳೇಗಾಲಕ್ಕೆ ಎಸ್. ಎಫ್.ಸಿ. ಶಿವನ ಸಮುದ್ರ ಮಾರ್ಗದಿಂದ ಸರಬರಾಜಾಗುತ್ತಿದೆ. ಆ) ೨೨೦/೬೬/೧೧ ಕೆ.ವಿ. ಸ್ವೀಕರಣಾ ಕೇಂದ್ರ, ಮಧುವನಹಳ್ಳಿ ಕೇಂದ್ರಕ್ಕೆ ೬೬ ಕೆ.ವಿ. ಎಸ್.ಎಫ್.ಸಿ. ಮಧುವಿನಹಳ್ಳಿ ಮಾರ್ಗದಿಂದ ಸರಬರಾಜಾಗುತ್ತಿದೆ ಮತ್ತು ಇ) ೨೨೦/೬೬/೧೧ ಕೆ.ವಿ. ಮಧುವಿನ ಹಳ್ಳಿ ಸ್ವೀಕರಣಾ ಕೇಂದ್ರಕ್ಕೆ ೨೨೦/೬೬ ಟಿ.ಕೆ.ಹಳ್ಳಿ ಸ್ವೀಕರಣಾ ಕೇಂದ್ರ ಟಿ.ಕೆ. ಹಳ್ಳಿ ೨೨೦ ಕೆ.ವಿ, ಎರಡು ಮಾರ್ಗದಲ್ಲಿ ವಿದ್ಯುತ್ ಸರಬರಾಜಾಗುತ್ತಿದೆ.

ಚಾಮರಾಜನಗರ ವಿಭಾಗಕ್ಕೆ ಜೋಗ್‌ದ ವಿದ್ಯುತ್ ಉತ್ಪಾದನಾ ಕೇಂದ್ರದಿಂದ ಹೂಟಗಳ್ಳಿ, ಮೈಸೂರು, ಮತ್ತು ಕಡಕೊಳ ಮಾರ್ಗದಲ್ಲಿ ವಿದ್ಯುತ್ ಸರಬರಾಜಾಗುತ್ತದೆ. ೨೦೧೧ರ ಮಾರ್ಚ್ ಅಂತ್ಯಕ್ಕೆ ವಿದ್ಯುಚ್ಛಕ್ತಿ ಬಳಕೆಯಿಂದ ಸರ್ಕಾರಕ್ಕೆ ಬಂದ ಆದಾಯ ₹ ೯೧೮೫.೫೯ ಲಕ್ಷಗಳಾಗಿತ್ತು.

ಜಿಲ್ಲೆಯಲ್ಲಿ ೨೦೧೧-೧೨ರಲ್ಲಿದ್ದ ವಿದ್ಯುತ್ ಸರಬರಾಜು ಘಟಕಗಳ (ಟ್ರಾನ್ಸ್‌ಫಾರ್ಮರ್) ಸ್ಥಳ, ವೋಲ್ಟೇಜ್ ಪ್ರಮಾಣ (ಕಿ.ವ್ಯಾ), ಟ್ರಾನ್ಸ್‌ಫಾರಮರ್‌ಗಳ ಸಂಖ್ಯೆ, ಪ್ರತಿ ಟ್ರಾನ್ಸ್‌ಫಾರ್ಮರ್‌ಗಳ ಸಾಮರ್ಥ್ಯ (ಮೆ.ವ್ಯಾ.) ಇವುಗಳ ವಿವರಗಳನ್ನು ಕೋಷ್ಟಕ ೫.೧೭ ಹಾಗೂ ಕೋಷ್ಟಕ ೫.೧೮ರಲ್ಲಿ ನೀಡಲಾಗಿದೆ.

**ಕೋಷ್ಟಕ ೫.೧೭**

| ಕ್ರ.ಸಂ. | ವಿದ್ಯುತ್ ವಿತರಣಾ ಸ್ಥಳ | ವೋಲ್ಟೇಜ್ ಪ್ರಮಾಣ (ಕೆ.ವಿ) | ಟ್ರಾನ್ಸ್‌ಫಾರ್ಮರ್‌ಗಳ ಸಂಖ್ಯೆ | ಟ್ರಾನ್ಸಫಾರರ್ಮರ್ ಸಾಮರ್ಥ್ಯ (ಎಂ.ವಿ.ಎ) | ಒಟ್ಟು ಸಾಮರ್ಥ್ಯ (ಎಂ.ವಿ.ಎ) |
|---|---|---|---|---|---|
| ೧. | ಕೊಳ್ಳೇಗಾಲ | ೬೬/೧೧ | ೨ | ೨ x ೧೨.೫ | ೨೫ |
| ೨. | ಸತ್ತೇಗಾಲ | ೬೬/೧೧ | ೨ | ೧ x ೮<br>೧ x ೬.೩ | ೧೪.೩ |
| ೩. | ಮಧುವಿನಹಳ್ಳಿ | ೨೨೦/೬೬/೧೧ | ೩ | ೨ x ೧೦೦<br>೧ x ೧೨.೫ | ೨೧೨.೫ |
| ೪. | ದೊಡ್ಡಿಂದುವಾಡಿ | ೬೬/೧೧ | ೨ | ೧ x ೮<br>೧ x ೫ | ೧೩ |
| ೫. | ಹನೂರು | ೬೬/೧೧ | ೨ | ೧ x ೧೨.೫<br>೧ x ೮ | ೨೦.೫ |
| ೬. | ಕೌದಳ್ಳಿ | ೬೬/೧೧ | ೨ | ೧ x ೧೨.೫<br>೧ x ೬.೩ | ೧೮.೮ |
| ೭. | ರಾಮಾಪುರ | ೬೬/೧೧ | ೨ | ೨ x ೮ | ೧೬ |
| ೮. | ಮಾರ್ಟಳ್ಳಿ | ೬೬/೧೧ | ೧ | ೧ x ೮ | ೮ |
| ೯. | ಪಿ.ಜಿ. ಪಾಳ್ಯ | ೬೬/೧೧ | ೧ | ೧ x ೮ | ೮ |
| ೧೦. | ಯಳಂದೂರು | ೬೬/೧೧ | ೨ | ೨ x ೮ | ೧೬ |
| ೧೧. | ದೊಡ್ಡರಾಯನಪೇಟೆ | ೬೬/೧೧ | ೪ | ೨ x ೨೦<br>೨ x ೧೨.೫ | ೬೫ |
| ೧೨. | ಸಂತೆಮರಳ್ಳಿ | ೬೬/೧೧ | ೨ | ೧ x ೧೨.೫<br>೧ x ೬.೩ | ೧೮.೮ |
| ೧೩. | ಹೊನಹಳ್ಳಿ | ೬೬/೧೧ | ೨ | ೨ x ೧೨.೫ | ೨೫.೦ |

*ಮುಂದುವರೆದಿದೆ...*

### ಕೋಷ್ಟಕ ೫.೧೭: ಮುಂದುವರಿದಿದೆ

| ಕ್ರ.ಸಂ. | ವಿದ್ಯುತ್ ವಿತರಣಾ ಸ್ಥಳ | ವೋಲ್ಟೇಜ್ ಪ್ರಮಾಣ (ಕೆ.ವಿ) | ಟ್ರಾನ್ಸ್‌ಫಾಮರ್‌ಗಳ ಸಂಖ್ಯೆ | ಟ್ರಾನ್ಸಫಾರರ್ಮರ್ ಸಾಮರ್ಥ್ಯ (ಎಂ.ವಿ.ಎ) | ಒಟ್ಟು ಸಾಮರ್ಥ್ಯ (ಎಂ.ವಿ.ಎ) |
|---|---|---|---|---|---|
| ೧೪. | ಗುಂಡ್ಲುಪೇಟೆ | ೬೬/೧೧ | ೨ | ೨ x ೧೨.೫ | ೨೫.೦ |
| ೧೫. | ಬೊಮ್ಮಲಾಪುರ | ೬೬/೧೧ | ೨ | ೧ x ೬.೩<br>೧ x ೮ | ೧೪.೩ |
| ೧೬. | ಹಂಗಳ | ೬೬/೧೧ | ೨ | ೨ x ೮ | ೧೬ |
| ೧೭. | ಬೇಗೂರು | ೬೬/೧೧ | ೨ | ~~೧ x ೧೨.೫~~<br>೧ x ೬.೩ | ೧೪.೩ |
| ೧೮. | ಪುಣ್ಯಹುಂಡಿ | ೬೬/೧೧ | ೨ | ೨ x ೮ | ೧೬.೦ |
| ೧೯. | ಹರವೆ | ೬೬/೧೧ | ೨ | ೨ x ೧೨.೫ | ೨೫.೦ |
| ೨೦. | ಚಂದಕವಾಡಿ | ೩೩/೧೧ | ೨ | ೨ x ೫ | ೧೦ |
| ೨೧. | ತೆರಕಣಾಂಬಿ | ೩೩/೧೧ | ೨ | ೨ x ೧೨.೫ | ೨೫.೦ |

*ಆಧಾರ: ಚೆಸ್‌ಕಾಂ, ಚಾಮರಾಜನಗರ.*

### ಕೋಷ್ಟಕ ೫.೧೮: ಜಿಲ್ಲೆಯಲ್ಲಿ ೩೧-೩-೨೦೧೨ರಲ್ಲಿದ್ದ ವಿಭಾಗವಾರು ಹಾಗೂ ವರ್ಗವಾರು ಅನುಭೋಗಿಗಳು ಮತ್ತು ವಿದ್ಯುತ್‌ಬಳಕೆಯ ವಿವರ

| ವರ್ಗವಾರು ವಿವರ | ವಿಭಾಗವಾರು ಅನುಭೋಗಿಗಳ ಸಂಖ್ಯೆ | | | ವಿಭಾಗವಾರು ವಿದ್ಯುತ್ ಬಳಕೆ (ಕಿ.ವ್ಯಾ) | | |
|---|---|---|---|---|---|---|
| | ಚಾ.ರಾ,ನಗರ | ಕೊಳ್ಳೇಗಾಲ | ಒಟ್ಟು | ಚಾ.ರಾ.ನಗರ | ಕೊಳ್ಳೇಗಾಲ | ಒಟ್ಟು |
| ಗೃಹ ಬಳಕೆ ಮತ್ತು ಸರ್ವವಿದ್ಯುತ್ ಗೃಹಗಳು | ೮೩೭೦೨ | ೬೬೨೬೫ | ೧೪೯೯೬೭ | ೨೧೨೬೬೪೫ | ೨೩೬೮೫೭೪೧ | ೨೫೮೧೨೩೮೬ |
| ವಾಣಿಜ್ಯ ವಿದ್ಯುತ್ | ೮೩೨೦೬ | ೭೦೯೦ | ೯೦೨೯೬ | ೬೫೨೬೬೫ | ೬೯೦೬೮೦೮ | ೭೫೫೯೪೭೩ |
| ಕುಡಿಯುವ ನೀರು | ೧೪೮೬ | ೮೯೬ | ೨೩೮೫ | ೯೧೦೨೮೩ | ೭೬೬೩೫೩೩ | ೮೫೭೩೮೧೬ |
| ನೀರಾವರಿ ಪಂಪ್‌ಸೆಟ್ಟುಗಳು | ೨೯೬೯೮ | ೧೭೫೦೦ | ೪೭೧೯೮ | ೨೮೨೯೬೬೮೭ | ೧೮೨೬೬೪೦೫೪ | ೨೧೦೯೬೦೭೪೧ |
| ಬೀದಿದೀಪಗಳು | ೧೦೨೬ | ೭೮೧ | ೧೮೦೭ | ೨೪೬೯೧೧ | ೨೫೪೬೫೭೨ | ೨೭೯೩೪೮೩ |
| ಹೆಚ್.ಟಿ. ಸ್ಥಾವರಗಳು | ೩೭ | ೨೧ | ೫೮ | ೮೬೯೯೯೬ | ೩೧೭೮೩೩೪ | ೪೦೪೮೩೩೦ |
| ಭಾಗ್ಯಜ್ಯೋತಿ | ೪೭೧೭೩ | ೩೩೯೧ | ೮೦೩೬೪ | ೬೩೬೬೦೪ | ೫೯೦೩೩೬೪ | ೬೫೩೯೯೬೮ |
| ಒಟ್ಟು (ಬೀದಿ ದೀಪ ಹೊರತುಪಡಿಸಿ) | ೧೭೦೪೨೨ | ೧೨೬೫೭೫ | ೨೯೬೯೯೭ | ೩೩೪೯೨೮೮೦ | ೨೩೩೫೯೭೯೦೫ | ೨೬೭೦೯೦೭೮೫ |

*ಸೂಚನೆ: ಪ್ರತಿಶತ ಸಂಖ್ಯೆ ಹಾಗೂ ಪ್ರತಿಶತ ಬಳಕೆ ವಿವರಗಳಲ್ಲಿ ಬೀದಿದೀಪ ಬಿಟ್ಟು ಕ್ರೋಢೀಕರಿಸಲಾಗಿದೆ.*
*ಆಧಾರ: ಚೆಸ್‌ಕಾಂ, ಚಾಮರಾಜನಗರ*

### ಕೋಷ್ಟಕ ೫.೧೯: ಜಿಲ್ಲೆಯಲ್ಲಿ ೩೧-೩-೨೦೧೨ ರಲ್ಲಿದ್ದ ತಾಲೂಕುವಾರು ವಾಸಸ್ಥರಿದ್ದ ಗ್ರಾಮಗಳು ಮತ್ತು ಉಪಗ್ರಾಮಗಳು, ವಿದ್ಯುತ್ ಸೌಲಭ್ಯ ಪಡೆದಿರುವ ಗ್ರಾಮಗಳು ಮತ್ತು ಉಪಗ್ರಾಮಗಳು ಹಾಗೂ ವಿದ್ಯುತ್‌ಸೌಲಭ್ಯ ಪಡೆದಿರುವ ಪಂಪ್‌ಸೆಟ್ಟುಗಳ ವಿವರ.

| ತಾಲೂಕು | ಗ್ರಾಮಗಳು ಮತ್ತು ಉಪಗ್ರಾಮಗಳು | ವಿದ್ಯುತ್ ಸೌಲಭ್ಯ ಪಡೆದಿರುವ ಗ್ರಾಮಗಳು ಮತ್ತು ಉಪಗ್ರಾಮಗಳು | | ವಿದ್ಯುತ್ ಸೌಲಭ್ಯ ಪಡೆದಿರುವ ನೀರಾವರಿ ಪಂಪ್ ಸೆಟ್ಟುಗಳು |
|---|---|---|---|---|
| | | ಗ್ರಾಮಗಳು | ಉಪಗ್ರಾಮಗಳು | |
| ಕೊಳ್ಳೇಗಾಲ | ೮೩ | ೫೭೮ | ೮೩ | ೧೪೮೯೫ |
| ಯಳಂದೂರು | ೨೮ | ೫೬ | ೨೮ | ೨೬೦೫ |
| ಚಾಮರಾಜನಗರ | ೧೬೯ | ೬೦ | ೧೬೯ | ೧೨೩೪೭ |
| ಗುಂಡ್ಲುಪೇಟೆ | ೧೪೦ | ೫೧ | ೧೩೨ | ೧೨೩೫೧ |

*ಆಧಾರ: ಚೆಸ್‌ಕಾಂ, ಚಾಮರಾಜನಗರ.*

**ಕೋಷ್ಟಕ ೫.೨೦: ಜಿಲ್ಲೆಯಲ್ಲಿ ೨೦೧೧–೧೨ರಲ್ಲಿದ್ದ ತಾಲೂಕುವಾರು ವಿದ್ಯುತ್ ಬೇಡಿಕೆ ಮತ್ತು ವಿದ್ಯುತ್ ನೀಡಿಕೆ.**
**(ಮೆ. ಯು. ಗಳಲ್ಲಿ)**

| ತಾಲೂಕು | ವಿದ್ಯುತ್ ಬೇಡಿಕೆ | ವಿದ್ಯುತ್ ನೀಡಿಕೆ | ಕೊರತೆಯಿರುವ ವಿದ್ಯುತ್ |
|---|---|---|---|
| ಕೊಳ್ಳೇಗಾಲ | ೩೪೧.೭೫ | ೨೬೨.೮೫ | ೭೮.೯ |
| ಯಳಂದೂರು | ೪೬.೩೭ | ೩೫.೬೭ | ೧೦.೭ |
| ಚಾಮರಾಜನಗರ | ೩೯೮.೫ | ೩೦೨.೫ | ೯೬ |
| ಗುಂಡ್ಲುಪೇಟೆ | ೨೩೦.೬೯ | ೧೫೬.೬೯ | ೭೪ |

*ಆಧಾರ: ಚೆಸ್‌ಕಾಂ, ಚಾಮರಾಜನಗರ.*

**ಕೋಷ್ಟಕ ೫.೨೧: ಚಾಮರಾಜನಗರ ಜಿಲ್ಲೆಯಲ್ಲಿ ೩೧–೩–೨೦೦೧೨ರಲ್ಲಿದ್ದ ವಿದ್ಯುತ್ ಮಾರ್ಗ ಮತ್ತು ವಿವಿಧ ಸಾಮರ್ಥ್ಯದ ಪರಿವರ್ತಕಗಳ ವಿವರ**

| ಕ್ರ.ಸಂ. | ತಾಲೂಕು | ಉಪವಿಭಾಗ | ಹೆಚ್.ಟಿ. ಲೈನ್ (ರೂಟ್ ಕಿ.ಮೀ) | ಎಲ್.ಟಿ. ಲೈನ್ (ರೂಟ್ ಕಿ.ಮೀ) | ಪರಿವರ್ತಕಗಳ ಸಂಖ್ಯೆ |
|---|---|---|---|---|---|
| ೧. | **ಚಾಮರಾಜನಗರ** | ಚಾಮರಾಜನಗರ | ೧೨೮೧.೮೯೭ | ೩೩೫೨.೨೦೬ | ೩೧೦೪ |
| ೨. | **ಗುಂಡ್ಲುಪೇಟೆ** | ಗುಂಡ್ಲುಪೇಟೆ | ೧೧೩೭.೬೯೭ | ೨೩೨೧.೩೧೪ | ೨೧೦೮ |
| ೩. | **ಕೊಳ್ಳೇಗಾಲ** | ಕೊಳ್ಳೇಗಾಲ | ೫೨೫.೯೧ | ೧೬೯೨.೦೧ | ೧೧೪೩ |
| ೪. | **ಕೊಳ್ಳೇಗಾಲ** | ಹನೂರು | ೭೮೨.೧೪ | ೩೪೨೫.೪ | ೧೨೨೩ |
| ೫. | **ಯಳಂದೂರು** | ಯಳಂದೂರು | ೨೩೭.೮೯ | ೫೮೪.೪೫ | ೪೪೩ |

*ಆಧಾರ: ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ, ನಿಯಮಿತ, ಚಾಮರಾಜನಗರ.*

**ಕೋಷ್ಟಕ ೫.೨೨: ಜಿಲ್ಲೆಯಲ್ಲಿ ೧೯೯೭–೯೮ ರಿಂದ ೨೦೦೫–೦೬ರ ವರೆಗೆ ಇದ್ದ ಪ್ರವರ್ಗವಾರು ವಿದ್ಯುತ್ ಬಳಕೆದಾರರ ವಿವರ**

| ಕ್ರ. ಸಂ | ಪ್ರವರ್ಗಗಳ ವಿವರ | ೧೯೯೭–೯೮ | ೧೯೯೮–೯೯ | ೧೯೯೯–೨೦೦೦ | ೨೦೦೦–೦೧ | ೨೦೦೧–೦೨ | ೨೦೦೨–೦೩ | ೨೦೦೩–೦೪ | ೨೦೦೪–೦೫ | ೨೦೦೫–೦೬ | ೨೦೦೯–೧೦ |
|---|---|---|---|---|---|---|---|---|---|---|---|
| ೧. | ಗೃಹಬಳಕೆ | ೧,೦೮,೭೭೩ | ೧,೧೪,೬೭೫ | ೯೦,೭೪೫ | ೯೦,೭೫೩ | ೯೦,೬೪೬ | ೧,೩೨,೫೫೯ | ೧,೩೯,೭೮೪ | ೧,೩೯,೯೨೯ | ೧,೫೦,೦೭೯ | ೧,೩೯,೮೮೮ |
| ೨. | ಸರ್ವವಿದ್ಯುತ್ | ೬,೮೦೪ | ೬,೮೦೮ | ೫,೩೪೫ | ೫,೩೩೧ | ೫,೩೫೪ | ೫,೨೨೬ | ೫,೩೭೯ | ೫,೩೮೨ | ೫,೩೯೦ | – |
| ೩. | ವಾಣಿಜ್ಯ | ೧೧,೭೮೮ | ೧೨,೬೪೯ | ೧೦,೦೦೧ | ೯,೯೨೭ | ೯,೧೯೬ | ೧೦,೨೯೦ | ೧೦,೭೭೦ | ೧೦,೭೫೫ | ೧೧,೬೬೪ | ೧೩,೯೪೪ |
| ೪. | ಕೈಗಾರಿಕೆ | ೩,೮೪೫ | ೩,೮೯೯ | ೨,೯೭೯ | ೨,೯೯೨ | ೨,೩೧೨ | ೨,೧೯೨ | ೨,೨೬೪ | ೨,೨೨೬ | ೨,೧೭೧ | ೨,೫೩೭ |
| ೫. | ಕುಡಿಯುವ ನೀರು | ೧,೧೨೫ | ೧,೩೩೧ | ೧,೨೦೯ | ೧,೨೧೧ | ೧,೪೮೧ | ೧,೬೦೭ | ೧,೭೨೨ | ೧,೭೩೦ | ೧,೮೧೫ | – |

### ಕೋಷ್ಟಕ ೨.೨೨ ಮುಂದುವರೆದಿದೆ

| ಕ್ರ. ಸಂ | ಪ್ರವರ್ಗಗಳ ವಿವರ | ೧೯೯೭-೯೮ | ೧೯೯೮-೯೯ | ೧೯೯೯-೨೦೦೦ | ೨೦೦೦-೦೧ | ೨೦೦೧-೦೨ | ೨೦೦೨-೦೩ | ೨೦೦೩-೦೪ | ೨೦೦೪-೦೫ | ೨೦೦೫-೦೬ | ೨೦೦೯-೧೦ |
|---|---|---|---|---|---|---|---|---|---|---|---|
| ೬. | ನೀರಾವರಿ ಐ.ಪಿ.ಸೆಟ್ಟುಗಳು | ೩೨,೬೮೯ | ೩೬,೭೫೬ | ೩೩,೧೫೩ | ೩೩,೧೬೧ | ೩೭,೦೭೨ | ೪೦,೪೮೭ | ೩೯,೮೮೨ | ೪೦,೧೮೧ | ೪೦,೪೯೩ | ೪೪,೧೫೮ |
| ೭. | ಬೀದಿ ದೀಪ | ೧,೦೦೮ | ೧,೦೮೫ | ೮೫೧ | ೮೫೧ | ೮೮೭ | ೮೮೫ | ೯೫೪ | ೯೦೬ | ೧,೧೮೦ | ೧,೭೫೩ |
| ೮. | ಭಾಗ್ಯಜ್ಯೋತಿ/ ಕುಟೀರ ಜ್ಯೋತಿ | ೩೧,೧೪೫ | ೩೩,೩೨೫ | ೨೬,೬೪೭ | ೨೭,೨೩೦ | ೩೫,೫೩೯ | ೧೫,೩೨೦ | ೧೪,೧೫೪ | ೧೪,೦೭೩ | ೧೩,೯೮೪ | - |
| ೯. | ಹೆಚ್. ಟಿ | ೧೭ | ೧೫ | ೧೦ | ೧೦ | ೧೪ | ೨೦ | ೨೦ | ೨೦ | ೨೭ | - |

*ಟಿಪ್ಪಣಿ: ೧೯೯೭-೯೮ ಹಾಗೂ ೧೯೯೮-೯೯ರಲ್ಲಿ ತಿರಮಕೂಡಲು ನರಸೀಪುರ ಮತ್ತು ಬನ್ನೂರು ಉಪವಿಭಾಗಗಳು ಚಾಮರಾಜನಗರ ವಿಭಾಗಕ್ಕೆ ಸೇರಿದ್ದವು.*

*ಆಧಾರ: ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ, ಚಾಮರಾಜನಗರ.*

### ಕೋಷ್ಟಕ ೫.೨೩: ಜಿಲ್ಲೆಯಲ್ಲಿ ೩೧-೩-೨೦೧೧ ರಲ್ಲಿದ್ದ ತಾಲೂಕುವಾರು ವಿದ್ಯುತ್ ಬಳಕೆದಾರರ ವಿವರ.

(ಸಂಖ್ಯೆಗಳಲ್ಲಿ)

| ಕ್ರ.ಸಂ. | ತಾಲೂಕು | ಗೃಹಬಳಕೆ | ಕೈಗಾರಿಕಾ ಬಳಕೆ | ವಾಣಿಜ್ಯ ಬಳಕೆ | ನೀರಾವರಿ ಪಂಪ್ ಸೆಟ್ಟುಗಳು | ಬೀದಿದೀಪಗಳು |
|---|---|---|---|---|---|---|
| ೧. | ಚಾಮರಾಜನಗರ | ೪೮,೯೯೩ | ೭೪೦ | ೪,೯೮೨ | ೧೬,೫೫೦ | ೬೧೯ |
| ೨. | ಗುಂಡ್ಲುಪೇಟೆ | ೨೯,೧೮೧ | ೩೪೧ | ೨,೬೧೪ | ೧೧,೩೦೫ | ೩೬೧ |
| ೩. | ಕೊಳ್ಳೇಗಾಲ | ೫೫,೨೬೬ | ೧೩೨೦ | ೬೦೭೧ | ೧೪,೮೯೫ | ೫೭೩ |
| ೪. | ಯಳಂದೂರು | ೧೦,೯೯೯ | ೨೯೨ | ೧,೦೦೯ | ೨,೬೦೫ | ೨೦೮ |
| | **ಒಟ್ಟು** | **೧,೪೪,೧೩೯** | **೨,೬೯೩** | **೧೪,೬೮೬** | **೪೫,೩೫೫** | **೧,೭೬೧** |

*ಆಧಾರ: ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ, ಚಾಮರಾಜನಗರ.*

### ಕೋಷ್ಟಕ ೫.೨೪: ಜಿಲ್ಲೆಯಲ್ಲಿ ೩೧-೩-೨೦೧೧ರಲ್ಲಿದ್ದ ತಾಲೂಕುವಾರು ಪ್ರವರ್ಗವಾರು ವಿದ್ಯುಚ್ಛಕ್ತಿ ಬಳಕೆ

(ಲಕ್ಷ ಯೂನಿಟ್‌ಗಳಲ್ಲಿ)

| ಕ್ರ.ಸಂ. | ತಾಲೂಕು | ಗೃಹಬಳಕೆ | ಕೈಗಾರಿಕಾ ಬಳಕೆ | ವಾಣಿಜ್ಯ ಬಳಕೆ | ನೀರಾವರಿ ಐ.ಪಿ. ಸೆಟ್ಟುಗಳು | ಇತರೆ | ಒಟ್ಟು |
|---|---|---|---|---|---|---|---|
| ೧. | ಚಾಮರಾಜನಗರ | ೨೩೫.೧೧ | ೨೪.೬೮ | ೪೯.೬೮ | ೧೫೫೩.೩೮ | ೮೨.೪೪ | **೨೦೩೨.೩೮** |
| ೨. | ಗುಂಡ್ಲುಪೇಟೆ | ೧೧೬.೩೮ | ೮.೯೮ | ೩೦.೬೨ | ೧೩೧೩.೦೪ | ೪೮.೫೬ | **೧೫೩೩.೮೫** |
| ೩. | ಕೊಳ್ಳೇಗಾಲ | ೨೦೨.೯೩ | ೩೦.೯೪ | ೫೮.೫೮ | ೧,೬೨೧.೩೧ | ೧೯.೩೯ | **೧೯೩೩.೧೫** |
| ೪. | ಯಳಂದೂರು | ೩೩.೯೩ | ೫.೦೨ | ೧೦೪೮ | ೨೦೫.೩೩ | ೬.೦೬ | **೨೬೦.೮೨** |
| | **ಒಟ್ಟು** | **೫೮೮.೩೫** | **೬೯.೬೨** | **೧೪೯.೩೬** | **೪,೬೯೩.೦೬** | **೧೫೬.೪೫** | **೫,೭೬೨.೨೦** |

*ಆಧಾರ: ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ, ಚಾಮರಾಜನಗರ.*

## ಕೈಗಾರಿಕಾ ನೀತಿ

ಭಾರತ ಸರ್ಕಾರ ರೂಪಿಸಿದ ಉದಾರ ಆರ್ಥಿಕ ನೀತಿಯ ಪರಿಣಾಮವಾಗಿ ಖಾಸಗಿ ವಲಯದ ಕೈಗಾರಿಕಾ ಬೆಳವಣಿಗೆಗೆ ಪ್ರೋತ್ಸಾಹ ದೊರಕಿ ವಿದೇಶಿ ಬಂಡವಾಳ ಮತ್ತು ಅದರ ಹರಿವು ಹೆಚ್ಚಳಗೊಂಡು ಹೊಸ ಹೊಸ ಕೈಗಾರಿಕೆಗಳು ಹುಟ್ಟಿಕೊಂಡವು. ಕರ್ನಾಟಕ ರಾಜ್ಯದಲ್ಲಿ ಮೈಸೂರು ರಾಜಮನೆತನ ಹಾಗೂ ಟಿಪ್ಪುಸುಲ್ತಾನನ ಕಾಲದಿಂದಲೂ ಕೈಗಾರಿಕಾಭಿವೃದ್ಧಿಗಾಗಿ ದಿಟ್ಟ ಹೆಜ್ಜೆಯನ್ನು ಇಡುತ್ತಾ ಬಂದಿರುವುದರ ಪರಿಣಾಮವಾಗಿ ಕಳೆದ ನೂರು ವರ್ಷಗಳಿಂದ ಸಾರ್ವಜನಿಕ ವಲಯದ ಬೃಹತ್ ಕೈಗಾರಿಕೆಗಳು ಹಾಗೂ ಖಾಸಗಿ ವಲಯದ ಬೃಹತ್ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು ಸಣ್ಣ ಕೈಗಾರಿಕೆಗಳ ಸಂಯುಕ್ತ ಬಲದೊಂದಿಗೆ ಸದೃಢ ಮತ್ತು ಪ್ರಭಾವ ಪೂರ್ಣ ಕೈಗಾರಿಕೆಗಳಾಗಿ ಉಳಿದಿರುವುದಕ್ಕೆ ಸಾಕ್ಷಿಯಾಗಿವೆ. ಸ್ವಾತಂತ್ರ್ಯಾನಂತರ ರಾಜ್ಯ ಸರ್ಕಾರವು ದೇಶದಲ್ಲಿಯೇ ಮೊಟ್ಟ ಮೊದಲ ಬಾರಿಗೆ ೧೯೮೨–೮೩ರಲ್ಲಿ ರಾಜ್ಯಮಟ್ಟದ ಕೈಗಾರಿಕಾ ನೀತಿಯನ್ನು ಪ್ರಕಟಿಸಿ ಕೈಗಾರಿಕಾ ಬೆಳವಣಿಗೆಗೆ ಪ್ರೋತ್ಸಾಹ ದೊರಕುವಂತೆ ಮಾಡಿತು. ಆನಂತರ ೧೯೮೮, ೧೯೯೦, ೧೯೯೩, ೨೦೦೧ ಮತ್ತು ೨೦೦೯ರಲ್ಲಿ ಕಾಲಕಾಲಕ್ಕೆ ಕೈಗಾರಿಕಾ ನೀತಿಯನ್ನು ಪ್ರಕಟಿಸಿ ಕೈಗಾರಿಕಾ ಬೆಳವಣಿಗೆಗೆ ನೆರವನ್ನು ನೀಡುತ್ತಾ ಬಂದಿದೆ.

### ಕರ್ನಾಟಕ ಹೊಸ ಕೈಗಾರಿಕಾ ನೀತಿ ೨೦೦೯–೨೦೧೪

**ಪ್ರಸ್ತಾವನೆ:** ಕರ್ನಾಟಕ ರಾಜ್ಯವು ಕೈಗಾರಿಕಾಭಿವೃದ್ಧಿ ಹೊಂದಿದ ರಾಜ್ಯಗಳಲ್ಲಿ ಒಂದಾಗಿದೆ. ರಾಜ್ಯವು ಕೈಗಾರಿಕಾಭಿವೃದ್ಧಿಯಲ್ಲಿ ವಿಶಿಷ್ಟವಾದ ಮುಂಚೂಣಿ ಸ್ಥಾನದಲ್ಲಿರಲು ಅವಶ್ಯವಾದ ಎಲ್ಲ ಸಾಮರ್ಥ್ಯವನ್ನು ಹೊಂದಿದ್ದು ಕೈಗಾರಿಕೆ, ವಾಣಿಜ್ಯ ಮತ್ತು ಸೇವಾಕ್ಷೇತ್ರಗಳ ಅಭಿವೃದ್ಧಿಯನ್ನು ಸಾಧಿಸುವತ್ತ ಗಮನವನ್ನು ಹರಿಸಿದೆ.

ರಾಜ್ಯವು ಆರ್ಥಿಕ ಬೆಳವಣಿಗೆಯನ್ನು ಸಾಧಿಸಲು ಜಾಗತಿಕ ಮಟ್ಟದಲ್ಲಿ ಆಗಿರುವ ಆರ್ಥಿಕ ಹಿನ್ನೇಡೆಯು ಒಡ್ಡಿರುವ ಸವಾಲನ್ನು ಸೂಕ್ತವಾಗಿ ಪರಿಗಣಿಸುವ ಅಗತ್ಯವನ್ನು ರಾಜ್ಯ ಸರ್ಕಾರವು ಮನಗಂಡಿದೆ. ಪ್ರಸಕ್ತ ಸರ್ವಾಂಗೀಣ ಬೆಳವಣಿಗೆಯ ಗತಿಯನ್ನು ಕಾಯ್ದಿರಿಸಲು ಆರ್ಥಿಕ ಚಟುವಟಿಕೆಗಳ ಬೆಳವಣಿಗೆಗೆ ಸೂಕ್ತವಾದ ಕ್ರಮಗಳು ಅವಶ್ಯವಾಗಿದೆ. ಅಲ್ಲದೆ, ರಾಜ್ಯದ ಎಲ್ಲೆಡೆ ಲಭ್ಯವಿರುವ ನೈಸರ್ಗಿಕ ಸಂಪನ್ಮೂಲಗಳನ್ನು ನಾಡಿನ ಜನರ ಒಳಿತಿಗಾಗಿ ಸಮರ್ಪಕವಾಗಿ ಬಳಸಬೇಕಾಗಿದೆ.

ಲಭ್ಯವಿರುವ ಸಂಪನ್ಮೂಲಗಳ ಮೌಲ್ಯವರ್ಧನೆಯು ಸ್ಥಳೀಯ ಸಂಪತ್ತಿನ ಸಮರ್ಪಕ ಸದುಪಯೋಗದ ಉತ್ತಮ ವಿಧಾನ. ಅಲ್ಲದೆ ಇದು ಕೈಗಾರಿಕಾ ಮತ್ತು ಆರ್ಥಿಕ ಚಟುವಟಿಕೆಗಳು ರಾಜ್ಯಾದ್ಯಂತ ಸಮಾನವಾಗಿ ಪಸರಿಸಿ ಅಭಿವೃದ್ಧಿಯ ಗತಿಯನ್ನು, ಆದರಲ್ಲೂ, ವಿಶೇಷವಾಗಿ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ತೀವ್ರಗೊಳಿಸಲು ಅನುಕೂಲವಾಗಲಿದೆ. ಇದರಿಂದಾಗಿ ಅಭಿವೃದ್ಧಿಯಲ್ಲಿರುವ ಪ್ರಾದೇಶಿಕ ಅಸಮತೋಲನದ ಗಂಭೀರ ಸಮಸ್ಯೆಯನ್ನು ನಿವಾರಿಸಬಹುದಾಗಿದೆ.

ರಾಜ್ಯ ಸರ್ಕಾರವು ಸ್ಥಳೀಯ ಯುವಜನರಿಗೆ ಹೆಚ್ಚಿನ ಉದ್ಯೋಗಾವಕಾಶವನ್ನು ಸೃಷ್ಟಿಸಲು ಕೃಷಿ ಕ್ಷೇತ್ರದ ಇತಿಮಿತಿಯನ್ನು ಮನಗಂಡಿದೆ. ರಾಜ್ಯದ ಕೆಲಸಗಾರರಲ್ಲಿ ಶೇ.೫೬ ರಷ್ಟು ಜನರು ಜಿ ಎಸ್ ಡಿ ಪಿ ಯ ಶೇ.೧೯.೧೩ ರಷ್ಟು ಕೊಡುಗೆ ನೀಡುತ್ತಿದ್ದಾರೆ. ಉತ್ಪಾದನಾ ಕ್ಷೇತ್ರವು ಎಲ್ಲಾ ವರ್ಗಗಳ ಮತ್ತು ಮಟ್ಟದ ಉದ್ಯೋಗಾಕಾಂಕ್ಷಿಗಳಿಗೆ ಹೆಚಿನ ಉದ್ಯೋಗ ನೀಡುವ ಸಾಧ್ಯತೆ ಇರುವುದು ಸರ್ವ ವಿಧಿತ ವಿಚಾರ.

ಬಂಡವಾಳ ಹೂಡಿಕೆದಾರರನ್ನು ಉತ್ತೇಜಿಸಲು ಸೂಕ್ತ ಸನ್ನಿವೇಶ ಒದಗಿಸುವ ದೃಷ್ಟಿಯಿಂದ ಈಗಾಗಲೇ ಕರ್ನಾಟಕ ಇಂಡಸ್ಟ್ರೀಸ್ (ಫೆಸಿಲಿಟೇಶನ್) ಆಕ್ಟ್–೨೦೦೨ ಜಾರಿಗೆ ತರಲಾಗಿದೆ. ಸರಕಾರವು ತಳೆದಿರುವ ಪ್ರಗತಿಪರ ಮತ್ತು ಪುರೋಗಾಮಿ ಕಾರ್ಯನೀತಿಯ ಪರಿಣಾಮವಾಗಿ ಕರ್ನಾಟಕವು ದೇಶೀಯ ಹಾಗೂ ವಿದೇಶೀಯ ಬಂಡವಾಳ ಹೂಡಿಕೆದಾರರ ಪ್ರಥಮ ಅದ್ಯತಾ ತಾಣವಾಗಿದೆ.

ರಾಜ್ಯ ಸರ್ಕಾರವು ಕೈಗಾರಿಕಾ ನೀತಿ ೨೦೦೬–೧೧ನ್ನು ಪ್ರಕಟಿಸಿದ್ದು, ಈ ನೀತಿಯಲ್ಲಿ ಜಿ ಎಸ್ ಡಿ ಪಿ ಯ ಬೆಳವಣಿಗೆಯನ್ನು ಹೆಚ್ಚಿಸುವುದು, ಉತ್ಪಾದನಾ ಕೈಗಾರಿಕೆಗಳನ್ನು ಬಲಪಡಿಸುವುದು, ರಾಜ್ಯದ ರಫ್ತು ಪ್ರಮಾಣವನ್ನು ಹೆಚ್ಚಿಸುವುದು, ಹತ್ತು ಲಕ್ಷಕ್ಕೂ ಹೆಚ್ಚಿನ ಉದ್ಯೋಗಾವಕಾಶ ಕಲ್ಪಿಸುವುದು, ಪ್ರಾದೇಶಿಕ ಅಸಮತೋಲವನ್ನು ನಿವಾರಿಸುವ ಗುರಿಯನ್ನು ಇಟ್ಟುಕೊಂಡಿದ್ದು ಅಂತಿಮವಾಗಿ ರಾಜ್ಯದ ಸಮಗ್ರ ಸಾಮಾಜಿಕ–ಆರ್ಥಿಕ ಅಭಿವೃದ್ಧಿಯನ್ನು ಸಾಧಿಸುವ ಧ್ಯೇಯವನ್ನು ಇರಿಸಿಕೊಂಡಿದೆ.

ಏತನ್ಮಧ್ಯೆ ಕೇಂದ್ರ ಸರ್ಕರವು ಎಂಎಸ್ಎಂಇಡಿ ಕಾಯಿದೆ–೨೦೦೬ ಜಾರಿಗೊಳಿಸಿದ್ದು, ಈ ಕ್ಷೇತ್ರವು ಸ್ಪರ್ಧಾತ್ಮಕವಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುವಂತೆ ರಾಜ್ಯ ಸರ್ಕಾರಗಳು ಹೆಚ್ಚಿನ ಉತ್ತೇಜನವನ್ನು ನೀಡುವಂತೆ ಅಪೇಕ್ಷಿಸಲಾಗಿದೆ. ರಾಜ್ಯವನ್ನು ಹೆಚ್ಚು ಬಂಡವಾಳ ಹೋಡಿಕೆದಾರರ ಸ್ನೇಹಿಯನ್ನಾಗಿ ಮಾಡಲು ಸಮಗ್ರ ಕೈಗಾರಿಕೆ ಬೆಳವಣಿಗೆ, ಮಾನವ ಸಂಪನ್ಮೂಲ ಅಭಿವೃದ್ದಿ ಕಾರ್ಯಕ್ರಮಗಳು, ಕ್ಷೇತ್ರವಾರು ಕೈಗರಿಕಾ ವಲಯಗಳ ಅಬಿವೃದ್ಧಿ, ಡಾ.ಡಿ.ಎಂ.ನಂಜುಂಡಪ್ಪ ವರದಿ ಆಧಾರದಲ್ಲಿ ತಾಲೂಕುಗಳ ವರ್ಗೀಕರಣ ಆಕರ್ಷಕ ಉತ್ತೇಜನ ಮತ್ತು ರಿಯಾಯಿತಿಗಳು, ಹಾಲಿ ಕಾರ್ಯನಿರ್ವಹಿಸುತ್ತಿರುವ ಕೈಗಾರಿಕೆಗಳ ವಿಸ್ತರಣೆ, ಆಧುನೀಕರಣ, ವೈವಿದ್ಧೀಕರಣಕ್ಕೆ ಬೆಂಬಲ ಮೊದಲಾದ ಅಂಶಗಳು ಅಗತ್ಯವೆಂದು ಸರ್ಕಾರ ಮನಗಂಡಿದೆ.

ಪ್ರಸಕ್ತ ಜಾಗತಿಕ ಮಟ್ಟದಲ್ಲಾಗಿರುವ ಆರ್ಥಿಕ ಹಿನ್ನೆಡೆಯ ದುಷ್ಪರಿಣಾಮವನ್ನು ಎದುರಿಸಲು ಕೈಗಾರಿಕೆಗಳಿಗೆ ತಾತ್ಕಾಲಿಕ ನೆರವಿನ ಅಗತ್ಯವನ್ನು ಸರ್ಕಾರ ಮನಗಂಡಿದೆ. ಈ ಎಲ್ಲಾ ಅಂಶಗಳನ್ನು ಗಮನಿಸಿ ರಾಜ್ಯ ಸರ್ಕಾರವು ಹೊಸ ಕೈಗಾರಿಕಾ ನೀತಿಯನ್ನು ಎಲ್ಲಾ ಬಂಡವಾಳ ಹೂಡಿಕೆದಾರರಿಗೆ ಅನುಕೂಲ ಮಾಡಿಕೊಡುವ ಉದ್ಧೇಶದಿಂದ ರೂಪಿಸಲು ಪ್ರಸ್ತಾಪಿಸಿದೆ.

ಪ್ರಸ್ತುತ ಕೈಗಾರಿಕಾ ನೀತಿಯು ಉದ್ಯೋಗಗಳ ಸೃಷ್ಟಿ, ಹಿಂದುಳಿದ ಪ್ರದೇಶಗಳ ಅಭಿವೃದ್ಧಿ, ಹಾಗೂ ಸ್ಥಳೀಯ ಸಂಪನ್ಮೂಲಗಳ ಮೌಲ್ಯ ವರ್ಧನೆಗೆ ಮಾರ್ಗದರ್ಶಿ ಸೂತ್ರಗಳನ್ನು ಗಮನದಲ್ಲಿಟ್ಟುಕೊಂಡು ರಚಿತವಾಗಿದೆ.

**ದೃಷ್ಠಿ ಕೋನ:** ಮಾನವ ಮತ್ತು ನೈಸರ್ಗಿಕ ಸಂಪನ್ಮೂಲಗಳನ್ನು ವ್ಯವಸ್ಥಾತ್ಮಕವಾಗಿ, ವೈಜ್ಞಾನಿಕವಾಗಿ ಮತ್ತು ಸುಸ್ಥಿರ ರೀತಿಯಲ್ಲಿ ಅಬಿವೃದ್ಧಿಪಡಿಸುವ ಮೂಲಕ ಭವ್ಯ ಕರ್ನಾಟಕವನ್ನು ನಿರ್ಮಿಸುವುದು.

**ಧ್ಯೆಯ:** ೧) ಕೈಗಾರಿಕೆಯ ಬಲಿಷ್ಠ ಬೆಳವಣಿಗೆಗೆ ಬೇಕಾದ ಅನುಕೂಲಕರ ಸನ್ನಿವೇಶ ಕಲ್ಪಿಸುವುದು, ೨) ರಾಜ್ಯದಲ್ಲಿ ಕೈಗಾರಿಕೆಯ ಸಮಗ್ರ ಅಭಿವೃದ್ಧಿ, ೩)೨೦೧೪ ರ ಒಳಗಾಗಿ ಹತ್ತು ಲಕ್ಷ ಉದ್ಯೋಗಗಳ ಹೆಚ್ಚುವರಿ ಸೃಷ್ಠಿ ೪) ರಾಜ್ಯದ ಒಟ್ಟು ಜಿಡಿಪಿಯಲ್ಲಿ ಉತ್ಪಾದನಾ ಕ್ಷೇತ್ರದ ಪಾಲನ್ನು ಶೇ.೨೦ರಷ್ಟು ಹೆಚ್ಚಿಸುವುದು.

**ಕಾರ್ಯತಂತ್ರಗಳು:**

೧ ತಾಲೂಕುಗಳನ್ನು ಅವುಗಳ ಹಿಂದುಳಿಕೆ ಸ್ಥಿತಿ ಮತ್ತು ಡಾ.ಡಿ.ಎಂ.ನಂಜುಂಡಪ್ಪ ಸಮಿತಿಯ ಶಿಫಾರಸಿನ ಆಧಾರದ ಮೇಲೆ ನಾಲ್ಕು ವಲಯಗಳನ್ನಾಗಿ ವರ್ಗೀಕರಿಸುವುದು.

೨ ಖಾಸಗಿ ಮತ್ತು ಉದ್ಯೋಗ ವಲಯಗಳ ಸಹಭಾಗಿತ್ವದಲ್ಲಿ ಅಂತಾರಾಷ್ಟ್ರೀಯ ಮಟ್ಟದ ಮೂಲಭೂತ ಸೌಕರ್ಯಗಳನ್ನು ಒಡಗಿಸಲು ಒತ್ತಾಸೆಯನ್ನೀಯುವುದು.

೩ ರಾಜ್ಯದಾದ್ಯಂತ ಸುವರ್ಣ ಕರ್ನಾಟಕ ಅಭಿವೃದ್ಧಿ ಕಾರಿಡಾರ್ (ಎಸ್‌ಕೆಡಿಸಿಪಿ) ಕಾರ್ಯಕ್ರಮವನ್ನು ಕಾರ್ಯಗತಗೊಳಿಸುವುದು. ಈ ಕಾರಿಡಾರ್‌ನಲ್ಲಿ ಅವಕಾಶವುಳ್ಳ ಕೈಗಾರಿಕೆಗಳನ್ನು ಅಭಿವೃದ್ಧಿ ಪಡಿಸಲಾಗುವುದು.

೪ ಎಸ್.ಕೆ.ಡಿ.ಸಿ.ಪಿ. ಅಡಿಯಲ್ಲಿ ನಾಲ್ಕು ಅಷ್ಟ ಪಥ ಕೈಗಾರಿಕಾ ಕಾರಿಡಾರ್‌ಗಳನ್ನು ಅಭಿವೃದ್ಧಿಗೊಳಿಸುವುದು.

೫ ವಿವಿಧ ವಿಶೇಷ ಕೈಗರಿಕಾ ವಲಯಗಳನ್ನು ಅಭಿವೃದ್ಧಿ ಪಡಿಸಿ, ಸ್ಥಳೀಯ ಮಾನವ ಮತ್ತು ನೈಸರ್ಗಿಕ ಸಂಪನ್ಮೂಲಗಳ ಯಥೇಚ್ಛ ಬಳಕೆಯಿಂದ ನಗರದತ್ತ ವಲಸೆಯನ್ನು ಕಡಿಮೆಗೊಳಿಸುವುದು.

೬ ಸಮಗ್ರ ಬೆಳವಣಿಗೆಗಾಗಿ ಭೂಸ್ವಾಧೀನ ಪ್ರಕ್ರಿಯೆಯನ್ನು ಸರಳೀಕರಿಸುವುದು.

೭ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ರೈತರ ಮತ್ತು ಹೂಡಿಕೆದಾರರ ಆರ್ಥಿಕ ಮತ್ತು ಸಾಮಾಜಿಕ ಹಿತವನ್ನು ಕಾಪಾಡುವುದು.

೮ ಜಾಗತಿಕ ಪೈಪೋಟಿಯನ್ನು ಎದುರಿಸಲು ಸಾಧ್ಯವಾಗುವಂತೆ ಅತಿಸಣ್ಣ, ಸಣ್ಣ ಮತ್ತು ಮಧ್ಯಮ (ಎಂಎಸ್‌ಎಂ) ಪ್ರಮಾಣದ ಉದ್ಯಮಗಳಿಗೆ ಅದ್ಯತಾ ಸವಲತ್ತುಗಳು.

೯ ಹಿಂದುಳಿದ ಪ್ರದೇಶಗಳಿಗೆ ಕೈಗಾರಿಕೆಗಳನ್ನಾಕರ್ಷಿಸಲು ಮತ್ತು ಎಂ.ಎಸ್.ಎಂ. ಪ್ರಮಾಣದ ಕೈಗಾರಿಕೆಗಳಿಗೆ ಅನುಕೂಲ ಮಾಡಿಕೊಡಲು ಸೃಷ್ಟಿಸುವ ಉದ್ಯೋಗಾವಕಾಶ ಮತ್ತು ಕಾರ್ಯಾಚರಣೆ ಪ್ರಗತಿ ಆಧಾರದ ಆಕರ್ಷಕ ಉತ್ತೇಜನ ಹಾಗೂ ರಿಯಾಯತಿಗಳನ್ನು ಒದಗಿಸಲಾಗುವುದು.

೧೦ ಆಕರ್ಷಕ ಉತ್ತೇಜನ ಮತ್ತು ರಿಯಾಯತಿಗಳ ಮೂಲಕ ಎಂ.ಎಸ್.ಎಂ ಪ್ರಮಾಣದ ಕೈಗಾರಿಕೆಗಳಿಗೆ ಒತ್ತಾಸೆ.

೧೧ ರಾಜ್ಯದ ಆರ್ಥಿಕಾಭಿವೃದ್ಧಿಗೆ ಸಾಧಕವಾದ ಹಾಗೂ ಬೇರೆ ರಾಜ್ಯಗಳಿಂದ ಹೆಚ್ಚು ಆಕರ್ಷಕವಾದ ಉತ್ತೇಜಕ ಮತ್ತು ರಿಯಾಯತಿಗಳನ್ನು ನೀಡುವುದು.

೧೨ ಸಮಾಜದಲ್ಲಿ ಕಡೆಗಣಿಸಲ್ಪಟ್ಟ ವರ್ಗಗಳ ಉದ್ಯಮಿಗಳು ಮುಖ್ಯವಾಹಿನಿಯ ಉದ್ಯಮಿಗಳೊಡನೆ ಸೇರಿ ಬೆಳವಣಿಗೆ ಸಾಧಿಸಲು ಅನುಕೂಲವಾದ ಹೆಚ್ಚುವರಿ ಉತ್ತೇಜನಗಳು

೧೩ ಯುವಕರ, ಅದರಲ್ಲೂ ಮಹಿಳೆಯರ ಉದ್ಯೋಗ ಸಾಮರ್ಥ್ಯವನ್ನು ಹೆಚ್ಚಿಸಲು ಮತ್ತು ಕೈಗಾರಿಕೆಗಳಿಗೆ ನೇಮಕಮಾಡಲು ಯೋಗ್ಯವಾದ ಮಾನವ ಸಂಪನ್ಮೂಲವನ್ನು ಸಿದ್ಧಗೊಳಿಸುವುದು.

೧೪ ಸ್ಥಳೀಯರಲ್ಲಿ, ವಿಶೇಷತಃ ಯುವತಿಯರಲ್ಲಿ ಉದ್ಯಮಶೀಲತಾ ಗುಣಗಳನ್ನು ಒಡಮೂಡಿಸಿ, ಅವರು ಸ್ವಯಂ ಉದ್ಯೋಗವನ್ನು ಕೈಗೊಳ್ಳುವಂತೆ ಬೆಂಬಲ ನೆರವನ್ನು ನೀಡುವುದು.

೧೫ ಕಾರ್ಯಸುಸೂತ್ರಗೊಳಿಸುವ ಯಾಂತ್ರಿಕ ವಿಧಾನದಿಂದ ಹೂಡಿಕೆದಾರರು ಮತ್ತು ಖಾಸಗಿ ಕ್ಷೇತ್ರದ ಉದ್ಯಮಿಗಳು ತಮ್ಮ ಚಟುವಟಿಕೆಯನ್ನು ಸುಲಭವಾಗಿ, ಕಡಿಮೆ ವ್ಯವಹಾರಿಕ ವೆಚ್ಚದಿಂದ ಯಶಪ್ರದವಾಗಿ ನಡೆಸಲಾಗುವ ಸನ್ನವೇಶ ಸೃಷ್ಟಿಸುವುದು.

೧೬ 'ಗೋ ಗ್ರೀನ್' ಕಾರ್ಯತಂತ್ರದಿಂದ ಔದ್ಯಮಿಕ ಯೋಜನೆಗಳು ಪರಿಸರ ಸಂರಕ್ಷಣೆ, ನೀರು ಮತ್ತು ಇಂಧನದ ಉಳಿತಾಯ ಕ್ರಮಗಳನ್ನು ಅನುಸರಿಸುವಂತೆ ಸೂಕ್ತ ವ್ಯವಸ್ಥೆ ಕಲ್ಪಿಸುವುದು.

## ಕೈಗಾರಿಕಾ ಪ್ರದೇಶ/ವಸಾಹತುಗಳ ನಿರ್ವಹಣೆ:

೧. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ಯು ತಾನು ನಿರ್ಮಿಸಿದ ಕೈಗಾರಿಕಾ ಪ್ರದೇಶದಲ್ಲಿ ಅವಶ್ಯಕ ಮೂಲಭೂತ ಸೌಕರ್ಯಗಳನ್ನು ನಿರ್ಮಿಸಿ ಅದರ ಮೇಲುಸ್ತುವಾರಿಯನ್ನು ಸ್ಥಳೀಯ ಆಡಳಿತ ಸಂಸ್ಥೆ ಅಥವಾ ಕೈಗಾರಿಕಾ ಸಂಘಗಳಿಗೆ ವಹಿಸಿಕೊಡುವುದು. ಈ ರೀತಿಯ ವ್ಯವಸ್ಥೆ ಅಸಾಧ್ಯವಾದಾಗ ತಾನೇ ಮೇಲುಸ್ತುವಾರಿಯ ಹೊಣೆ ವಹಿಸುವುದು. ಈ ನಿಟ್ಟಿನಲ್ಲಿ ಸಮರ್ಪಕ ನೀತಿಯನ್ನು ರೂಪಿಸಿ, ಇದರ ಕಾರ್ಯಾಚರಣೆಗಾಗಿ ಕೆ.ಐ.ಎ.ಡಿ.ಬಿ ಮತ್ತು ಮೇಲುಸ್ತುವಾರಿ ವಹಿಸುವ ಸಂಸ್ಥೆಗಳ ಜತೆ ಪರಸ್ಪರ ತಿಳುವಳಿಕೆಯ ಮುಚ್ಚಳಿಕೆ ಮಾಡಿಕೊಳ್ಳಲಾಗುವುದು.

೨. ಉದ್ಯಮಗಳು ಕೈಗಾರಿಕಾಪ್ರದೇಶದ ನಿರ್ವಹಣೆಯನ್ನು ಸ್ವತಃ ನಿಭಾಯಿಸಲು ಸಾಧ್ಯವಾಗುವಂತೆ ಪ್ರಮುಖ ಕೈಗಾರಿಕಾ ಪ್ರದೇಶ/ವಸಾಹತುಗಳಿಗೆ ಸಂಬಂಧಿಸಿದಂತೆ 'ಕೈಗಾರಿಕಾ ಟೌನ್‌ಷಿಪ್ ಪ್ರಾಧಿಕಾರ ಸ್ಥಾಪನೆಯ ಪ್ರಕ್ರಿಯೆಯನ್ನು ತ್ವರಿತಗೊಳಿಸಲಾಗುವುದು. ಈ ದಿಸೆಯಲ್ಲಿ ಎದುರಾಗುವ ಅಡೆತಡೆಗಳನ್ನು ಸಂಬಂಧಪಟ್ಟ ಇಲಾಖೆಗಳೊಡನೆ ಸಮಾಲೋಚಿಸಿ ನಿವಾರಿಸಲಾಗುವುದು.

## ವಿಶೇಷ ಆರ್ಥಿಕ ವಲಯಗಳ ಅಭಿವೃದ್ಧಿ:

೧. ಕೈಗಾರಿಕೆ ಮತ್ತು ಆರ್ಥಿಕ ಬೆಳವಣಿಗೆಗೆ ವಿಶೇಷ ಆರ್ಥಿಕ ವಲಯಗಳ (ಎಸ್.ಇ.ಝೆಡ್) ಮಹತ್ವವನ್ನು ಮನಗಂಡ ಹಾಗೂ ರಫ್ತು ಹೆಚ್ಚಳಕ್ಕೆ ಬದ್ಧವಾಗಿರುವ ರಾಜ್ಯ ಸರಕಾರವು ಹಲವು ವಿಶೇಷ ಆರ್ಥಿಕ ವಲಯಗಳ ಅಭಿವೃದ್ಧಿ ಕಾರ್ಯವನ್ನು ಕೈಗೆತ್ತಿಕೊಂಡಿದೆ.

೨. ಎಸ್.ಇ.ಝೆಡ್ ಗಳಲ್ಲಿ ಪ್ರಾರಂಭಿಸಲ್ಪಡುವ ಪ್ರಸ್ತಾವನೆಗಳಿಗೆ ಏಕ ಗವಾಕ್ಷಿ ಅಂಗೀಕಾರ ನೀಡಿ ಕೇಂದ್ರ ಸರಕಾರದ ಅನುಮೋದನೆಗೆ ಶಿಫಾರಸು ಮಾಡುತ್ತದೆ. ಕೇಂದ್ರ ಸರಕಾರವು ಜಾರಿಗೊಳಿಸಿರುವ ಎಸ್.ಇ.ಝೆಡ್ ಕಾಯಿದೆ ೨೦೦೫ ಕ್ಕೆ ಅನುಗುಣವಾಗಿ ವಿವಿಧ ಪ್ರವರ್ತಕರಿಗೆ ಮತ್ತು ಅಲ್ಲಿ ಕಾರ್ಯಾಚರಣೆ ಮಾಡುತ್ತಿರುವ ಘಟಕಗಳಿಗೆ ಆರ್ಥಿಕ ಸೌಲಭ್ಯಗಳನ್ನು ನೀಡಲಾಗುವುದು.

೩. ರಾಜ್ಯದಲ್ಲಿ ವಿಶೇಷ ಆರ್ಥಿಕ ವಲಯಗಳ ಹಿತಕರ ಬೆಳವಣಿಗೆಗೆ ಬೇಕಾದ ಬೆಂಬಲವನ್ನು ನೀಡುವುದಕ್ಕಾಗಿ ಪ್ರತ್ಯೇಕವಾದ ವಿಶೇಷ ಆರ್ಥಿಕ ವಲಯ ನೀತಿಯನ್ನು ಘೋಷಿಸಲಾಗುವುದು.

## ಕೌಶಲ್ಯ ಅಭಿವೃದ್ಧಿ:

೧. ಕೈಗಾರಿಕಾ ಮತ್ತು ವಾಣಿಜ್ಯ ವಲಯಗಳ ಬಳಕೆಗೆ ಸೂಕ್ತವಾದ ಕೌಶಲ್ಯವುಳ್ಳ ಮಾನವ ಸಂಪನ್ಮೂಲವನ್ನು ಅಭಿವೃದ್ಧಿಗೊಳಿಸಲು ಒತ್ತಾಸೆ ನೀಡಲಾಗುವುದು. ಈ ಪ್ರಕ್ರಿಯೆಯಲ್ಲಿ ಸದ್ಯದ ಅಗತ್ಯವುಳ್ಳ ಕೌಶಲ್ಯ ನಿರ್ಮಾಣಕ್ಕಾಗಿ ಹಾಲಿ ಇರುವ ಕುಶಲತೆಯನ್ನು ಹೆಚ್ಚಿಸಲು ಮತ್ತು ನಿರುಪಯುಕ್ತವಾದ ಹಾಗೂ ಅಪ್ರಸ್ತುತವಾದ ಕೌಶಲ್ಯವನ್ನು ತ್ಯಜಿಸಲು ಗಮನ ನೀಡಲಾಗುವುದು.

೨. ಮಾರುಕಟ್ಟೆಯಲ್ಲಿ ಬೇಡಿಕೆಯಿರುವ ಕುಶಲತೆಯ ಅಭಿವೃದ್ಧಿಗಾಗಿ ಖಾಸಗಿ ವಲಯದಲ್ಲಿ ಬಂಡವಾಳ ಹೂಡಿಕೆಗೆ ಸರಕಾರವು ಉತ್ತೇಜಿಸುವುದು.

೩. ಮಹಿಳೆಯರಿಗೆ ಉದ್ಯೋಗಾವಕಾಶವನ್ನು ಹೆಚ್ಚಿಸಲು ಸೂಕ್ತ ಕೌಶಲ್ಯ ಅಭಿವೃದ್ಧಿ ಕ್ರಮಗಳಿಗೆ ಒತ್ತು ನೀಡಲಾಗುವುದು.

೪. ಉದ್ಯಮ–ಶಿಕ್ಷಣ ಸಂಸ್ಥೆಗಳ ನಡುವೆ ಸಮರ್ಪಕ ಸಂಪರ್ಕ ಕಲ್ಪಿಸಿ ಉದ್ಯಮದ ಅಗತ್ಯಕ್ಕನುಗುಣವಾಗಿ ಕೌಶಲ್ಯವನ್ನು ತರಬೇತಿ ಸಂಸ್ಥೆಗಳು ನೀಡುವಂತೆ ಉತ್ತೇಜಿಸಲಾಗುವುದು.

೫. ಉದ್ಯೋಗ ಮತ್ತು ತರಬೇತಿ ನಿರ್ದೇಶನಾಲಯವು ಕೌಶಲ್ಯಾಭಿವೃದ್ಧಿಗೆ ಸಂಬಂಧಿಸಿದ ಎಲ್ಲಾ ಚಟುವಟಿಕೆಗಳನ್ನು ನಿರ್ವಹಿಸಲಿದೆ. ಸರ್ಕಾರವು ರಚಿಸಿರುವ ಕೌಶಲ್ಯಾಭಿವೃದ್ಧಿ ಆಯೋಗವು ಹಾಗೂ ಹೊಸದಾಗಿ ಸ್ಥಾಪಿತವಾದ ಕರ್ನಾಟಕ ಕೌಶಲ್ಯಾಭಿವೃದ್ಧಿ ಆಯೋಗವು ಹಾಗೂ ಹೊಸದಾಗಿ ಸ್ಥಾಪಿತವಾದ ಕರ್ನಾಟಕ ಕೌಶಲ್ಯಾಭಿವೃದ್ಧಿ ಕೈಗೊಳ್ಳುವ ಎಲ್ಲ ಉತ್ತೇಜಕ ಕ್ರಮಗಳು ಅತ್ಯುತ್ತಮ ಫಲಿತಾಂಶ ನೀಡುವಂತೆ ಸಮನ್ವಯ ಗೊಳಿಸಲಾಗುವುದು.

## ಉದ್ಯಮಶೀಲತಾ ಅಭಿವೃದ್ಧಿ :

೧. ಸೂಕ್ತ ಬೆಂಬಲ ಮತ್ತು ಸಹಾಯಕ ಸೇವೆಗಳನ್ನೊದಗಿಸಿ ಸ್ಥಳೀಯ ಯುವಕರಲ್ಲಿ ಸ್ವಯಂ ಉದ್ಯೋಗವನ್ನು ಉತ್ತೇಜಿಸಲು ಒತ್ತು ನೀಡಲಾಗುವುದು. ಯುವಜನರಲ್ಲಿ, ಅದರಲ್ಲೂ ಮಹಿಳಾ ಉದ್ಯಮಿಗಳಿಗೆ ವಿಶೇಷ ಗಮನ ನೀಡುವುದರ ಮೂಲಕ ಉದ್ಯಮಶೀಲತಾ ಸ್ವಭಾವವನ್ನು ಒಡಮೂಡಿಸಲು ಸಕಲ ಪ್ರಯತ್ನ ಮಾಡಲಾಗುವುದು. ಸಮಾಜದಲ್ಲಿ ಕಡೆಗಣಿಸಲಾದ ವರ್ಗದ ಯುವಕರಿಗೆ ಹೆಚ್ಚಿನ ಪ್ರಚೋದನೆ ದೊರೆಯುವಂತೆ ಹೆಚ್ಚಿನ ಗಮನ ವಹಿಸಲಾಗುವುದು. ಈ ಚಟುವಟಿಕೆಗಳಲ್ಲಿ ಸಿಡಾಕ್ ನೇತೃತ್ವವನ್ನು ವಹಿಸಲಿದೆ.

೨. ಕೇಂದ್ರ ಸರಕಾರವು ಜಾರಿಗೆ ತಂದಿರುವ ರಾಜೀವ ಗಾಂಧಿ ಉದ್ಯಮಿ ಮಿತ್ರ ಯೋಜನೆಯನ್ನು ಬಳಸಿಕೊಂಡು ಸಮಾಲೋಚನೆ ಮತ್ತು ಬೆಂಬಲ ಸೇವೆ ನಿಡಿ ಮುನ್ನಡೆಸುವ ಸೇವಾಸೌಲಭ್ಯಗಳನ್ನು ಪ್ರಬಲಗೊಳಿಸಲಾಗುವುದು.

೩. ಭಾವಿ ಉದ್ಯಮಶೀಲರ ಪ್ರಚೋದನೆಗಾಗಿ ಜಿಲ್ಲಾ ಕೈಗಾರಿಕಾ ಕೇಂದ್ರಗಳಲ್ಲಿ ಮಾರ್ಗದರ್ಶಿ ಸೇವಾ ಸೌಲಭ್ಯಗಳನ್ನು ಹೆಚ್ಚಿಸಲಾಗುವುದು. ಈ ವಿಭಾಗವು ಉದ್ಯಮಿಗಳಿಗೆ ಪ್ರಾರಂಭಿಕ ಮತ್ತು ಕಾರ್ಯಾನುಷ್ಠಾನ ಹಂತಗಳಲ್ಲಿ ಅವಶ್ಯವಿರುವ ಎಲ್ಲ ಸಹಾಯವನ್ನು ಒದಗಿಸುತ್ತದೆ. ಪ್ರಾರಂಭಿಕ ಹಂತದಲ್ಲಿ ಕಾರ್ಯಾಚರಣೆ ಸುಸೂತ್ರವಾಗುವಂತೆ ಹಿತಚಿಂತಕನಂತೆ ಕಾರ್ಯನಿರ್ವಹಿಸಲಿದೆ.

೪. ಅತಿಸಣ್ಣ ಕೈಗಾರಿಕೆಗಳು ಬರಬರುತ್ತಾ ದೊಡ್ಡದಾಗಿ ಬೆಳೆದು ಬರುವಂತೆ ಬೇಕಾದ ಸಹಾಯವನ್ನು ಒದಗಿಸಲಾಗುವುದು. ಈ ಬೆಳವಣಿಗೆಯ ಹಂತದಲ್ಲಿ ಮಾರ್ಗದರ್ಶಿ ಕೋಶವು ನಿಯಮಿತ ಅನುಸರಣ ಮತ್ತು ಸಮಸ್ಯಾಪರಿಹಾರ ಕ್ರಮಗಳ ಮೂಲಕ ಒಡನಾಡಿ ಸೇವೆಯನ್ನು ಒದಗಿಸುವುದು. 'ಕರ್ನಾಟಕ ಕೈಗಾರಿಕಾ ದರ್ಶನ' ಕಾರ್ಯಕ್ರಮವನ್ನು ವರ್ಷಂಪ್ರತಿ ಏರ್ಪಡಿಸಿ ರಾಜ್ಯ/ಪರ ರಾಜ್ಯಗಳಲ್ಲಿರುವ ಯಶಸ್ವಿ ಉದ್ಯಮಗಳಿಗೆ ಕರೆದೊಯ್ದು ಅವುಗಳ ಅನುಭವದ ಪ್ರಯೋಜನವನ್ನು ನಮ್ಮ ಯುವ ಉದ್ಯಮಿಗಳು ಪಡೆಯುವಂತೆ ಮಾಡಲಾಗುವುದು.

೫. ಕೈಗಾರಿಕಾ ಮೇಳ / ವಸ್ತು ಪ್ರದರ್ಶನಗಳಲ್ಲಿ ಭಾಗವಹಿಸಿ, ತಮ್ಮ ಉತ್ಪನ್ನ ಮತ್ತು ಸೇವೆಗಳಿಗೆ ಗಿರಾಕಿಗಳನ್ನು ಗುರುತಿಸಿ ವ್ಯಾಪಾರ ಕುದುರಿಸುವದಲ್ಲದೆ, ಉಪಯುಕ್ತ ಜ್ಞಾನವನ್ನು ಗಳಿಸುವಂತೆ ಕೈಗಾರಿಕೆಗಳನ್ನು ಉತ್ತೇಜಿಸಲಾಗುವುದು.

## ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ಯಮಗಳಿಗೆ ಕೇಂದ್ರೀಕೃತ ಗಮನ

೧. ಸುವರ್ಣ ಕರ್ನಾಟಕ ಸಮಾರಂಭದ ಸಂದರ್ಭದಲ್ಲಿ ನಿಕಟ ಪೂರ್ವ ರಾಷ್ಟ್ರಪತಿಗಳಾದ ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ರವರು ಕರ್ನಾಟಕ ವಿಧಾನ ಸಬೆಗಳ ಸದಸ್ಯರನ್ನು ಉದ್ದೇಶಿಸಿ ಭಾಷಣಮಾಡುತ್ತಾ ಕರ್ನಾಟಕದ ಅಭ್ಯುದಯಕ್ಕೆ ಆಧಾರವಾದ ಹನ್ನೊಂದು ಅಂಶದ ಸೂತ್ರಗಳನ್ನು ಪ್ರತಿಪಾದಿಸಿದ್ದರು.

೨. ಈ ಹನ್ನೊಂದು ಸೂತ್ರಗಳಲ್ಲಿ ಜವಳಿ, ಜೈವಿಕ ಇಂಧನ, ಕೃಷಿಉತ್ಪನ್ನಗಳ ಸಂಸ್ಕರಣ, ಉದ್ಯಮಶೀಲತೆ ಕೈಗಾರಿಕಾ ಕ್ಷೇತ್ರಕ್ಕೆ ಸಂಬಂಧಿಸಿವೆ. ಪ್ರತ್ಯೇಕ ಕಾರ್ಯಪಡೆ ರಚಿಸುವ ಮೂಲಕ ಡಾ.ಎ ಪಿ ಜೆ ಅಬ್ದುಲ್ ಕಲಾಂ ರವರ ಧ್ಯೇಯೋದ್ದೇಶಗಳನ್ನು ಈಡೇರಿಸುವಂತೆ ಕಾರ್ಯಯೋಜನೆ ಕೈಗೊಳ್ಳಲಾಗುವುದು ಹಾಗೂ ಈ ನೀತಿಯ ಅವಧಿಯಲ್ಲಿ ಗಣನೀಯ ಫಲಿತಾಂಶ ಹೊಂದಲು ಪ್ರಯತ್ನಿಸಲಾಗುವುದು.

೩. ಸರಕಾರದ ಇಲಾಖೆಗಳು ಮತ್ತು ಸಾರ್ವಜನಿಕ ಉದ್ಯಮಗಳು ತಮ್ಮ ಅವಶ್ಯಕ ವಸ್ತುಗಳನ್ನು ಖರೀದಿಸುವಾಗ ರಾಜ್ಯದಲ್ಲಿರುವ ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಉತ್ಪಾದನಾ ಘಟಕಗಳು ಉತ್ಪಾದಿಸುವ ವಸ್ತುಗಳಿಗೆ ಶೇ.೧೫ರಷ್ಟು ಆದ್ಯತಾ ಖರೀದಿ ಬೆಲೆ ನೀಡಲು ಅನುಮತಿ ನೀಡಲಾಗುವುದು.

೪. ಹಿಂದುಳಿದ ಪ್ರದೇಶಗಳಲ್ಲಿರುವ ಕೈಗಾರಿಕೆಗಳು ಪೈಪೋಟಿಯಲ್ಲಿ ಮೇಲುಗೈ ಸಾಧಿಸಲು ಸಮರ್ಥವಾಗುವಂತೆ ಅವಶ್ಯಕ ಮತ್ತು ಆಕರ್ಷಕ ಉತ್ತೇಜನಗಳನ್ನು ಮತ್ತು ಸವಲತ್ತುಗಳನ್ನು ಒದಗಿಸಲಾಗುವುದು. ಗಡಿನಾಡು ಪ್ರದೇಶದಲ್ಲಿ ಕೈಗಾರಿಕೆಯ ತೀವ್ರ ಬೆಳವಣಿಗೆಗೆ ಒತ್ತಾಸೆ ನೀಡಲಾಗುವುದು. ಗಡಿಪ್ರದೇಶದ ತಾಲೂಕುಗಳಲ್ಲಿ ಹೆಚ್ಚಿನ ಮೂಲಭೂತ ಸೌಕರ್ಯ ಒದಗಿಸಿ ಆಕರ್ಷಕ ಹೆಚ್ಚುವರಿ ಉತ್ತೇಜನಗಳನ್ನು ನೀಡುವುದರ ಮೂಲಕ ನೆರೆರಾಜ್ಯದವರು ಇಲ್ಲಿ ಕೈಗಾರಿಕೆ ಸ್ಥಾಪಿಸುವ ಅವಕಾಶವನ್ನು ಹೆಚ್ಚಿಸಲಾಗುವುದು.

೫. ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ಎಂ.ಎಸ್.ಎಂ ಘಟಕಗಳ ಉತ್ಪನ್ನಗಳ ಅಭಿವೃದ್ಧಿ ಮತ್ತು ಮಾರಾಟಕ್ಕೆ ಅನುಕೂಲವಾಗುವಂತೆ ಪ್ರದರ್ಶನ ಕೇಂದ್ರಗಳನ್ನು ಸ್ಥಾಪಿಸಲಾಗುವುದು.

೬. ಸ್ಥಳೀಯ ಸಂಪನ್ಮೂಲಗಳ ಮತ್ತು ಕೌಶಲ್ಯಗಳ ಸದುಪಯೋಗಕ್ಕಾಗಿ ಸಮೂಹ ಕೈಗಾರಿಕೆಗಳನ್ನು ಉತ್ತೇಜಿಸಲಾಗುವುದು. ಪ್ರಸಕ್ತ ಸ್ಥಳದ ಸುತ್ತಮುತ್ತ ಲಭ್ಯವಿರುವ ಸಂಪನ್ಮೂಲಗಳ ಮತ್ತು ಸ್ಪರ್ಧಾತ್ಮಕ ಪ್ರಯೋಜನವುಳ್ಳ ಉದ್ಯಮಗಳ ಸಮಗ್ರ ಅಧ್ಯಯನ ಮತ್ತು ವಿಶ್ಲೇಷಣೆ ಮಾಡಲಾಗುವುದು. ಈ ರೀತಿಯಾಗಿ ಸೂಕ್ತ ಗುಂಪುಗಳನ್ನು ಗುರುತಿಸಿ, ಅವುಗಳಿಗೆ ಪೂರಕವಾದ ತಾಲೂಕು/ಜಿಲ್ಲೆ/ ಪ್ರದೇಶಗಳನ್ನು ಗುರುತಿಸಲಾಗುವುದು. ಹೀಗೆ ಗುರುತಿಸಿದ ಬಳಿಕ ಪ್ರತಿಯೊಂದು ಗುಂಪಿಗೂ/ಪ್ರದೇಶಕ್ಕೂ ಕಾರ್ಯಯೋಜನೆ ರೂಪಿಸಿ, ಪುರೋಗಾಮೀ ದೃಷ್ಟಿಯುಳ್ಳ ಸಮರ್ಪಕ ಕಾರ್ಯನೀತಿ, ರಿಯಾಯತಿ ಮತ್ತು ಪ್ರವರ್ತಕ ಕ್ರಮಗಳನ್ನು ಕೈಗೋಳ್ಳಲಾಗುವುದು. ಈ ಉದ್ದೇಶಕ್ಕಾಗಿ ಕೆ.ಸಿ.ಟಿ.ಯು ಸಂಸ್ಥೆಯನ್ನು ನಿಯೋಜಿತ ಸಂಸ್ಥೆಯಾಗಿ ಮಾಡಲಾಗುವುದು.

೭. ಸರಕಾರವು ಖಾದಿ ಮತ್ತು ಗ್ರಾಮೋದ್ಯೋಗ ಕ್ಷೇತ್ರದ ಮಹತ್ವವನ್ನು ಮನಗಂಡು ಈ ಕ್ಷೇತ್ರದ ಬೆಳವಣಿಗೆಗೆ ವಿಶೇಷ ಕಾರ್ಯಯೋಜನೆ ರೂಪಿಸಲಿದೆ.

೮. ಕಾರ್ಮಿಕರ ಉತ್ಪಾದಕತೆಯ ಇಳುವರಿ ಸುಧಾರಣೆ ಉತ್ತಮ ಉತ್ಪಾದನೆಗೆ ಮೂಲಾಧಾರವಾಗಿದ್ದು ಇದನ್ನು ಹೆಚ್ಚಿಸುವ ಕ್ರಮಗಳಿಗೆ ಹೆಚ್ಚಿನ ಒತ್ತಾಸೆ ನಿಡಲಾಗುವುದು. ವ್ಯಾವಹಾರಿಕ ವೆಚ್ಚವನ್ನು ಕಡಿತಗೊಳಿಸಲು ಅನುಕೂಲವಾಗುವಂತೆ ಕಾನೂನು ವಿಧಿವಿಧಾನಗಳನ್ನು ಸರಳಗೊಳಿಸಲಾಗುವುದು.

೯. ಕೆ.ಐ.ಎ.ಡಿ.ಬಿ.ಯು ಕೈಗಾರಿಕಾ ಪ್ರದೇಶ ಅಭಿವೃದ್ಧಿಗೊಳಿಸುವಾಗ ಕನಿಷ್ಠ ಶೇ.೨೦ರಷ್ಟು ಪ್ರದೇಶವನ್ನು ಎ.೦ಎಸ್.ಎಂ ಕೈಗಾರಿಕೆಗಳಿಗೆ ಮೀಸಲಿರಿಸಲಾಗುವುದು. ಈ ಮೀಸಲು ಪ್ರದೇಶವನ್ನು ಹಂಚಿಕೆ ಮಾಡುವಾಗ ಸ್ಥಳೀಯ ಉದ್ಯಮಿಗಳಿಗೆ ಸಮಾಜದ ಅಲಕ್ಷಿತ ವರ್ಗದ ಉದ್ಯಮಿಗಳಿಗೆ ಆದ್ಯತೆ ಮೇರೆಗೆ ನೀಡಲಾಗುವುದು. ಪಟ್ಟಣ ಪ್ರದೇಶಗಳಲ್ಲಿರುವ ಕೈಗಾರಿಕೆಗಳನ್ನು ನಗರದ ಹೊರ ಪ್ರದೇಶಕ್ಕೆ ಸ್ಥಳಾಂತರಿಸಲು ಪ್ರೋತ್ಸಾಹಿಸಲಾಗುವುದು.

೧೦. ಕ್ರೇಂದ್ರ ಸರಕಾರದ ಸಂಬಂಧಪಟ್ಟ ನೆರವಿನ ಯೋಜನೆಗಳಾದ, ಕ್ರೆಡಿಟ್ ಗ್ಯಾರಂಟಿ ಫಂಡ್ ಟ್ರಸ್ಟ್ ಸ್ಕೀಮ್, ಕ್ರೆಡಿಟ್ ಲಿಂಕಡ್ ಕ್ಯಾಪಿಟೆಲ್ ಸಬ್ಸಿಡಿ ಸ್ಕೀಮ್, ಎಂ.ಎಸ್.ಎಂ.ಇ ಗಳಿಗೆ ಸಮೂಹ ಅಭಿವೃದ್ಧಿ ಹಾಗೂ ವಿವಿಧ ಸಚಿವಾಲಯಗಳ ಹಲವಾರು ಯೋಜನೆಗಳನ್ನು ಉದ್ಯಮಿಗಳ ಪ್ರಯೋಜನಕ್ಕಾಗಿ ಬಳಸಿಕೊಳ್ಳಲಾಗುವುದು. ಈ ಯೋಜನೆಗಳ ಅತ್ಯಧಿಕ ಪ್ರಯೋಜನವನ್ನು ಉದ್ಯಮಿಗಳು ಪಡೆಯುವಂತೆ ಪೂರಕ ಕ್ರಮಗಳನ್ನು ರಾಜ್ಯ ಸರಕಾರವು ಕೈಗೊಳ್ಳುವುದು. ಈ ಯೋಜನೆಗಳ ಸಮರ್ಪಕ ಸಂಯೋಜನೆ ಮತ್ತು ಬಳಕೆಯ ಉಸ್ತುವಾರಿಗಾಗಿ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯಲ್ಲಿ ಪ್ರತ್ಯೇಕ ವಿಭಾಗವನ್ನು ತೆರೆಯಲಾಗುವುದು.

೧೧. ಉದ್ಯಮಿಗಳಿಗೆ ಅಥವಾ ಕೈಕಸುಬುದಾರರಿಗೆ ಸೇವೆ ಒದಗಿಸುವ ಸಂಘ ಸಂಸ್ಥೆಗಳ ಪಾತ್ರ ಮತ್ತು ಹೊಣೆಗಾರಿಕೆಗಳನ್ನು ಬದಲಾದ ಸನ್ನಿವೇಶಕ್ಕೆ ಅನುಗುಣವಾಗಿ ಮರು ನಿರೂಪಿಸಲಾಗುವುದು.

೧೨. ಜಾಗತಿಕ ಆರ್ಥಿಕ ಕ್ಷೇತ್ರದ ಹಿಂಜರಿತದ ಪರಿಣಾಮವಾಗಿ ಹಲವಾರು ಉದ್ಯಮಗಳು, ಅದರಲ್ಲೂ ಎಂ.ಎಸ್.ಎಂ ಕ್ಷೇತ್ರದ ಉದ್ಯಮಗಳು ಗಂಭೀರವಾದ ದುಷ್ಪರಿಣಾಮಗಳನ್ನು ಅನುಭವಿಸುತ್ತಿವೆ. ಪುನಾರಚನೆಯ ಮೂಲಕ ಕೆಲವು ಘಟಕಗಳು ಚೇತರಿಸಿ ಕೊಂಡಿವೆಯಾದರೂ ಹಲವಾರು ಇನ್ನೂ ಸಂಕಷ್ಟದಲ್ಲಿವೆ, ಇನ್ನು ಕೆಲವು ನಿರ್ನಾಮವಾಗಿವೆ. ಸೂಕ್ತ ಪರಿಹಾರ ಪ್ಯಾಕೇಜ್ ರೂಪಿಸಿ ಲಾಭದಾಯಕ ಉದ್ಯಮಗಳ ಪುನಶ್ಚೇತನ ಹಾಗೂ ಪುನಶ್ಚೇತನ ಸಾಧ್ಯವಿಲ್ಲದ ಘಟಕಗಳ ಸುಸೂತ್ರ ನಿರ್ಗಮನಕ್ಕಾಗಿ ಕ್ರಮಕೈಗೊಳ್ಳಲಾಗುವುದು. ಈ ಪ್ರಕಾರ ಪ್ರತ್ಯೇಕವಾದ ಯೋಜನೆಯೊಂದನ್ನು ಎಲ್ಲಾ ಭಾಗಿದಾರರ ಜೊತೆ ಚರ್ಚಿಸಿ ರೂಪಿಸಲಾಗುವುದು.

## ಉತ್ತೇಜಕಗಳು ಮತ್ತು ರಿಯಾಯಿತಿಗಳು

೧. ಜಾಗತೀಕರಣಗೊಂಡ ಆರ್ಥಿಕತೆಯಲ್ಲಿ–ಉದ್ಯಮಿಗಳು ಸಮರ್ಥವಾಗಿ ತಮ್ಮ ಪಾತ್ರವನ್ನು ನಿರ್ವಹಿಸುವಂತೆ ಆಕರ್ಷಕವಾದ ಉತ್ತೇಜನ ಮತ್ತು ರಿಯಾಯಿತಿಗಳನ್ನು ರೂಪಿಸಿ ಕಾರ್ಯಗತಗೊಳಿಸಲು ರಾಜ್ಯ ಸರಕಾರವು ಬದ್ದವಾಗಿದೆ. ಉದ್ಯೋಗಾವಕಾಶಗಳ ನಿರ್ಮಾಣ ಮತ್ತು ಉತ್ಪಾದನಾ ಆಧಾರಿತ ಉತ್ತೇಜನಗಳ ಮೂಲಕ ಅಪೇಕ್ಷಿತ ಫಲಿತಾಂಶವನ್ನು ಪಡೆಯಲು ಪ್ರಯತ್ನಿಸಲಾಗುವುದು.

೨. ಎಸ್.ಹೆಚ್.ಎಲ್.ಸಿ.ಸಿ.ಯ ಶಿಫಾರಸ್ಸಿನ ಮೇರೆಗೆ ಮೆಗಾ ಯೋಜನೆಗಳಿಗೆ ಅವುಗಳಿಂದ ರಾಜ್ಯಕ್ಕೆ ಲಭಿಸುವ ಅನುಕೂಲತೆ ಮತ್ತು ಅಂತಹ ಯೋಜನೆಗಳ ವಿಶೇಷತೆಯ ಆಧಾರದಲ್ಲಿ ಪ್ಯಾಕೇಜ್ ಪ್ರಕಾರ ಲಭ್ಯವಿರುವ ಉತ್ತೇಜನಕ್ಕೆ ಹೆಚ್ಚುವರಿಯಾಗಿ ವಿಶೇಷ ಉತ್ತೇಜನಗಳನ್ನು ನೀಡಲಾಗುವುದು.

೩. ಉತ್ತೇಜನ ಮತ್ತು ರಿಯಾಯಿತಿಗಳನ್ನು ಸಮರ್ಪಕ ರೀತಿಯಲ್ಲಿ ಅನುಷ್ಠಾನಗೊಳಿಸಲು ರಾಜ್ಯದ ತಾಲೂಕುಗಳನ್ನು ನಾಲ್ಕು ವಲಯಗಳನ್ನಾಗಿ ವರ್ಗೀಕರಿಸಲಾಗಿದ್ದು, ಜಿಲ್ಲೆಯ ಚಾಮರಾಜನಗರ ತಾ॥ ವಲಯ–೧ಕ್ಕೆ ಸೇರಿದ್ದು ಕೈಗಾರಿಕೆಯಲ್ಲಿ ಅತ್ಯಂತ ಹಿಂದುಳಿದ ತಾಲೂಕಾಗಿದೆ. ಹಾಗೆಯೇ, ಗುಂಡ್ಲುಪೇಟೆ ಹಾಗೂ ಕೊಳ್ಳೇಗಾಲ ತಾ॥ ಗಳು ವಲಯ–೨ಕ್ಕೆ ಸೇರಿದ್ದು, ಕೈಗಾರಿಕೆಯಲ್ಲಿ ಅತೀ ಹಿಂದುಳಿದ ತಾಲೂಕುಗಳಾಗಿವೆ. ಯಳಂದೂರು ತಾ॥ ವಲಯ–೩ಕ್ಕೆ ಸೇರಿದ್ದು, ಕೈಗಾರಿಕೆಯಲ್ಲಿ ಹಿಂದುಳಿದ ತಾಲೂಕಾಗಿದೆ.

# ಹೋಟೆಲ್ ಉದ್ಯಮ

ಚಾಮರಾಜನಗರ ಜಿಲ್ಲೆಯು ಬಿಳಿಗಿರಿರಂಗನಬೆಟ್ಟ, ಮಲೆಮಾದೇಶ್ವರ ಬೆಟ್ಟ, ಬಂಡೀಪುರ ಅಭಯಾರಣ್ಯ ಮೊದಲಾದ ಪ್ರೇಕ್ಷಣೀಯ ಸ್ಥಳಗಳನ್ನು ಹೊಂದಿರುವುದರ ಜೊತೆಗೆ ಐದು ಮಧ್ಯಮ ಪ್ರಮಾಣದ ಕೈಗಾರಿಕೆಗಳು ಮತ್ತು ಉತ್ತಮ ರೇಷ್ಮೆ ಮಾರುಕಟ್ಟೆಯನ್ನು ಹೊಂದಿರುವುದರಿಂದ ಪ್ರವಾಸಿಗಳು, ಉದ್ಯೋಗಾಕಾಂಕ್ಷಿಗಳು ಮತ್ತು ವ್ಯಾಪಾರಿಗಳನ್ನು ರಾಜ್ಯ ಮತ್ತು ಹೊರರಾಜ್ಯಗಳಿಂದ ಆಕರ್ಷಿಸುತ್ತಿದೆ. ದೂರದ ಊರುಗಳಿಂದ ಬಂದವರಿಗೆ ಊಟ ವಸತಿ ಸೌಲಭ್ಯವನ್ನು ಕಲ್ಪಿಸಿಕೊಡುವ ಜವಾಬ್ದಾರಿಯನ್ನು ಹೋಟೇಲುಗಳು ನಿರ್ವಹಿಸುತ್ತವೆ. ಜಿಲ್ಲೆಯ ಪಟ್ಟಣ ಪ್ರದೇಶಗಳಲ್ಲಿರುವ ಹೋಟೇಲುಗಳು ಊಟ ಮತ್ತು ವಸತಿ ಸೌಲಭ್ಯವನ್ನು ಹೊಂದಿದ್ದು, ಗ್ರಾಮಾಂತರ ಪ್ರದೇಶಗಳಲ್ಲಿರುವ ಹೋಟೇಲುಗಳಲ್ಲಿ ಊಟದ ಸೌಲಭ್ಯವಿದ್ದರೂ, ವಸತಿ ಸೌಲಭ್ಯವಿರುವುದಿಲ್ಲ. ಅಲ್ಲಿ ತಿನ್ನಲು ಅಲ್ಪ ಪ್ರಮಾಣದ ತಿಂಡಿತಿನಿಸು ಮತ್ತು ಕುಡಿಯಲು ಕಾಫಿ, ಟೀ ಮಾತ್ರ ದೊರಕುವುದು. ನಗರ ಪ್ರದೇಶದಲ್ಲಿರುವ ಹೋಟೇಲುಗಳಲ್ಲಿ ಮ್ಯಾನೇಜರ್, ಕ್ಯಾಷಿಯರ್, ಅಡಿಗೆ ಮಾಡುವವರು, ಸಿಹಿತಿಂಡಿ ತಯಾರಿಸುವವರು, ತಿಂಡಿ ತಿನಿಸುಗಳನ್ನು ಗಿರಾಕಿಗಳಿಗೆ ತಂದುಕೊಡುವವರು, ಊಟದ ಟೇಬಲ್ ಮತ್ತು ಲೋಟ ತಟ್ಟೆ ಪಾತ್ರೆಗಳನ್ನು ಸ್ವಚ್ಛಗೊಳಿಸುವವರು ಮೊದಲಾದವರಿಗೆ ಉದ್ಯೋಗ ಕಲ್ಪಿಸಿಕೊಡುತ್ತಿರುವುದರಿಂದ ಹೋಟೆಲ್‌ಗಳನ್ನು ಉದ್ಯಮ ವ್ಯಾಪ್ತಿಗೆ ಸೇರಿಸಲಾಗಿದೆ. ಗ್ರಾಮಾಂತರ ಪ್ರದೇಶದಲ್ಲಿರುವ ಕೆಲವು ಹೋಟೇಲುಗಳಲ್ಲಿ ಸ್ವಚ್ಛಗೊಳಿಸುವ ಕೆಲಸದರನ್ನುಳಿದು ಎಲ್ಲಾ ಕೆಲಸಗಳನ್ನು ಮಾಲೀಕರೇ ನಿರ್ವಹಿಸುತ್ತಾರೆ. ಗ್ರಾಮಾಂತರ ಪ್ರದೇಶದ ಇನ್ನು ಕೆಲವು ಹೋಟೇಲುಗಳಲ್ಲಿ ಮಾಲೀಕರೇ ತನ್ನೆಲ್ಲಾ ಕೆಲಸಗಳ ಜೊತೆಗೆ ಲೋಟ ತಟ್ಟೆಗಳ ಸ್ವಚ್ಛಗೊಳಿಸುವ ಕೆಲಸವನ್ನೂ ಮಾಡುತ್ತಾರೆ. ಜಿಲ್ಲೆಯ ಗ್ರಾಮಾಂತರ ಪ್ರದೇಶದ ಬಹುಸಂಖ್ಯಾತ ಹೋಟೇಲುಗಳು "ಏಕವ್ಯಕ್ತಿ"ಯ ಉದ್ಯಮವಾಗಿ ಕಾರ್ಯನಿರ್ವಹಿಸುತ್ತಿವೆ. ಹೆಚ್ಚಿನ ವಿವಗಳಿಗೆ ಕೋಷ್ಟಕ ೫.೨೫ ಅನ್ನು ನೋಡಿ.

**ಕೋಷ್ಟಕ ೫.೨೫: ಜಿಲ್ಲೆಯಲ್ಲಿ ೩೧–೩–೨೦೧೨ ರಲ್ಲಿದ್ದ ತಾಲೂಕುವಾರು ಹೋಟೇಲುಗಳು ಮತ್ತು ಅವುಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಕಾರ್ಮಿಕರ ವಿವರ**

| ಕ್ರಸಂ | ತಾಲೂಕು | ಹೋಟೇಲುಗಳ ಸಂಖ್ಯೆ | ಕಾರ್ಮಿಕರ ಸಂಖ್ಯೆ |
|---|---|---|---|
| ೧. | ಚಾಮರಾಜನಗರ | ೧೫ | ೧೨೦ |
| ೨. | ಕೊಳ್ಳೇಗಾಲ | ೧೫ | ೬೫ |
| ೩. | ಯಳಂದೂರು | ೧೦ | ೧೫ |
| ೪. | ಗುಂಡ್ಲುಪೇಟೆ | ೩೦ | ೨೨೦ |
| | ಒಟ್ಟು | ೭೦ | ೪೨೦ |

*ಆಧಾರ: ಕಾರ್ಮಿಕ ಇಲಾಖೆ, ಚಾಮರಾಜನಗರ.*

## ಕೈಗಾರಿಕಾ ಬೆಳವಣಿಗೆಗಿರುವ ಅವಕಾಶಗಳು

ಜಿಲ್ಲೆಯು ವ್ಯವಸಾಯ(ಕೃಷಿ) ಪ್ರಧಾನವಾಗಿರುವುದರಿಂದ ವ್ಯವಸಾಯೋತ್ಪನ್ನಗಳನ್ನು ಉಪಯೋಗಿಸಿಕೊಂಡು ಅಕ್ಕಿಗಿರಣಿ ಸ್ಥಾಪನೆ, ಅಡಿಕೆಪಟ್ಟೆ (ಎಲೆ)ಯಿಂದ ಲೋಟ, ತಟ್ಟೆ ತಯಾರಿಕೆ, ಅಡಿಕೆಪುಡಿ (ಸುಪಾರಿ) ತಯಾರಿಸುವುದು, ನಾರಿನ ಉತ್ಪನ್ನಗಳು, ಬೇಕರಿ ಉತ್ಪನ್ನ, ಸಾಫ್ಟ್‌ಡ್ರಿಂಕ್ಸ್ ತಯಾರಿಸುವುದು, ಕಾಫಿಪುಡಿ ತಯಾರಿಸುವುದು, ಹಿಟ್ಟಿನ ಗಿರಿಣಿ ತೆರೆಯುವುದು, ಚಲಿಸುವ ಹಿಟ್ಟಿನಗಿರಣಿ ತೆರೆಯುವುದು, ಐಸ್‌ಕ್ರೀಂ ತಯಾರಿಕೆ, ಮೆಣಸಿನಪುಡಿ ಮತ್ತು ಸಾಂಬರುಪುಡಿ ತಯಾರಿಕೆ, ಹಪ್ಪಳ, ಜಾಮ್, ಉಪ್ಪಿನಕಾಯಿ, ಬಾಳೆಹಣ್ಣಿನ ಚಿಪ್ಸ್, ಆಲೂಗಡ್ಡೆ ಚಿಪ್ಸ್ ತಯಾರಿಕೆ, ಕಡಲೆಕಾಯಿ ಮತ್ತು ಸೂರ್ಯಕಾಂತಿ ಎಣ್ಣೆ ತೆಗೆಯುವುದು, ಕಡಲೆಕಾಯಿ ಹಿಂಡಿ ತೆಗೆಯುವುದು, ತೆಂಗಿನಪುಡಿ, ಹರಿಶಿನಪುಡಿ ತಯಾರಿಸುವುದು, ಜ್ಯೂಸ್ ತಯಾರಿಕೆ, ಜೇನುತುಪ್ಪ ಸಂಸ್ಕರಣೆ, ಹಾಲಿನ ಉತ್ಪನ್ನಗಳು, ಬೆಲ್ಲ ತಯಾರಿಕೆ, ಪ್ಲೋರಿಕಲ್ಚರ್, ಜೇನುಸಾಕಣೆ ಮೊದಲಾದವುಗಳ ಬೆಳವಣಿಗೆಗೆ ಜಿಲ್ಲೆಯಲ್ಲಿ ಹೆಚ್ಚಿನ ಅವಕಾಶವಿದೆ.

ಹತ್ತಿ ಮತ್ತು ರೇಷ್ಮೆ ಉತ್ಪಾದನೆಗೆ ಸಂಬಂಧಿಸಿದಂತೆ ಸಿದ್ಧ ಉಡುಪುಗಳ ತಯಾರಿಸುವ ಘಟಕಗಳು, ಟೈಲರಿಂಗ್, ರೇಷ್ಮೆಹುಳು ಸಾಕಣೆ, ರೇಷ್ಮೆದಾರ (ಎಳೆ) ತೆಗೆಯುವುದು, ರೇಷ್ಮೆದಾರ ಹುರಿಮಾಡುವುದು, ರೇಷ್ಮೆ ಬಟ್ಟೆ, ಉಣ್ಣೆಬಟ್ಟೆ, ಕಂಬಳಿ ತಯಾರಿಕೆ, ಕೈಮಗ್ಗ ಮತ್ತು ವಿದ್ಯುತ್ ಮಗ್ಗಗಳ ಸ್ಥಾಪನೆ, ಮೊದಲಾದ ಉದ್ಯಮಗಳನ್ನು ಜಿಲ್ಲೆಯಲ್ಲಿ ತೆರೆದು ಲಾಭದಾಯಕವಾಗಿ ನಡೆಸಬಹುದು.

ಕುಶಲಕರ್ಮಿಗಳ ಅಥವಾ ಕಸುಬುದಾರರ ಉದ್ದಿಮೆಗಳಾದ ಕಮ್ಮಾರಿಕೆ, ಕುಂಬಾರಿಕೆ, ಮರದಿಂದ ಪೀಠೋಪಕರಣಗಳ ತಯಾರಿಕೆ, ಚಿನ್ನ ಬೆಳ್ಳಿ ಒಡವೆಗಳ ತಯಾರಿಕೆ, ಪೊರಕೆ ತಯಾರಿಕೆ, ಬಿದಿರಿನಿಂದ ಬುಟ್ಟಿ, ಚಂದ್ರಿಕೆ ಮೊದಲಾದವುಗಳ ತಯಾರಿಕಾ ಘಟಕಗಳಿಗೆ ಜಿಲ್ಲೆಯಲ್ಲಿ ಹೆಚ್ಚಿನ ಅವಕಾಶವಿದ್ದು, ಕಸುಬುದಾರರ ಉದ್ದಿಮೆಗಳನ್ನು ಲಾಭದಾಯಕಗಳನ್ನಾಗಿ ಮಾಡಬಹುದು. ರಾಸಾಯನಿಕ ಮತ್ತು ಪ್ಲಾಸ್ಟಿಕ್ ವ್ಯಾಪ್ತಿಯಲ್ಲಿ ಅಗರಬತ್ತಿ, ಕರ್ಪೂರ, ಕ್ಲೀನಿಂಗ್ ಪೌಡರ್, ಪ್ಲಾಸ್ಟಿಕ್ ಕಪ್ಪು, ಸೀಗೆಪುಡಿ, ಪ್ರೈಮರ್, ಟೈರ್ ರಿಟ್ರೇಡಿಂಗ್ ಮೊದಲಾದ ಘಟಕಗಳು ಜಿಲ್ಲೆಯ ಆಶಾದಾಯಕ ಉದ್ದಿಮೆಗಳೆನಿಸಿಕೊಳ್ಳುತ್ತವೆ. ಎಲೆಕ್ಟ್ರೀಕಲ್ ಮತ್ತು ಎಲೆಕ್ಟ್ರಾನಿಕ್ಸ್ ಉಪಕರಣಗಳಾದ ಟೆಲಿವಿಷನ್, ರೇಡಿಯೋ, ವಿದ್ಯುತ್ ಉಪಕರಣಗಳ ತಯಾರಿಕೆ, ಬ್ಯಾಟರಿ ರಿಚಾರ್ಜ್ ಮತ್ತು ರಿಪೇರಿ, ಸೋಲಾರ್ ವಾಟರ್ ಹೀಟರ್‌ಗಳಿಗೆ ಜಿಲ್ಲೆಯಲ್ಲಿ ಹೆಚ್ಚಿನ ಬೇಡಿಕೆಯಿದೆ. ಖನಿಜ ಆಧಾರಿತ ಘಟಕಗಳಿಗೆ ಸಂಬಂಧಿಸಿದಂತೆ ಗ್ರಾನೈಟ್ ತುಂಡರಿಸುವುದು ಮತ್ತು ಪಾಲಿಷ್ ಮಾಡುವುದು, ಜೆಲ್ಲಿ ತಯಾರಿಸುವುದು, ಮೊಸಾಯಿಕ್ ಟೈಲ್ಸ್, ಟೇಬಲ್ ಮೌಲ್ಡೆಡ್ ಇಟ್ಟಿಗೆ ಮೊದಲಾದವುಗಳು ಜಿಲ್ಲೆಯಲ್ಲಿ ಲಾಭದಾಯಕ ಉದ್ದಿಮೆಗಳಾಗುತ್ತವೆ. ಹಾಲು ಸಂಸ್ಕರಣೆ, ಹಾಲು ಶೀತಲೀಕರಣ, ಪಶು ಆಹಾರ ಮೊದಲಾದವುಗಳಿಗೆ ಜಿಲ್ಲೆಯಲ್ಲಿ ಅಧಿಕ ಬೇಡಿಕೆಯಿರುವುದು.

ಮೆಕ್ಯಾನಿಕಲ್ ಆಧಾರಿತ ಘಟಕಗಳ ಪೈಕಿ ವ್ಯವಸಾಯ ಉಪಕರಣಗಳು, ಡೀಸಲ್ ಎಂಜಿನ್ ರಿಪೇರಿ, ಜನರಲ್ ಇಂಜಿನಿಯರಿಂಗ್ ವ್ಯಾಪ್ತಿಯಲ್ಲಿನ ರಿಪೇರಿ ಕೆಲಸ, ಸ್ಟೀಲ್ ಪೀಠೋಪಕರಣಗಳ ತಯಾರಿಕೆ ಮೊದಲಾದವುಗಳ ಬೆಳವಣಿಗೆಗೆ ಜಿಲ್ಲೆಯಲ್ಲಿ ಹೆಚ್ಚಿನ ಅವಕಾಶವಿದೆ. ಸಾಗಾಣಿಕೆಗೆ ಸಂಬಂಧಿಸಿದಂತೆ ಮಿನಿಬಸ್ಸುಗಳು, ಟ್ಯಾಕ್ಸಿಗಳು,

ದಿಢೀರ್ (ತ್ವರಿತ) ಆಹಾರ ತಯಾರಿಕೆ, ಕಮರ್ಷಿಯಲ್ ಕಾಂಪ್ಲೆಕ್ಸ್‌ಗಳಿಗೆ ಜಿಲ್ಲೆಯಲ್ಲಿ ಹೆಚ್ಚಿನ ಬೇಡಿಕೆಯಿದೆ. ಪ್ರಿಂಟಿಂಗ್ ಮತ್ತು ಬುಕ್ ಬೈಂಡಿಂಗ್, ಸ್ಕ್ರೀನ್ ಪ್ರಿಂಟಿಂಗ್, ಡಿ.ಟಿ.ಪಿ. ಪೇಪರ್ ಬ್ಯಾಗ್ಸ್ ಮತ್ತು ಕವರ್‌ಗಳು, ನೋಟ್‌ಬುಕ್‌ಗಳು ಮೊದಲಾದವುಗಳ ತಯಾರಿಕೆಗೆ ಜಿಲ್ಲೆಯಲ್ಲಿ ಹೆಚ್ಚಿನ ಅವಕಾಶವಿದೆ.

ಆಟೋಮೊಬೈಲ್‌ಗಳ ರಿಪೇರಿ, ಟ್ರಾಕ್ಟರ್‌ಗಳ ರಿಪೇರಿ, ದ್ವಿಚಕ್ರವಾಹನಗಳ ರಿಪೇರಿ, ಸೆಕ್ಯೂರಿಟಿ ಸೇವೆ, ಫೋಟೋ ಸ್ಟುಡಿಯೋ, ಝೆರಾಕ್ಸ್, ಎಸ್.ಟಿ.ಡಿ. ಐ.ಎಸ್.ಡಿ. ಮತ್ತು ಫ್ಯಾಕ್ಸ್ ಸೆಂಟರ್, ಕಂಪ್ಯೂಟರ್ ಟ್ರೈನಿಂಗ್, ಸೈಬರ್‌ಕೆಫೆ ಮೊದಲಾದವುಗಳು ಸ್ಥಳೀಯರ ಬೇಡಿಕೆಯನ್ನು ಹೆಚ್ಚಿಸುವುದರ ಮೂಲಕ ಉದ್ಯೋಗಾವಕಾಶವನ್ನು ಹೆಚ್ಚಿಸಿಕೊಳ್ಳಬಹುದು.

*****